


ಕರ್ನಾಟಕ ಸ್ಕೌಟ್ ಮತ್ತು ಗೈಡ್
ತಿಂಗಳ ವಾರ್ತಾಪತ್ರಿಕೆ

Karnataka
# Scout & Guide
Monthly News Magazine

Vol -21 | Issue-02 | February 2024 | ₹ 10/-




2024 ಫೆಬ್ರವರಿ 8 ರಿಂದ 12 ರವರೆಗೆ "ಶಾಹೀನ್ ಶಿಕ್ಷಣ ಸಂಸ್ಥೆ, ಶಾಹೀನ್ ನಗರ, ಬೀದರ ಜಿಲ್ಲೆ ಇಲ್ಲಿ ನಡೆದ "ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೆಟ್"ನ ಉದ್ಘಾಟನಾ ಕಾರ್ಯಕ್ರಮದ ಸಂದರ್ಭದಲ್ಲಿ ಭಾಗವಹಿಸಿದ ಅತಿಥಿಗಳು, ಸ್ಕೌಟ್ಸ್-ಗೈಡ್ಸ್ ಪದಾಧಿಕಾರಿಗಳು, ಸ್ಕೌಟ್ಸ್-ಗೈಡ್ಸ್‌ಗಳು, ರೋವರ್ಸ್-ರೇಂಜರ್ಸ್‌ಗಳು ಹಾಗು ಜಾಂಬೋರೇಟ್‌ನಲ್ಲಿ ಭಾಗವಹಿಸಿದವರೆಲ್ಲಾ 'ಭಾರತದ ಸಂವಿದಾನ ಪೀಠಿಕೆ'ಯ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಮ.ಘ.ಚ ನಾಡೋಜ ಡಾ. ಬಸವಲಿಂಗ ಪಟ್ಟದೇವರು, ಅಧ್ಯಕ್ಷರು, ಅನುಭವ ಮಂಟಪ, ಬಸವಕಲ್ಯಾಣ, ಹಿರಿಯ ಸಾಹಿತಿಗಳಾದ ನಾಡೋಜ ಡಾ. ಗೊ.ರು. ಚನ್ನಬಸಪ್ಪ, ರಾಜಯೋಗಿನಿ ಬ್ರಹ್ಮಕುಮಾರಿ ಪ್ರತಿಮಾ ಬೆಹನ್‌ಜಿ, ಮುಖ್ಯಸ್ಥರು, ಬ್ರಹ್ಮಾಕುಮಾರೀಸ್ ಪಾವನಧಾಮ, ಬೀದರ್, ಫಾದರ್ ಡಿ.ಎಸ್ ನೆಲ್ಸನ್ ಸುಮಿತ್ರಾ, ಧರ್ಮಗುರುಗಳು, ಮೌಲಾನ ಮೋನಿಸ್ ಕಿರ್‌ಮಾನಿ, ಧರ್ಮಗುರುಗಳು, ಶ್ರೀ ಬಸವರಾಜ ಪಾಟೀಲ್ ಸೇಡಂ, ಸಂಯೋಜಕರು, ವಿಕಾಸ್ ಅಕಾಡೆಮಿ, ಕಲಬುರಗಿ, ಶಾಹೀನ್ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ಅಬ್ದುಲ್ ಖದೀರ್, ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಸ್ಕೌಟ್ ಆಯುಕ್ತರಾದ ಶ್ರೀ ಎಂ.ಎ. ಖಾಲಿದ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಸಿ.ಬಿ. ಪಾಟೀಲ್ ಓಕಳಿ, ಶ್ರೀ ಜಿ.ಬಿ. ಮನ್ನಿಕೇರಿ ಮತ್ತು ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.




ಫೆಬ್ರವರಿ 11 ರಂದು ಬೀದರ್ ಶಾಹೀನ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ 'ಕಲ್ಯಾಣ ಕರ್ನಾಟಕದ ಜಾಂಬೋರೆಟ್'ನ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೀ ಭಗವಂತ ಖೂಬಾ, ಮಾನ್ಯ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಮೂಲಖಾತೆ ರಾಜ್ಯ ಸಚಿವರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಬೀದರ್ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಮತ್ತು ಶಾಹೀನ್ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷರಾದ ಡಾ. ಅಬ್ದುಲ್ ಖದೀರ್ ಹಾಗು ಶ್ರೀ ವಿಜಯ ಸಿಂಗ್ ಉಪಸ್ಥಿತರಿದ್ದಾರೆ.

ಬೀದರ್ ಶಾಹೀನ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಕಲ್ಯಾಣ ಕರ್ನಾಟಕದ ಜಾಂಬೋರೆಟ್‌ನಲ್ಲಿ ಫೆಬ್ರವರಿ 9 ರಂದು ಸಂಜೆ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತರಾದ ನ್ಯಾಯಮೂರ್ತಿ ಶ್ರೀ ಸಂತೋಷ ಹೆಗಡೆ ಅವರು ಸ್ಕೌಟ್ಸ್-ಗೈಡ್ಸ್‌ಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಂದರ್ಭ. ಚಿತ್ರದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ ಶ್ರೀ ಎಂ.ಎ. ಖಾಲಿದ್, ಡಾ. ಅಬ್ದುಲ್ ಖದೀರ್ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ ಶ್ರೀ ಬಸವಕುಮಾರ್ ಪಾಟೀಲ್, ಅಧ್ಯಕ್ಷರು, ಬಸವ ಪ್ರತಿಷ್ಠಾನ, ಬೀದರ್ ಇವರುಗಳು ಉಪಸ್ಥಿತರಿದ್ದಾರೆ.







ಫೆಬ್ರವರಿ 11 ರಂದು ನಡೆದ "ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೇಟ್‌ನ" ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಮಾನ್ಯ ಅರಣ್ಯ ಪರಿಸರ ಹಾಗು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ್ ಖಂಡ್ರೆ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಶಾಹೀನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ. ಅಬ್ದುಲ್ ಖದೀರ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ, ಸಹಾಯಕ ರಾಜ್ಯ ಆಯುಕ್ತರಾದ ಶ್ರೀ ಸಿ.ಬಿ. ಪಾಟೀಲ್ ಓಕಳಿ, ಶ್ರೀ ಅಬ್ದುಲ್ ಮುಕೀದ್, ನಿರ್ದೇಶಕರು, ಶಾಹಿನ್ ಶಿಕ್ಷಣ ಸಂಸ್ಥೆ, ಕೊಪ್ಪಳ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಹೆಚ್.ಎಂ. ಸಿದ್ದರಾಮಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಡಾ. ಭರಶೆಟ್ಟಿ ಹಾಗು ಇತರರು ಚಿತ್ರದಲ್ಲಿದ್ದಾರೆ.

**ಪೋಷಕರು**
ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**
ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**
ಕೊಂಡಜ್ಜಿ ಬ. ಷಣ್ಮುಖಪ್ಪ

**ಸಂಪಾದಕರು**
ಕೆ. ಗಂಗಪ್ಪಗೌಡ

**ಸಹಸಂಪಾದಕರು**
ಎನ್. ಶ್ರೀನಿವಾಸನ್

**ಸಂಚಾಲಕರು**
ಬಿ.ಎಸ್. ರವೀಂದ್ರ

**ಸದಸ್ಯರು**
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಚಳ್ಳಕೆರೆ ಯರ್ರಿಸ್ವಾಮಿ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ
ಡಾ. ವಸುಂಧರ ಭೂಪತಿ
ಡಾ. ಶಕುಂತಲ
ಪ್ರಭಾವತಿ ಪಾಟೀಲ್



ಸಂಚಿಕೆಯ ವಾರ್ಷಿಕ ಚಂದಾ ರೂ. 100/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 100/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.


# ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide MONTHLY NEWS MAGAZINE


Vol: 21 Issue : 02 February 2024


## ಒಳಪುಟಗಳಲ್ಲಿ...


ರಾಜ್ಯ ಮುಖ್ಯ ಆಯುಕ್ತರ ನುಡಿ ...04

ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೇಟ್–2024ರ ವರದಿ ...05

ರಾಜ್ಯ ಮಟ್ಟದ ಅಗ್ರಗಾಮಿತ್ವ ಮತ್ತು ಸಾಹಸಮಯ ತರಬೇತಿ ಶಿಬಿರ ...13

ರಾಜ್ಯ ಮಟ್ಟದ ಅಗ್ರಗಾಮಿತ್ವ ತರಬೇತಿ ಶಿಬಿರ ...14

ರಾಜ್ಯ ಮಟ್ಟದ ಕಡಲ ತೀರ ಚಾರಣ ಶಿಬಿರ ಮತ್ತು ಪ್ರಕೃತಿ ಅಧ್ಯಯನ ಶಿಬಿರ ...15

ಶ್ರದ್ಧಾಂಜಲಿ ಸಭೆ ...16

ಮಾರ್ಚ್ 2024ರ ಕಾರ್ಯಕ್ರಮಗಳು ...16

ಜಿಲ್ಲಾ ವಾರ್ತೆಗಳು ...19


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಈ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆ ಅಭಿಪ್ರಾಯ ಮತ್ತು ಸಲಹೆಗಳನ್ನು ಕಳುಹಿಸಲು ಕೋರಿಕೆ. ಇದರಿಂದ ಮಾಸಪತ್ರಿಕೆಯನ್ನು ಮತ್ತಷ್ಟು ಉತ್ತಮಗೊಳಿಸಲು ಸಹಕಾರಿಯಾಗುತ್ತದೆ. ಅಲ್ಲದೆ ತಾವು, ಸ್ಕೌಟ್–ಗೈಡ್ ಚಳವಳಿಯ ಬಗ್ಗೆ ರಚಿಸಿರುವ ಕವನಗಳು, ಸಣ್ಣ ಕತೆಗಳು, ಪ್ರಬಂಧಗಳು, ಪ್ರವಾಸ ಕಥನಗಳು, ಶಿಬಿರದ ಅನುಭವಗಳು ಇತ್ಯಾದಿಗಳನ್ನು ಕಳುಹಿಸಿಕೊಡಲು ಕೋರಿದೆ. ಇವುಗಳಲ್ಲಿ ಸೂಕ್ತ ಕಂಡವುಗಳನ್ನು ಮಾಸಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

**ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಮಹಾ ಶಿವರಾತ್ರಿಯ ಹಾರ್ದಿಕ ಶುಭಾಶಯಗಳು**

2024ರ ಫೆಬ್ರವರಿ ನಮ್ಮ ರಾಜ್ಯದ ಸ್ಕೌಟ್–ಗೈಡ್ ಚಳವಳಿಯ ಇತಿಹಾಸದಲ್ಲಿ ದಾಖಲಾಗುವ ತಿಂಗಳಾಗಿದೆ. ಬೀದರ್‌ನ ಪ್ರತಿಷ್ಠಿತ ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಕೀರ್ಣದಲ್ಲಿ ಫೆಬ್ರವರಿ 8 ರಿಂದ 12ರ ವರೆಗೆ ನಡೆದ ಪ್ರಪ್ರಥಮ "ಕಲ್ಯಾಣ ಕರ್ನಾಟಕ ಜಾಂಬೋರೇಟ್" ಅತ್ಯಂತ ಯಶಸ್ವಿಯಾಗಿ ಜರುಗಿದೆ. ಇದಕ್ಕಾಗಿ ಕಲ್ಯಾಣ ಕರ್ನಾಟಕ ಜಿಲ್ಲೆಗಳ ನಮ್ಮ ಸಂಸ್ಥೆಯ ಎಲ್ಲ ಪದಾಧಿಕಾರಿಗಳಿಗೆ, ಶಿಕ್ಷಕರಿಗೆ ಮತ್ತು ಮಕ್ಕಳಿಗೆ ಅಭಿನಂದನೆಗಳು. ಇದರ ನೇತೃತ್ವ ವಹಿಸಿ ಅತ್ಯಂತ ಮುತುವರ್ಜಿಯಿಂದ ಜಾಂಬೋರೇಟ್ ಆಯೋಜಿಸಿದ್ದ ಬೀದರ್ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಗುರಮ್ಮ ಸಿದ್ದಾರೆಡ್ಡಿ ಮತ್ತು ಜಿಲ್ಲಾ ಕಾರ್ಯದರ್ಶಿ ಡಾ. ಭರಶೆಟ್ಟಿ ಮತ್ತು ಜಿಲ್ಲೆಯ ಎಲ್ಲ ಹಂತದ ಪದಾಧಿಕಾರಿಗಳಿಗೆ, ಸಹಕಾರ ನೀಡಿದ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಜಾಂಬೋರೇಟ್‌ನ ಆತಿಥ್ಯವನ್ನು ವಹಿಸಿಕೊಂಡಿದ್ದ ಶಾಹೀನ್ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ಡಾ॥ ಅಬ್ದುಲ್ ಖದೀರ್ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಶ್ರೀಯುತರ ನೇತೃತ್ವದಲ್ಲಿ ಅಚ್ಚುಕಟ್ಟಾದ ವ್ಯವಸ್ಥೆಗಳನ್ನು ಹಾಗೂ ಊಟೋಪಚಾರವನ್ನು ಏರ್ಪಡಿಸಿದ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳಿಗೆ ಸ್ಕೌಟ್ಸ್–ಗೈಡ್ಸ್ ಸಂಸ್ಥೆಗಳ ವತಿಯಿಂದ ಅಭಿನಂದನೆಗಳು. ಜಾಂಬೋರೇಟ್‌ನಲ್ಲಿ ಏರ್ಪಡಿಸಿದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದೆ. ಕಲ್ಯಾಣ ಕರ್ನಾಟಕ ಜಿಲ್ಲೆಗಳ ಹಿಮಾಲಯ ವೃಕ್ಷಮಣಿಧಾರಿಗಳ ಸಮಾವೇಶ ಯಶಸ್ವಿಯಾಗಿದೆ. ಅರ್ಥಪೂರ್ಣವಾದ ವೈವಿಧ್ಯಮಯ ಚಟುವಟಿಕೆಗಳು, ವಿವಿಧ ಜಿಲ್ಲೆಗಳ ಸಂಸ್ಕೃತಿ ವೈಭವಗಳು ಎಲ್ಲ ಸ್ಕೌಟ್–ಗೈಡ್/ ರೋವರ್–ರೇಂಜರ್‌ಗಳಿಗೆ ಉತ್ತಮ ಅನುಭವಗಳನ್ನು ಒದಗಿಸಿರುವುದು ಸಂತೋಷದ ಸಂಗತಿ. ಒಟ್ಟಿನಲ್ಲಿ ಪ್ರಥಮ ಕಲ್ಯಾಣ ಕರ್ನಾಟಕ ಜಾಂಬೋರೇಟ್ ನಮ್ಮಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ಇನ್ನು ಮುಂದೆ ನಡೆಯಲಿರುವ ಕಲ್ಯಾಣ ಕರ್ನಾಟಕ ಸ್ಕೌಟ್ಸ್–ಗೈಡ್ಸ್ ಜಾಂಬೋರೇಟ್‌ಗಳಿಗೆ ತಮ್ಮ ಸಂಸ್ಥೆಯಿಂದ ಆರ್ಥಿಕ ನೆರವಿನ ಭರವಸೆ ನೀಡಿರುವ ಡಾ॥ ಅಬ್ದುಲ್ ಖದೀರ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಜಾಂಬೋರೇಟ್ ಅನ್ನು ಉದ್ಘಾಟಿಸುವ ಮೂಲಕ ಸ್ಕೌಟ್–ಗೈಡ್ ಚಳವಳಿಯ ಯಶಸ್ಸಿಗೆ ಆಶೀರ್ವದಿಸಿದ ನಮ್ಮೆಲ್ಲರ ಸಾಕ್ಷಿಪ್ರಜ್ಞೆ, ಡಾ. ಗೊ.ರು. ಚನ್ನಬಸಪ್ಪ ಅವರಿಗೆ ಗೌರವಪೂರ್ವಕ ಧನ್ಯವಾದಗಳು. ಕೇಂದ್ರ ಸಚಿವರಾದ ಗೌರವಾನ್ವಿತ ಶ್ರೀ ಭಗವಂತ್ ಖೂಬಾ, ರಾಜ್ಯದ ಸಚಿವರಾದ ಶ್ರೀ ಈಶ್ವರ್ ಖಂಡ್ರೆ, ನಿವೃತ್ತ ಲೋಕಾಯುಕ್ತರಾದ ನ್ಯಾಯಮೂರ್ತಿ ಎನ್. ಸಂತೋಷ್ ಹೆಗಡೆ ಅವರಂಥ ಹಲವು ಗಣ್ಯರುಗಳು ಜಾಂಬೋರೇಟ್‌ನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಕಾರ್ಯಕ್ರಮಗಳ ಘನತೆಯನ್ನು ಹೆಚ್ಚಿಸಿದ್ದಾರೆ.

ಉಡುಪಿಯಲ್ಲಿ ರಾಜ್ಯಮಟ್ಟದ ರೋವರ್ಸ್–ರೇಂಜರ್ಸ್ ಕಡಲತೀರ ಚಾರಣ ಮತ್ತು ಪ್ರಕೃತಿ ಅಧ್ಯಯನ ಶಿಬಿರವನ್ನು ಯಶಸ್ವಿಗೊಳಿಸುವ ಮೂಲಕ ಜಿಲ್ಲಾ ಸಂಸ್ಥೆ ನಮ್ಮ ಭರವಸೆಯನ್ನು ಸಾಕಾರಗೊಳಿಸಿದೆ. ಇನ್ನು ಹಲವು ಜಿಲ್ಲೆಗಳಲ್ಲಿ ಈ ತಿಂಗಳಿನಲ್ಲಿ ಜಿಲ್ಲಾ ಮಟ್ಟದ ಶಿಬಿರಗಳು ನಡೆದಿವೆ. ರಾಜ್ಯ ಪ್ರಶಸ್ತಿ ಪತ್ರಗಳ ವಿತರಣಾ ಸಮಾರಂಭಗಳನ್ನು ಆಯೋಜಿಸಿದ್ದಾರೆ. ಈ ಬೆಳವಣಿಗೆಯು ಆಶಾದಾಯಕವಾಗಿದೆ.

ಸರ್ಕಾರದ ಕಾರ್ಯಕ್ರಮವಾದ, "ಸಂವಿಧಾನ ಜಾಥಾ ಜಾಗೃತಿ ಕಾರ್ಯಕ್ರಮ"ದಲ್ಲಿ ನಮ್ಮ ಸ್ಕೌಟ್ಸ್–ಗೈಡ್ಸ್/ ರೋವರ್ಸ್–ರೇಂಜರ್ಸ್‌ಗಳು ವಿನೂತನ ಚಟುವಟಿಕೆಗಳ ಮೂಲಕ ಭಾಗವಹಿಸಿರುವುದು ಹೆಮ್ಮೆಯ ಸಂಗತಿ. ಶ್ರೀಲಂಕಾದಲ್ಲಿ ಆಯೋಜನೆಗೊಂಡಿರುವ ರಾಷ್ಟ್ರೀಯ ಸ್ಕೌಟ್ಸ್–ಗೈಡ್ಸ್ ಜಾಂಬೋರಿಯಲ್ಲಿ ಕರ್ನಾಟಕದಿಂದ 49 ಸ್ಕೌಟ್ಸ್–ಗೈಡ್ಸ್‌ಗಳು, ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದಾರೆ. ಅವರುಗಳಿಗೆ ನನ್ನ ಹಾರ್ದಿಕ ಶುಭಾಶಯಗಳು.

2024–25ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ನಮ್ಮ ಸಂಸ್ಥೆಗೆ ನಿಗಧಿತ ಅನುದಾನವನ್ನು ಒದಗಿಸಿರುವ ರಾಜ್ಯ ಸರ್ಕಾರಕ್ಕೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕೊಪ್ಪಳ ತರಬೇತಿ ಕೇಂದ್ರಕ್ಕೆ ಮತ್ತು ರಾಯಚೂರು ಜಿಲ್ಲಾ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕೆ ವಿಶೇಷ ಅನುದಾನ ನೀಡಿರುವ ಮಾನ್ಯ ಶ್ರೀ ಬಸವರಾಜ್ ರಾಯರೆಡ್ಡಿ ಅವರಿಗೆ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಂದ ಆಯಾಯ ಸ್ಥಳೀಯ ಸಂಸ್ಥೆಗಳಲ್ಲಿ ಸ್ಕೌಟ್ಸ್–ಗೈಡ್ಸ್ ಚಟುಟಿಕೆಗಳ ಬೆಳವಣಿಗೆಗೆ ಅನುದಾನವನ್ನು ದೊರಕಿಸಿಕೊಡುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯ ಗೌರವಾನ್ವಿತ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ನಮ್ಮ ಸಂಸ್ಥೆ ಆಭಾರಿಯಾಗಿರುತ್ತದೆ. ನಮ್ಮ ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳು ಸರ್ಕಾರದ ಆದೇಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂಬ ಕಳಕಳಿಯ ಮನವಿ ಮಾಡುತ್ತೇನೆ.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಸಂಸ್ಥೆಯ ವಿವಿಧ ಚಟುವಟಿಕೆಗಳಲ್ಲಿ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದ, ಸ್ಕೌಟ್ಸ್–ಗೈಡ್ಸ್‌ಗಳ ಆಸಕ್ತಿ ಮತ್ತು ಈ ಮಕ್ಕಳಿಗೆ ಅರ್ಥಪೂರ್ಣ ಕಲಿಕಾ ಅನುಭವಗಳನ್ನು ಒದಗಿಸುವ ಶಿಕ್ಷಕರುಗಳ ಪ್ರಯತ್ನ ಪ್ರಶಂಸನೀಯ. ಅವರೆಲ್ಲರೂ ರಾಜ್ಯದಲ್ಲಿ ನಮ್ಮ ಚಳವಳಿಗೆ ಮೆರಗನ್ನು ತಂದುಕೊಟ್ಟಿದ್ದಾರೆ. ಈಗಾಗಲೇ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರಿಕ್ಷಾ ವೇಳಾಪಟ್ಟಿಗಳು ಪ್ರಕಟಗೊಂಡಿದ್ದು, ಪರೀಕ್ಷೆಗಳಲ್ಲಿ ಪಾಲ್ಗೊಳ್ಳುವ ಎಲ್ಲಾ ಸ್ಕೌಟ್ಸ್–ಗೈಡ್ಸ್‌ಗಳಿಗೆ ಪರೀಕ್ಷೆಗಳನ್ನು ಎದುರಿಸುವ ಆತ್ಮ ವಿಶ್ವಾಸ ಮೂಡಲಿ ಮತ್ತು ಯಶಸ್ಸು ಸಿಗಲಿ ಎಂದು ಹಾರೈಸುತ್ತೇನೆ.

ನಮ್ಮ ಸಂಸ್ಥೆಯಲ್ಲಿ ಚೈತನ್ಯದ ಚಿಲುಮೆಯಂತಿದ್ದ, ನಮ್ಮ ಹೆಮ್ಮೆಯ ಗೈಡ್ ಕ್ಯಾಪ್ಟನ್ ಶ್ರೀಮತಿ ಕಮಲಾಕ್ಷಿ ಹೆಗಡೆ ಅವರು ಇತ್ತೀಚೆಗೆ ನಮ್ಮನ್ನಗಲಿರುವುದು ನಮ್ಮ ಸಂಸ್ಥೆಗೆ ತುಂಬಲಾರದ ನಷ್ಟವನ್ನುಂಟುಮಾಡಿದೆ. ಅನೇಕ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನ ಮಾಡಿದ್ದ ಅವರು ನೆಚ್ಚಿನ ಶಿಕ್ಷಕಿಯಾಗಿದ್ದರು. ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಕುಟುಂಬದವರಿಗೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಬೇಸಿಗೆ ಪ್ರಾರಂಭವಾಗುವ ಮೊದಲೇ ರಾಜ್ಯಾದ್ಯಂತ ನೀರಿನ ಸಮಸ್ಯೆ ಉಲ್ಬಣಗೊಂಡಿದೆ ಹಾಗಾಗಿ ನೀರಿನ ಮಿತವ್ಯಯ ಮತ್ತು ಆಹಾರದ ಸದ್ಬಳಕೆಯತ್ತ ನಾವೆಲ್ಲರೂ ಗಮನ ಹರಿಸೋಣ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)

ರಾಜ್ಯ ಮುಖ್ಯ ಆಯುಕ್ತರುಎಲ್ಲಾ

ವ್ಯರ್ಥ ಮಾಡಬೇಡಿ ಅನ್ನ
ಹಸಿದವರಿಗದೇ ಚಿನ್ನ



# "ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೇಟ್-2024"ರ ವರದಿ

ಜಿಲ್ಲಾ ಸಂಸ್ಥೆ ಬೀದರ್ ಮತ್ತು ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆ, ಬೀದರ್ ಇವರುಗಳ ಸಹಯೋಗದಲ್ಲಿ "ಮಣ್ಣಿನ ರಕ್ಷಣೆ ಜೀವನದ ಪೋಷಣೆ" ಎಂಬ ಧ್ಯೇಯ ವಾಕ್ಯದೊಂದಿಗೆ ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೋರೇಟ್ ಕಾರ್ಯಕ್ರಮವನ್ನು ಫೆಬ್ರವರಿ 08 ರಿಂದ 12ರ ವರೆಗೆ ಶಾಹೀನ್ ಪದವಿ ಪೂರ್ವ ವಿಜ್ಞಾನ ಕಾಲೇಜು, ಶಾಹೀನ್ ನಗರ, ಶಹಾಪೂರ್ ಗೇಟ್ ಹತ್ತಿರ, ಬೀದರನಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ ಮಾರ್ಗದರ್ಶನದಲ್ಲಿ ಆಯೋಜಿಸಲಾಯಿತು.

ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಅಬ್ದುಲ್ ಖದೀರ್ ರವರು ಜಾಂಬೋರೇಟ್ ಮುಖ್ಯಸ್ಥರಾಗಿ, ಬೀದರ್ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಗುರಮ್ಮ ಸಿದ್ಧಾರೆಡ್ಡಿ ರವರು ಜಾಂಬೋರೇಟ್ ಹೆಚ್ಚುವರಿ ಮುಖ್ಯಸ್ಥರಾಗಿ, ಬೀದರ್ ಜಿಲ್ಲಾ ಕಾರ್ಯದರ್ಶಿಗಳಾದ ಡಾ॥ ಹೆಚ್.ಬಿ. ಭರಶೆಟ್ಟಿ ರವರು ಜಾಂಬೋರೇಟ್ ಕಾರ್ಯದರ್ಶಿಗಳಾಗಿ, ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಯ ಸಿ.ಇ.ಓ. ಶ್ರೀ ತೌಸಿಫ್ ಮಡಿಕೇರಿ ರವರು ಜಾಂಬೋರೇಟ್‌ನ ಖಜಾಂಚಿಗಳಾಗಿ ಹಾಗೂ ಎ.ಎಸ್.ಓ.ಸಿ. ಹಾಗೂ ಕಲ್ಯಾಣ ಕರ್ನಾಟಕ ಜಿಲ್ಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಾರ್ಯಚಟುವಟಿಕೆಗಳ ಮೇಲ್ವಿಚಾರಕರಾದ ಶ್ರೀಮತಿ ಮಲ್ಲೇಶ್ವರಿ ಜುಜಾರೆ ರವರು ಜಾಂಬೋರೇಟ್‌ನ ಸಂಪೂರ್ಣ ಉಸ್ತುವಾರಿಯನ್ನು ವಹಿಸಿ, ಕಾರ್ಯನಿರ್ವಹಿಸಿದರು.

ಶ್ರೀ ರಮೇಶ ತಿಬಶೆಟ್ಟಿ ರವರು ಜಾಂಬೋರೇಟ್‌ನ ಸ್ಕೌಟ್ ಶಿಬಿರದ ನಾಯಕರಾಗಿ ಮತ್ತು ಶ್ರೀಮತಿ ಜೈಶೀಲಾ ಸುದರ್ಶನ್ ರವರು ಜಾಂಬೋರೇಟ್‌ನ ಗೈಡ್ ಶಿಬಿರದ ನಾಯಕಿಯಾಗಿ ಕಾರ್ಯನಿರ್ವಹಿಸಿದರು.

## ಜಾಂಬೋರೇಟ್‌ಗೆ ಶಿಬಿರಾರ್ಥಿಗಳ ಆಗಮನ

ಫೆಬ್ರವರಿ 07 ರಂದು ಸಂಜೆ 05 ಗಂಟೆಯಿಂದ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಾದ ಬಳ್ಳಾರಿ, ಬೀದರ್, ಕಲಬುರ್ಗಿ, ಕೊಪ್ಪಳ, ಯಾದಗಿರಿ, ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳಿಂದ ಆಗಮಿಸಿದ ಸ್ಕೌಟ್-ಗೈಡ್ ಮತ್ತು ರೋವರ್-ರೇಂಜರ್, ಗಣ್ಯರು ಹಾಗೂ ಅತಿಥಿಗಳನ್ನು ಶಾಹೀನ್ ಶಾಲೆಯ ಸ್ಕೌಟ್-ಗೈಡ್‌ಗಳು ಪುಷ್ಪಾರ್ಚನೆ ಮೂಲಕ ಸ್ವಾಗತ ಕೋರಿದರು.

## ಜಾಂಬೋರೇಟ್‌ನ ಪ್ರಥಮ ದಿನ

ಫೆಬ್ರವರಿ 08 ರಂದು ಬೆಳಿಗ್ಗೆ 09 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಜಾಂಬೋರೇಟ್ ಮುಖ್ಯಸ್ಥರಾದ ಡಾ. ಅಬ್ದುಲ್ ಖದೀರ್ ರವರು ಮತ್ತು ಜಾಂಬೋರೇಟ್ ಹೆಚ್ಚುವರಿ ಮುಖ್ಯಸ್ಥರಾದ ಡಾ. ಗುರಮ್ಮ ಸಿದ್ಧಾರೆಡ್ಡಿ ಇವರುಗಳು ತೆರೆದ ವಾಹನದಲ್ಲಿ ಜಾಂಬೋರೇಟ್ ಮೈದಾನದಲ್ಲಿ ಸ್ಕೌಟ್ ವಂದನೆ ಮಾಡುತ್ತಾ ವೀಕ್ಷಿಸಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಗೈಡ್ ಆಯುಕ್ತರು ಹಾಗೂ ಅತಿಥಿ-ಗಣ್ಯರು "ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೇಟ್ ಹಾಡನ್ನು" ಬಿಡುಗಡೆಗೊಳಿಸಿದರು. ಈ ಹಾಡಿನ ರಚನೆಯ ಸಂಪೂರ್ಣ ಜವಾಬ್ದಾರಿಯನ್ನು ಜಾಂಬೋರೇಟ್ ಶಿಬಿರದ ನಾಯಕಿಯಾದ ಶ್ರೀಮತಿ ಜೈಶೀಲಾ ಸುದರ್ಶನ್‌ರವರು ವಹಿಸಿದ್ದು ಅವರನ್ನು ಅಭಿನಂದಿಸಲಾಯಿತು.



ಜಾಥಾ: ಬೆಳಿಗ್ಗೆ 10:00 ಗಂಟೆಗೆ ಬೀದರ್‌ನ ನೆಹರು ಕ್ರೀಡಾಂಗಣದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಸ್ಕೌಟ್ ಆಯುಕ್ತರಾದ ಜಾಂಬೋರೇಟ್ ಮುಖ್ಯಸ್ಥರಾದ ಡಾ॥ ಅಬ್ದುಲ್ ಖದೀರ್, ಶ್ರೀ ಎಮ್.ಎ. ಖಾಲೀದ್ ರವರೊಂದಿಗೆ ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಚನ್ನಬಸಣ್ಣ ಎಸ್.ಎಲ್. ರವರು ಹಸಿರು ಧ್ವಜ ಹಾರಿಸುವುದರ ಮೂಲಕ ಬೃಹತ್ ಜಾಥಾಗೆ ಚಾಲನೆ ನೀಡಿದರು.



ಈ ಜಾಥಾವು ನೆಹರು ಕ್ರೀಡಾಂಗಣದಿಂದ ಮೋಹನ್ ಮಾರ್ಕೆಟ್ – ಹಳೆಯ ಬಸ್‌ನಿಲ್ದಾಣ –ಜಿಲ್ಲಾಧಿಕಾರಿಗಳ ಕಛೇರಿ – ಭಗತ್ ಸಿಂಗ್ ವೃತ್ತ – ಮಹಾವೀರ ವೃತ್ತದ ಮಾರ್ಗವಾಗಿ ಬಸವೇಶ್ವರ ವೃತ್ತದವರೆಗೆ ಸ್ಕೌಟ್–ಗೈಡ್ ಘೋಷ ವಾಕ್ಯಗಳೊಂದಿಗೆ ನಡೆಯಿತು.

ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ರಾಧಾ ವೆಂಕಟೇಶ್, ಶ್ರೀಮತಿ ಕೃಪಾ ವಿಜಯ್, ಶ್ರೀಮತಿ ಶಾಮಲಾ, ಶಿಬಿರದ ನಾಯಕರು – ನಾಯಕಿಯರು ಹಾಗೂ ಶಿಬಿರದ ಉಪನಾಯಕಿಯರು – ಉಪನಾಯಕರೂ ಸಹ ಭಾಗವಹಿಸಿದ್ದರು.

"ಜಿಲ್ಲಾ ವೈಭವ" ಕಾರ್ಯಕ್ರಮ: ಮಧ್ಯಾಹ್ನ 03 ಗಂಟೆಗೆ ಜಿಲ್ಲಾವಾರು ಒಂದೊಂದು ಮಳಿಗೆಯನ್ನು ನೀಡಲಾಗಿದ್ದು, ಆ ಸ್ಥಳದಲ್ಲಿ ತಮ್ಮ ತಮ್ಮ ಜಿಲ್ಲೆಯ ಐತಿಹಾಸಿಕ ಪ್ರಸಿದ್ಧ ಸ್ಥಳಗಳ ಸ್ಥಬ್ಧಚಿತ್ರಗಳು, ಜಿಲ್ಲೆಯ ವೈಭವಯುತ ಕಲೆ, ಪಾರಂಪರಿಕ ಸಂಸ್ಕೃತಿಯ ವೈಭವ, ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳ ಸ್ಥಬ್ಧ ಚಿತ್ರಗಳನ್ನು ಪ್ರದರ್ಶಿಸಿದ್ದರು. ಈ ಎಲ್ಲಾ ಜಿಲ್ಲಾ ವೈಭವ ಕಾರ್ಯಕ್ರಮವನ್ನು ಡಾ. ಬಸಲಿಂಗ ಪಟ್ಟದೇವರು, ಡಾ. ಗೊ.ರು. ಚನ್ನಬಸಪ್ಪ, ಶ್ರೀ ಪಿ.ಜಿ.ಆರ್. ಸಿಂಧ್ಯ ಮುಂತಾದ ಅತಿಥಿಗಳು ವೀಕ್ಷಿಸಿ ಪ್ರಶಂಸಿಸಿದರು.



ಸಂಜೆ 04:30ಕ್ಕೆ ಜಾಂಬೋರೇಟ್ ಧ್ವಜಾರೋಹಣದ ಬಳಿಕ ಜಾಂಬೋರೇಟ್ ಉದ್ಘಾಟನಾ ಸಮಾರಂಭವು ಡಾ॥ ಗುರಮ್ಮ ಸಿದ್ಧಾರೆಡ್ಡಿರವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಾಂಬೋರೇಟ್ ಮುಖ್ಯಸ್ಥರಾದ ಡಾ. ಅಬ್ದುಲ್ ಖದೀರ್ ರವರು ಎಲ್ಲರನ್ನು ಸ್ವಾಗತಿಸಿದರು, ಶ್ರೀ ಎಸ್.ಪಿ. ಸುಳ್ಳದ್, ಜಿಲ್ಲಾ ಸ್ಕೌಟ್ ಆಯುಕ್ತರು ಕಲಬುರಗಿ ಇವರು ಭಾರತ ಸಂವಿಧಾನದ ಪೀಠಿಕೆಯನ್ನು ಬೋಧಿಸಿ ಪ್ರಮಾಣ ಮಾಡಿಸಿದರು. ಪ್ರಾಸ್ತಾವಿಕ ನುಡಿಯನ್ನು ಡಾ॥ ಭರಶೆಟ್ಟಿ ರವರು ನೀಡಿದರು. ಶ್ರೀ ತೌಸಿಫ್, ಸಿ.ಇ.ಓ ಇವರು ರಾಜ್ಯದ ಗಣ್ಯರು ನೀಡಿದ ಶುಭ ಸಂದೇಶಗಳನ್ನು ಓದಿದರು. ಡಾ. ಗೊ.ರು. ಚನ್ನಬಸಪ್ಪ ರವರು ದೀಪ ಬೆಳಗಿಸುವುದರ ಮೂಲಕ ಜಾಂಬೋರೇಟ್ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ "ಆಯಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದಾಗ ಸಂಬಂಧಪಟ್ಟ ವ್ಯಕ್ತಿಗಳು ಹಿಗ್ಗುತ್ತಾರೆ ಅಂತಯೇ ಈ ಸ್ಕೌಟ್–ಗೈಡ್ ಉತ್ಸವ ನೋಡಿ ತಾನೂ ಹಿಗ್ಗಿದ್ದೇನೆ, ತಾನು ದೈಹಿಕವಾಗಿ ಕುಗ್ಗಿದ್ದರೂ ಮಾನಸಿಕವಾಗಿ ಹಿಗ್ಗಿದ್ದೇನೆ" ಎಂದು ಸ್ಪಷ್ಟಪಡಿಸಿದರು. 'ನಮ್ಮ ಈ ಸ್ಕೌಟ್–ಗೈಡ್ ಸಂಸ್ಥೆ 100 ವರ್ಷಗಳು ದಾಟಿದ ಇತಿಹಾಸದಲ್ಲಿ ಇದೇ ಮೊಟ್ಟ ಮೊದಲಬಾರಿಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಜಾಂಬೋರೇಟ್ ನಡೆಯುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದ್ದು ಇದೊಂದು ದಾಖಲೆಯ ಕಾರ್ಯಕ್ರಮ 'ಎಂದು ಶ್ಲಾಘಿಸಿದರು. 'ತಾನು 60 ವರ್ಷಗಳಿಂದ ಕಲ್ಯಾಣ ಕರ್ನಾಟಕದೊಡನೆ ಸಂಬಂಧವನ್ನಿಟ್ಟುಕೊಂಡು ಬಂದಿದ್ದೇನೆ ಎಂದು ತಿಳಿಸಿ, ನಮ್ಮ ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮತ್ತು ಸ್ಕೌಟ್–ಗೈಡ್ ಬಂಧುಗಳು ತನ್ನ ಬಗ್ಗೆ ತೋರಿಸಿರುವಂತಹ ಅಭಿಮಾನ ಉತ್ತಮವಾದದ್ದು, ಹಾಗಾಗಿ ತಾನು ಈ ಉತ್ಸವಕ್ಕೆ ಬಂದಿದ್ದೇನೆ' ಎಂದು ಉತ್ಸಾಹದ ನುಡಿಗಳನ್ನಾಡಿದರು.

ಕಲ್ಯಾಣ ಕರ್ನಾಟಕ ವಿಭಾಗದಲ್ಲಿ ಸ್ಕೌಟ್–ಗೈಡ್‌ಗಳು ಬೆಳೆಯಬೇಕೆಂದು ಮಕ್ಕಳಿಗೆ ಉಚಿತ ಸಮವಸ್ತ್ರ ನೀಡಿ, ವಿಭಾಗದ ಸ್ಕೌಟ್–ಗೈಡ್ ಶಿಕ್ಷಕರಿಗೆ ತರಬೇತಿ ನೀಡಿ ಸ್ಕೌಟ್/ಗೈಡ್ ಚಟುವಟಿಕೆಗಳು ರಾಜ್ಯದಲ್ಲಿ ಗುರುತಿಸಿಕೊಳ್ಳುವ ಹಾಗೆ ಮಾಡಿರುವಂತಹ ಶ್ರೀ ಬಸವರಾಜ್ ಪಾಟೀಲ್ ಸೇಡಂ ರವರು ತಮ್ಮ ಭಾಷಣದಲ್ಲಿ "ಕಲ್ಯಾಣ ಕರ್ನಾಟಕದಲ್ಲಿ ಮೊಟ್ಟ ಮೊದಲಬಾರಿಗೆ ಈ ಜಾಂಬೋರೇಟ್ ನಡೆಸಲು ಅವಕಾಶ ಮಾಡಿಕೊಟ್ಟಿರುವ ಕರ್ನಾಟಕ ಸ್ಕೌಟ್–ಗೈಡ್‌ನವರಿಗೆ ಮತ್ತು ವಿಶೇಷವಾಗಿ ಆದರಣೀಯ

ಶ್ರೀ ಪಿ.ಜಿ.ಆರ್. ಸಿಂಧ್ಯ ರವರಿಗೆ ತಮ್ಮ ಧನ್ಯವಾದಗಳನ್ನು ತಿಳಿಸಿದರು. ಮಕ್ಕಳೆಲ್ಲ ಭಾಗವಹಿಸಿರುವ ಬೀದರ್ ಜಿಲ್ಲೆಯು ಮಹಾಶರಣ ಬಸವಣ್ಣ, ಅಕ್ಕಮಹಾದೇವಿ ಹಾಗೂ ಅಲ್ಲಮಪ್ರಭುಗಳ ಕರ್ಮ ಭೂಮಿಯಾಗಿರುವುದನ್ನು ತಿಳಿಸಿ, ಅವರಿಂದ ಕಲಿಯಬೇಕಾದ ಪಾಠ ಕಾಯಕ ಹಾಗೂ ದುಡಿಮೆ ಎಂಬುದನ್ನು ಸ್ಪಷ್ಟಪಡಿಸಿದರು. ಅದೇ ರೀತಿಯಾಗಿ ಬೀದರ್ ಜಿಲ್ಲೆಯ ಜಗತ್ಪ್ರಸಿದ್ಧಿ ನೃಪತುಂಗ ಚಕ್ರವರ್ತಿಯವರು, "ಪವಮಾನ ಪವಮಾನ" ಎಂದು ಹನುಮಂತರ ಮೇಲೆ ಹಾಡು ರಚಿಸಿರುವ ರಾಯಚೂರು ಜಿಲ್ಲೆಯ ವಿಜಯದಾಸರು, ಕಾಯಕ ಮಾಡುತ್ತಾ ದೇವರಾದ ಸಜ್ಜಲ ಗುಡ್ಡದ ಶರಣಮ್ಮ, ವಿಜಯನಗರ ಶ್ರೀಕೃಷ್ಣ ದೇವರಾಯರು ಜನಿಸಿದ ಭೂಮಿ, ಅದೇ ರೀತಿ ಶ್ರೀರಾಮನ ಭಂಟರಾಗಿರುವ ಶ್ರೀ ಆಂಜನೇಯ ಜನಿಸಿದ ಭೂಮಿ ನಮ್ಮ ಕಲ್ಯಾಣ ಕರ್ನಾಟಕ ಎಂದು ತಿಳಿಸಿ, ಇಂತಹ ಪುಣ್ಯಭೂಮಿಯಲ್ಲಿ ಜನಿಸಿದ ನಾವುಗಳೆಲ್ಲರು ಈ ಪುಣ್ಯ ಭೂಮಿಗೆ ಕೀರ್ತಿ ತರುವ ಮಕ್ಕಳಾಗಬೇಕು" ಎಂದು ವಿನಂತಿಸಿದರು.




ಶ್ರೀ ಪಿ.ಜಿ.ಆರ್. ಸಿಂಧ್ಯರವರು ತಮ್ಮ ಭಾಷಣದಲ್ಲಿ "ವೇದಿಕೆಯ ಮೇಲೆ ಕುಳಿತಿರುವ ಗಣ್ಯ ವ್ಯಕ್ತಿಗಳಿಗೆ ಮತ್ತು ಮೊದಲನೆಯದಾಗಿ ಗೊ.ರು. ಚನ್ನಬಸಪ್ಪರವರಿಗೆ ನಮಸ್ಕಾರಗಳನ್ನು ಸಲ್ಲಿಸಿ, ಅವರು ತಮ್ಮ 96ನೇ ವಯಸ್ಸಿನಲ್ಲಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಅವರಿಗೆ ಹಿಡಿಸುವಂತಹ ಸಾಹಿತ್ಯದ ರಚನೆಯ ಜೊತೆಗೆ ಜಾನಪದ ಕ್ಷೇತ್ರದಲ್ಲಿ ಇಡೀ ಪ್ರಪಂಚದಲ್ಲಿ ದೊಡ್ಡ ಕೀರ್ತಿಯನ್ನು ಸಂಪಾದನೆ ಮಾಡಿರುವುದನ್ನು ಸ್ಪಷ್ಟಪಡಿಸಿದರು. ಕಲ್ಯಾಣ ಕರ್ನಾಟಕ ಎಂದು ಹೆಸರು ಬರಬೇಕಾದರೆ ಗೊ.ರು. ಚನ್ನಬಸಪ್ಪ ರವರು ಕಾರಣಕರ್ತರು ಎನ್ನುವುದನ್ನು ತಿಳಿಸಿದರು. ಇಂತಹ ಒಬ್ಬ ಮಹಾನ್ ವ್ಯಕ್ತಿ ಬಂದು ಈ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿರುವುದಕ್ಕಾಗಿ ಅವರಿಗೆ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. 1996ರಲ್ಲಿ ನಡೆದಂತಹ ಜಾಂಬೋರೇಟ್‌ನಲ್ಲಿ ತಾನು ಒಬ್ಬ ಕಾರ್ಯಕರ್ತನಾಗಿ ಭಾಗವಹಿಸಿದ್ದೆನು, ಆದರೆ ಈಗ ಕಲ್ಯಾಣ ಕರ್ನಾಟಕ ಎಂದು ಹೆಸರು ಬಂದ ಮೇಲೆ ಇದು ಮೊದಲನೆಯ ಬಾರಿಗೆ ಜಾಂಬೋರೇಟ್ ಆಗುತ್ತಿದ್ದು, ತನ್ನ ಮಿತ್ರರಾದ ಶ್ರೀ ಖಾಲೀದ್ ಅವರು ಹೇಳಿದ ಹಾಗೆ "ದಿಸ್ ಇಸ್ ಎ ಟ್ರೆಂಡ್ ಸೆಟ್ಟರ್." ಮುಂದೆ ಕರಾವಳಿ ಕರ್ನಾಟಕದ ಕಾರ್ಯಕರ್ತರು ಉಡುಪಿಯಲ್ಲಿ ಮಲೆನಾಡಿನ ಜಾಂಬೋರೇಟ್ ಮಾಡುತ್ತಾರೆ ಎಂದು ಖಚಿತಪಡಿಸಿದರು. ನಮ್ಮ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಗಜಾನನ ಮನ್ನಿಕೇರಿ ರವರು ಕಿತ್ತೂರು ಜಾಂಬೋರೇಟ್ ಮಾಡಲು ಉತ್ಸುಕರಾಗಿದ್ದಾರೆಂಬುದನ್ನು ತಿಳಿಸಿದರು. ಜಗತ್ತಿನ ಇತಿಹಾಸದಲ್ಲಿ ಯಾರೂ ಸಹ ಸಾಂಸ್ಕೃತಿಕ ಜಾಂಬೋರಿಯನ್ನು 115 ವರ್ಷದಲ್ಲಿ ಯೋಚನೆ ಮಾಡಿರಲಿಲ್ಲ, ಒಬ್ಬ ಸುಸಂಸ್ಕೃತ ವ್ಯಕ್ತಿಯಾಗಿರುವ ಡಾ. ಮೋಹನ್ ಆಳ್ವರವರ ನಾಯಕತ್ವದಲ್ಲಿ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಜಾಂಬೋರಿಯನ್ನು ಭಾರತದಲ್ಲಿ – ಕರ್ನಾಟಕದಲ್ಲಿ ಯಶಸ್ವಿಯಾಗಿ ನಿರ್ವಹಿಸಿ ಇಡೀ ಪ್ರಪಂಚದಲ್ಲಿ ಹೆಸರನ್ನು ಗಳಿಸಿಕೊಟ್ಟಿದ್ದಾರೆ" ಎಂದು ತಿಳಿಸಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.

ಡಾ. ಗುರಮ್ಮ ಸಿದ್ಧಾರೆಡ್ಡಿ ರವರು ತಮ್ಮ ಅಧ್ಯಕ್ಷತೆಯ ಭಾಷಣದಲ್ಲಿ "ಸ್ಕೌಟ್–ಗೈಡ್ ಎಂಬುದು ಉತ್ತಮ ವ್ಯಕ್ತಿತ್ವವನ್ನು ಬೆಳೆಸುವ, ಹುಟ್ಟು ಸಾವಿನ ನಡುವೆ ಜೀವನವನ್ನು ಸದುಪಯೋಗ ಪಡಿಸಿಕೊಳ್ಳುವ, ಸ್ನೇಹ, ಪ್ರೇಮ, ಸಹೋದರತ್ವ, ಕ್ರಿಯಾಶೀಲತೆ ಹೀಗೆ ಅನೇಕ ಸದ್ಗುಣಗಳನ್ನು ಮಕ್ಕಳಲ್ಲಿ ಬೆಳೆಸುವ ಸಂಸ್ಥೆಯಾಗಿದೆ ಎಂದು ತಿಳಿಸಿ, ಈ ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಇಂತಹ ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಅನುಮತಿಯನ್ನು ನೀಡಿರುವುದಕ್ಕಾಗಿ ಅವರಿಗೆ ಮೊದಲನೆಯದಾಗಿ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು, ಜೊತೆಗೆ ಈ ಕಾರ್ಯಕ್ರಮ ಮಾಡಲು ಸಹಕರಿಸಿದಂತಹ ಎಲ್ಲಾ ಶಿಕ್ಷಕರಿಗೆ, ಸ್ಕೌಟ್ಸ್–ಗೈಡ್ಸ್‌ಗಳಿಗೆ ಅಭಿನಂದನೆಗಳನ್ನು ತಿಳಿಸಿದರು.

ಈ ಕಾಯಕ್ರಮದಲ್ಲಿ ಪ.ಪೂ. ಶ್ರೀ ಮ.ಘ.ಚ. ನಾಡೋಜ ಡಾ. ಬಸವಲಿಂಗ ಪಟ್ಟದೇವರು ಅಧ್ಯಕ್ಷರು, ಅನುಭವ ಮಂಟಪ, ಬಸವಕಲ್ಯಾಣ, ರಾಜಯೋಗಿನಿ ಬ್ರ.ಕು. ಪ್ರತಿಮಾ ಬೆಹನ್‌ಜೀ ಮುಖ್ಯಸ್ಥರು ಬ್ರಹ್ಮಕುಮಾರೀಸ್ ಪಾವನಧಾಮ ಬೀದರ್, ಫಾದರ್ ಡಿ.ಎಸ್. ನೆಲ್ಸನ್ ಸುಮಿತ್ರಾ ಧರ್ಮ



ಗುರುಗಳು, ಮೌಲಾನಾ ಮೋನಿಸ್ ಕಿರ್‌ಮನಿ ಧರ್ಮ ಗುರುಗಳು ಮುಂತಾದವರು ಸಾನಿಧ್ಯವನ್ನು ವಹಿಸಿದ್ದರು. ಶ್ರೀಮತಿ ಮಲ್ಲೇಶ್ವರಿ ಜುಜಾರೆ ರವರು ಈ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದ್ದು, ಶ್ರೀ ಅನಿಲ್‌ಕುಮಾರ್ ಶಾಸ್ತ್ರಿರವರು ವಂದನಾರ್ಪಣೆಯನ್ನು ಸಲ್ಲಿಸಿದರು.

**ರಸ ಸಂಜೆ ಕಾರ್ಯಕ್ರಮ:** ಸಂಜೆ 06:30ಕ್ಕೆ ರಸ ಸಂಜೆ ಕಾರ್ಯಕ್ರಮದಲ್ಲಿ ಸ್ಥಳೀಯ ಪ್ರತಿಭೆಗಳ ಪ್ರದರ್ಶನದ ಜೊತೆಗೆ ಬೀದರ್ ಜಿಲ್ಲೆಯ ಕೆಲವು ಶಾಲೆಯ ಮಕ್ಕಳು ತಂಡವಾರು ತಮ್ಮ ಜಿಲ್ಲೆಗಳ ವಿಶಿಷ್ಟ ನೃತ್ಯಗಳನ್ನು ಪ್ರದರ್ಶಿಸಿ, ಶಿಬಿರಾರ್ಥಿಗಳ ಕಣ್ಮನಗಳನ್ನು ಸಂತುಷ್ಟಿಗೊಳಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಸುಜಾತ ಪೂಜಾರಿ ರವರು ನಿರ್ವಹಿಸಿದರು.

## ಜಾಂಬೋರೇಟ್‌ನ ಎರಡನೆಯ ದಿನ (ದಿ.:09–02–2024):

ಬೆಳಿಗ್ಗೆ 06:30ಕ್ಕೆ ಬಿ.ಪಿ. ರವರ ಆರು ವ್ಯಾಯಾಮಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತದನಂತರ ಮಕ್ಕಳನ್ನು ಮೂರು ತಂಡಗಳಾಗಿ ವಿಂಗಡಿಸಿ, ಪ್ರತಿ ದಿನ ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ ಈ ಕೆಳಕಂಡಂತೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವಲ್ಲಿ ಕ್ರಮಕೈಗೊಳ್ಳಲಾಯಿತು.

**ತಂಡ 1 "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ" –** ಬೀದರ್ ಕೋಟೆ, ಗುರುನಾನಕ್ ದೇವಸ್ಥಾನ ಹಾಗೂ ಶ್ರೀ ಪಾಪನಾಶನ ಸ್ವಾಮಿ ದೇವಸ್ಥಾನಗಳ ವೀಕ್ಷಣೆ. ಸೂಕ್ತ ವಾಹನ ವ್ಯವಸ್ಥೆಯೊಂದಿಗೆ ಈ ಮೇಲ್ಕಂಡ ಸ್ಥಳಗಳನ್ನು ಭೇಟಿ ಮಾಡಲು ಸೂಕ್ತ ಕ್ರಮವಹಿಸಲಾಯಿತು.

**ತಂಡ 2 "ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮದಲ್ಲಿ ಭಾಗವಹಿಸುವುದು" –** ಕಮಾಂಡೋ ಬ್ರಿಡ್ಜ್, ಟೈರ್ ಗೋಡೆ ಹತ್ತುವುದು, ಮಂಕಿ ಕ್ರಾಲಿಂಗ್, ವೀಕ್ಷಣಾ ಗೋಪುರ ಮುಂತಾದವುಗಳು. ಶ್ರೀ ಬಾಬುರಾವ್ ನಿಂಬೂರೆ, ಜಿಲ್ಲಾ ತರಬೇತಿ ಆಯುಕ್ತರು(ಸ್ಕೌ) ಸಾಹಸವಯ ಚಟುವಟಿಕೆಗಳ ನಾಯಕತ್ವ ವಹಿಸಿದ್ದರು.



**ತಂಡ 3 "ಸ್ಕಿಲೋರಾಮ"** ಈ ಕಾರ್ಯಕ್ರಮದಲ್ಲಿ ಮೆಹಂದಿ, ರಂಗೋಲಿ, ಪೇಪರ್ ಕಟಿಂಗ್, ಕ್ಲೇ ಮೋಡಲಿಂಗ್, ಪಯೋನಿಯರಿಂಗ್ ಮೋಡಲ್ಸ್, ಬೆಂಕಿ ಇಲ್ಲದೆ ಅಡುಗೆ ಮಾಡುವುದು ಮತ್ತು ತರಕಾರಿಯಿಂದ ವಿವಿಧ ಮಾದರಿ ಸ್ಪರ್ಧೆಗಳನ್ನೊಳಗೊಂಡಂತೆ ಅನೇಕ ಸ್ಪರ್ಧಾ ಚಟುವಟಿಕೆಗಳನ್ನು ಏರ್ಪಡಿಸಲಾಗಿತ್ತು.

**ರಸಪ್ರಶ್ನೆ ಕಾರ್ಯಕ್ರಮ:** ಶ್ರೀ ನಬಿ ಬಾಗ್ವಾನ್ ರವರ ನಾಯಕತ್ವದಲ್ಲಿ 'ಪೇಪರ್ ಲೆಸ್ ಕ್ವಿಜ್' ಕಾರ್ಯಕ್ರಮವನ್ನು ಆಯೋಜನೆಮಾಡಲಾಗಿತ್ತು.





**ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ:** ಬೀದರ್ ಜಿಲ್ಲೆಯ ಅಗ್ನಿಶಾಮಕ ದಳದವರು ವಿವಿಧ ಅಗ್ನಿ ಅವಘಡಗಳು ಸಂಭವಿಸಿದಾಗ ಯಾವ ವಿಧಾನದಿಂದ ಅಗ್ನಿ ಶಮನಮಾಡಬೇಕು ಹಾಗೂ ಅಗ್ನಿ ದುರಂತದಲ್ಲಿ ಸಿಲುಕಿಕೊಂಡವರನ್ನು ಹೇಗೆ ರಕ್ಷಿಸಬೇಕು ಎಂಬುದನ್ನು ಪ್ರಸ್ತುತಪಡಿಸಿದರು. ಹಾಗೆಯೇ ಬೀದರ್ ಜಿಲ್ಲಾ ಪೊಲೀಸ್ ಇಲಾಖೆಯವರು ಪೋಕ್ಸೋ ಕಾಯ್ದೆ, ಸೈಬರ್ ಅಪರಾಧ, ಪೊಲೀಸ್ ಇಲಾಖೆಯಲ್ಲಿ ಬಳಸಲಾಗುವ ಅತ್ಯಾಧುನಿಕ ಆಯುಧಗಳು, ಸಂಚಾರ ನಿಯಮಗಳ ಕುರಿತು ಮಕ್ಕಳಿಗೆ ಮಾಹಿತಿ ನೀಡಿದರು. ಮೂರು ದಿವಸಗಳಲ್ಲೂ ತಂಡವಾಗಿ ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಹೊಂದಿದರು.



**ವಿವಿಧ ಮಾಹಿತಿ ಕೇಂದ್ರಗಳು :** ಸೋಲಾರ್ ತಂತ್ರಜ್ಞಾನದ ಮಾಹಿತಿ, ಸುಸ್ಥಿರ ಅಭಿವೃದ್ಧಿಯ ಗುರಿಗಳು ಹಾಗೂ ಸಿ.ಪಿ.ಆರ್. ತರಬೇತಿಯ ಬಗ್ಗೆ ಮಕ್ಕಳಿಗೆ ಮತ್ತು ಶಿಬಿರಾರ್ಥಿಗಳಿಗೆ ಮಾಹಿತಿಗಳನ್ನು ನೀಡಲಾಯಿತು.

ಮದ್ಯಾಹ್ನ 03:00ಕ್ಕೆ "ದೈಹಿಕ ಶಿಕ್ಷಣದ ಪ್ರದರ್ಶನ" ಕಾರ್ಯಕ್ರಮದಲ್ಲಿ 7 ಜಿಲ್ಲೆಗಳಿಂದ 7 ತಂಡಗಳು ಡಂಬಲ್ಸ್, ಹೂಪ್ಸ್, ರಿಂಗ್ಸ್, ಡ್ರಮ್ಸ್, ಸ್ಕಿಪ್ಪಿಂಗ್ ರೋಪ್ ಮತ್ತು ಇತ್ಯಾದಿ ಸಾಮಾಗ್ರಿಗಳನ್ನು ಬಳಸಿ ಉತ್ತಮ ಪ್ರದರ್ಶನವನ್ನು ನೀಡಿದರು.

ಸಂಜೆ 04:30 ಗಂಟೆಯಿಂದ 6.30 ರವರೆಗೆ ನಿವೃತ್ತ ಲೋಕಾಯುಕ್ತ ಶ್ರೀ ಸಂತೋಷ್ ಹೆಗಡೆ ಮತ್ತು ರಾಷ್ಟ್ರಪ್ರಶಸ್ತಿ ಪಡೆದ ಬೆಂಗಳೂರಿನ ಕು. ರಿಷಿ ಶಿವಕುಮಾರ್ ರವರೊಂದಿಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ವಿದ್ಯಾರ್ಥಿಗಳು ಹೆಚ್ಚು ಉತ್ಸಾಹದಿಂದ ಭಾಗವಹಿಸಿದ್ದರು.








## ಜಾಂಬೋರೇಟ್‌ನ ಮೂರನೆಯ ದಿನ (ದಿ.:10–02–2024):

ಬೆಳಿಗ್ಗೆ 06:30 ಗಂಟೆಗೆ ಯೋಗ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಯೋಗ ಸಾಧಕರಾದ ಶ್ರೀ ಆನಂದ ಮೊಳಕೇರ ಹಾಗೂ ಶ್ರೀ ಯೋಗೇಂದ್ರ ಯದಲಾಪುರೆ ರವರು ಪ್ರಾಣಾಯಾಮ, ದ್ಯಾನ, ಯೋಗದ ವಿವಿಧ ಪ್ರಕಾರಗಳನ್ನು ತಿಳಿಸಿ ಮಾರ್ಗದರ್ಶನ ನೀಡಿದರು.

ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ ನಿಗಧಿಪಡಿಸಿದಂತೆ ತಂಡವಾರು "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ, ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮ, ಸ್ಕಿಲೋರಾಮ, ರಸಪ್ರಶ್ನೆ ಕಾರ್ಯಕ್ರಮ, ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ಹಾಗೂ ವಿವಿಧ ಮಾಹಿತಿ ಕೇಂದ್ರಗಳು" ಸ್ಪರ್ಧೆ/ ಚಟುವಟಿಕೆಗಳಲ್ಲಿ ಭಾಗವಹಿಸಿದರು.

ಮಧ್ಯಾಹ್ನ 03:30 ಗಂಟೆಯಿಂದ "ಜಾತ್ರಾ ಉತ್ಸವ" ಕಾರ್ಯಕ್ರಮದಲ್ಲಿ ಆಯಾಯ ಜಿಲ್ಲೆಗಳ ಎಲ್ಲರೂ ಪ್ರತಿ ಜಿಲ್ಲೆಯಿಂದ ತಮ್ಮ ತಮ್ಮ ಜಿಲ್ಲೆಯಲ್ಲಿ ನಡೆಯುವ ಪ್ರಸಿದ್ಧ ಜಾತ್ರೋತ್ಸವಗಳನ್ನು ಪ್ರದರ್ಶಿಸಿದರು. ಸಂಜೆ "ಶಿಬಿರಾಗ್ನಿ" ಕಾರ್ಯಕ್ರಮದಲ್ಲಿ ದೇಶಭಕ್ತಿ ನೃತ್ಯ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿದ್ದು, ಯಶಸ್ವಿಯಾಗಿ ನಿರ್ವಹಿಸಲಾಯಿತು.

## ಜಾಂಬೋರೇಟ್‌ನ ನಾಲ್ಕನೆಯ ದಿನ (ದಿ.:11–02–2024) :

ಬೆಳಿಗ್ಗೆ 06:30ಕ್ಕೆ "ಏರೋಬಿಕ್ ವ್ಯಾಯಾಮ" ಕಾರ್ಯಕ್ರಮವನ್ನು ಶ್ರೀಮತಿ ಮೆಹರ್ ಸುಲ್ತಾನಾ ರವರು ಉದ್ಘಾಟನೆ ಮಾಡಿದರು. ಶ್ರೀಮತಿ ಸ್ನೇಹ ಏರೋಬಿಕ್ ತರಬೇತುದಾರರು, ಏರೋಬಿಕ್ ವ್ಯಾಯಾಮ ಪ್ರದರ್ಶಿಸಿ, ತರಬೇತಿಯನ್ನು ನೀಡಿದರು.



ಬೆಳಿಗ್ಗೆ 09:00 ಗಂಟೆಯಿಂದ ಮಧ್ಯಾಹ್ನ 01:00 ರವರೆಗೆ ತಂಡವಾರು "ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆ, ಸಾಹಸಮಯ ಚಟುವಟಿಕೆಗಳ ಕಾರ್ಯಕ್ರಮ, ಸ್ಕಿಲೋರಾಮ, ರಸಪ್ರಶ್ನೆ ಕಾರ್ಯಕ್ರಮ, ಅಗ್ನಿ ಸುರಕ್ಷತಾ ಕ್ರಮಗಳ ಬಗ್ಗೆ ಮಾಹಿತಿ ಹಾಗೂ ವಿವಿಧ ಮಾಹಿತಿ ಕೇಂದ್ರಗಳು" ಸ್ಪರ್ಧೆ/ಚಟುವಟಿಕೆಗಳಲ್ಲಿ ಭಾಗವಹಿಸಿದರು.

**ಹಿಮಾಲಯ ವೃಕ್ಷಮಣಿಧಾರಕರ ಸಮಾವೇಶ:** ಬೆಳಗ್ಗೆ 12 ಗಂಟೆಗೆ ಶಾಹಿನ್ ವಿದ್ಯಾ ಸಂಸ್ಥೆಯ ಒಂದು ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ರಾಜ್ಯದ ಜಿಲ್ಲೆಗಳ ಹಿಮಾಲಯ ವೃಕ್ಷಮಣಿಧಾರಕರ ಸಮಾವೇಶ ಹಮ್ಮಿಕೊಳ್ಳಲಾಗಿತ್ತು. ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಸಸಿಗೆ ನೀರು ಹಾಕುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು. ಈ ಸಮಾವೇಶದಲ್ಲಿ ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ಆಯುಕ್ತರು(ವ.ಸಂ) ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ, ವೃಕ್ಷಮಣಿಗಳ ಇತಿಹಾಸದ ಬಗ್ಗೆ ಮಾಹಿತಿ ನೀಡಿದರು.





ಮತ್ತೋರ್ವ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀ ಎನ್.ಶ್ರೀನಿವಾಸನ್, ಸಹಾಯಕ ರಾಜ್ಯ ಆಯುಕ್ತರು(ಸ್ಕೌಟ್ಸ್) ಇವರು “ಸಂವಹನ” ಮತ್ತು ಹಿಮಾಲಯ ವೃಕ್ಷಮಣಿಧಾರಕರಿಗೆ ಇರಬೇಕಾದ ಸಂವಹನ ಸಾಮರ್ಥ್ಯಗಳ ಬಗ್ಗೆ ಪ್ರಾತ್ಯಕ್ಷಿತೆಗಳ ಮೂಲಕ ಮಾಹಿತಿ ನೀಡಿದರು. ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು(ವ.ಸಂ), ಇವರು ಸಮಾವೇಶದ ಉದ್ದೇಶಗಳ ಬಗ್ಗೆ ಮಾತನಾಡಿದರು. ಸುಮಾರು 70 ಮಂದಿ ವೃಕ್ಷಮಣಿಧಾರಕರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಧ್ಯಾಹ್ನ 02:30 ರಿಂದ 04:30 ರವರೆಗೆ “ಬ್ಯಾಂಡ್‌ಸೆಟ್ ವಾದನ, ಕಲರ್ ಪಾರ್ಟಿ ಮತ್ತು ಪಥ ಸಂಚಲನೆ” ಕಾರ್ಯಕ್ರಮ ಏರ್ಪಡಿಸಲಾಗಿದ್ದಿತು. ಬ್ಯಾಂಡ್‌ಸೆಟ್ ಜವಾಬ್ದಾರಿಯನ್ನು ಶ್ರೀ ಬಸವರಾಜ್ ಗೋಗಿರವರು ನಿರ್ವಹಿಸಿದರು.

ಸಂಜೆ 05ಕ್ಕೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ಈಶ್ವರ್ ಖಂಡ್ರೆ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀ ಭಗವಂತ್ ಖೂಬಾ, ಕೇಂದ್ರ ಸಚಿವರು, ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀಮತಿ ರತ್ನಪ್ರಭ ಭಾ.ಆ.ಸೇ. ಜಿಲ್ಲಾಧಿಕಾರಿಗಳು, ಡಾ. ಅಬ್ದುಲ್ ಖದೀರ್ ಜಾಂಬೋರೇಟ್ ಮುಖ್ಯಸ್ಥರು, ಡಾ. ಗುರಮ್ಮ ಸಿದ್ಧಾರೆಡ್ಡಿ ಜಾಂಬೋರೇಟ್ ಹೆಚ್ಚುವರಿ ಮುಖ್ಯಸ್ಥರು, ಜಾಂಬೋರೇಟ್ ಕಾರ್ಯದರ್ಶಿ ಡಾ॥ ಹೆಚ್.ಬಿ. ಭರಶೆಟ್ಟಿ, ಜಾಂಬೋರೇಟ್ ಖಜಾಂಚಿ ಶ್ರೀ ತೌಸಿಫ್ ಶಿಬಿರದ ನಾಯಕರು ಮತ್ತು ಶಿಬಿರದ ನಾಯಕಿಯರು ಉಪಸ್ಥಿತರಿದ್ದರು.

## ಜಾಂಬೋರೇಟ್‌ನ ಐದನೆಯ ದಿನ (ದಿ.:12–02–2024) :

ಬೆಳಿಗ್ಗೆ 06:30ಕ್ಕೆ “ಸರ್ವಧರ್ಮ ಪ್ರಾರ್ಥನೆ” ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಜಾಂಬೋರೇಟ್ ಸಂಯೋಜಕಿ ಶ್ರೀಮತಿ ಮಲ್ಲೇಶ್ವರಿ ಜುಜಾರೆ ರವರು ನಡೆಸಿಕೊಟ್ಟರು, ಧರ್ಮಗುರುಗಳಾದ ಆಣದೂರಿನ ಭಂತೆ ಜ್ಞಾನಸಾಗರ, ಗುರುದ್ವಾರದ ದರ್ಬಾರ್ ಸಿಂಗ್, ಜಾಂಬೋರೇಟ್ ಮುಖ್ಯಸ್ಥ ಡಾ. ಅಬ್ದುಲ್ ಖದೀರ್, ಜಾಂಬೋರೇಟ್ ಹೆಚ್ಚುವರಿ ಮುಖ್ಯಸ್ಥೆ ಡಾ. ಗುರಮ್ಮ ಸಿದ್ಧಾರೆಡ್ಡಿ, ಜಾಂಬೋರೇಟ್ ಕಾರ್ಯದರ್ಶಿ ಡಾ॥ ಹೆಚ್.ಬಿ. ಭರಶೆಟ್ಟಿ, ಜಾಂಬೋರೇಟ್ ಖಜಾಂಚಿ ಶ್ರೀ ತೌಸಿಫ್ ಮಡಿಕೇರಿ, ಶ್ರೀಮತಿ ಅಫ್ರನಾಜ್ ತೌಸಿಫ್, ವಿ.ವಿ. ಗಿರೀಶ್, ಜಾಂಬೋರೇಟ್ ಶಿಬಿರದ ನಾಯಕರಾದ ಶ್ರೀ ರಮೇಶ ತಿಬಶೆಟ್ಟಿ, ಜಾಂಬೋರೇಟ್ ಶಿಬಿರದ ನಾಯಕಿ ಶ್ರೀಮತಿ ಜೈಶೀಲಾ ಸುದರ್ಶನ್ ಹಾಗೂ ಶಿಬಿರದ ಉಪನಾಯಕರು–ಉಪನಾಯಕಿಯರು ಉಪಸ್ಥಿತರಿದ್ದರು.








ಧ್ವಜಾರೋಹಣದ ನಂತರ ವಸತಿಯ ಸುತ್ತಮುತ್ತಲೂ ಹಾಗೂ ಅರೇನಾ ಸ್ಥಳದಲ್ಲಿ ಕಾಲೇಜು ಪರಿಸರದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು. ಜಾಂಬೋರೇಟ್‌ನಲ್ಲಿ ಪಾಲ್ಗೊಂಡಿದ್ದ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮಾತನಾಡಿ, ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೋರೇಟ್‌ಗೆ ಶುಭ ಸಂದೇಶಗಳನ್ನು ಕಳಿಹಿಸಿರುವಂತಹ ಕರ್ನಾಟಕ ರಾಜ್ಯದ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಸನ್ಮಾನ್ಯ ಶ್ರೀ ಸಿದ್ಧರಾಮಯ್ಯ, ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ, ಶ್ರೀ ಎಸ್.ಎಮ್. ಕೃಷ್ಣ, ಮಾಜಿ ಮುಖ್ಯಮಂತ್ರಿಗಳು, ಶ್ರೀ ಎಸ್.ಎಸ್. ಬೋಸರಾಜು ಸಚಿವರು, ಶ್ರೀ ಶಿವರಾಜ್ ಎಸ್. ತಂಗಡಗಿ, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀ ರಿತೇಶ್ ಕುಮಾರ್ ಸಿಂಗ್, ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸುರಕ್ಷತಾ ಇಲಾಖೆ, ಶ್ರೀಮತಿ ಸಿಂಧು ಬಿ. ರೂಪೇಶ್, ನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), ಶ್ರೀಮತಿ ಬಿ.ಬಿ. ಕಾವೇರಿ, ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಡಾ. ಆಕಾಶ್, ಅಪರ ಆಯುಕ್ತರು ಕಲ್ಯಾಣ ಕರ್ನಾಟಕ ವಿಭಾಗ ಇವರೆಲ್ಲರನ್ನು ಸ್ಮರಿಸಿ ಧನ್ಯವಾದಗಳನ್ನು ತಿಳಿಸಿದರು, ಜಿಲ್ಲೆಗಳ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ಹಾಗೂ ಬಸ್ ವ್ಯವಸ್ಥೆ ಕಲ್ಪಿಸಿಕೊಟ್ಟ ಕೆ.ಎಸ್.ಆರ್.ಟಿ.ಸಿ. ವ್ಯವಸ್ಥಾಪಕರಾದ ಶ್ರೀ ಅನ್ಬುಕುಮಾರ್ ರವರಿಗೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳಾದ ಶ್ರೀ ರಾಚಪ್ಪ ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿದರು. ಜೊತೆಗೆ ಸಹಕರಿಸಿದಂತಹ ಎಲ್ಲಾ ಮುಖಂಡರುಗಳಿಗೆ, ಜಿಲ್ಲೆಯ ಪದಾಧಿಕಾರಿಗಳಿಗೆ ಮುಖ್ಯವಾಗಿ ಡಾ. ಅಬ್ದುಲ್ ಖದೀರ್ ರವರಿಗೆ ಜಾಂಬೋರೇಟ್‌ನ್ನು ಬ್ರಹ್ಮಾಂಡವಾಗಿ, ಯಶಸ್ವಿಯಾಗಿ ನಡೆಸಿದ್ದೀರಿ ಎಂದು ಪ್ರಶಂಸಿಸಿ, ಅಭಿನಂದಿಸಿದರು. ಸ್ಕೌಟ್ಸ್–ಗೈಡ್ಸ್ ಚಳುವಳಿಯು ಮಕ್ಕಳಿಗೆ ಜೀವನ ಮೌಲ್ಯವನ್ನು ಕಲಿಸಿಕೊಡುತ್ತದೆ ಎಂಬುದನ್ನು ತಿಳಿಸಿ ಇದರ ಮುನ್ನಡೆಗೆ ರಾಜ್ಯದಲ್ಲಿ ಸ್ಕೌಟ್ಸ್–ಗೈಡ್ಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಆಲೋಚನೆಯನ್ನು ತಾವುಗಳು ಮಾಡುತ್ತಿರುವುದನ್ನು ವಿವರಿಸಿದರು. ಮುಂದಿನ ವರ್ಷದ ಕಲ್ಯಾಣ ಕರ್ನಾಟಕ ಜಾಂಬೋರೇಟ್ ಯಾದಗಿರಿ ಜಿಲ್ಲೆಯಲ್ಲಿ ನಡೆಯಲಿದೆ ಎಂದು ತಿಳಿಸಿ ತಮ್ಮ ಅಭಿನಂದನೆಗಳನ್ನು ಆ ಜಿಲ್ಲೆಗಳೆಲ್ಲರಿಗೂ ತಿಳಿಸಿದರು.

ಡಾ. ಅಬ್ದುಲ್ ಖದೀರ್ ರವರು ಈ ಹಿಂದೆ, ಅಂದರೆ 1995ರಲ್ಲಿ ತಮ್ಮ ಬೀದರ್ ಜಿಲ್ಲೆಯಲ್ಲಿ ರಾಜ್ಯಮಟ್ಟದ ಜಾಂಬೋರೇಟ್ ಡಾ. ಸಿದ್ಧಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಿರ್ವಹಣೆ ಆಗಿದ್ದುದನ್ನು ತಿಳಿಸಿದರು. 2023–24ರ ವರ್ಷದಲ್ಲಿ ಕಲ್ಯಾಣ ಕರ್ನಾಟಕ ಪ್ರಥಮ ಜಾಂಬೋರೇಟ್ ಕಾರ್ಯಕ್ರಮವನ್ನು ಏರ್ಪಡಿಸಲು ತಮ್ಮ ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಗೆ ವಹಿಸಿದ್ದುದು ತಮಗೆ ತುಂಬಾ ಸಂತಸದ ಸಂಗತಿ ಆಗಿರುವುದಾಗಿ ಹೇಳಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು. ಇದರ ಯಶಸ್ವಿಗೆ ಸಹಕರಿಸಿರುವ ರಾಜ್ಯದ ಎಲ್ಲಾ ಪದಾಧಿಕಾರಿಗಳಿಗೆ ತಮ್ಮ ಕೃತಜ್ಞತೆಗಳನ್ನು ತಿಳಿಸಿದರು. ನಂತರ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ರವರು ಜಾಂಬೋರೇಟ್ ಯಶಸ್ಸಿಗೆ ಶುಭಹಾರೈಸಿರುವ ಧ್ವನಿ ಸುರುಳಿಯನ್ನು ಪ್ರಸ್ತುತಪಡಿಸಿದರು. ಕಲ್ಯಾಣ ಕರ್ನಾಟಕ ವಿಭಾಗದ ಸ್ಕೌಟ್ಸ್–ಗೈಡ್ಸ್ ಮಕ್ಕಳು ತಮ್ಮ ವಿದ್ಯಾಭ್ಯಾಸಕ್ಕಾಗಿ ತಮ್ಮ ಕಾಲೇಜಿನಲ್ಲಿ ಸೇರುವಂತವರಿಗೆ ನೋಂದಣಿ ಶುಲ್ಕದಲ್ಲಿ ಶೇ. 20 ರಷ್ಟು ರಿಯಾಯಿತಿಯನ್ನು ನೀಡುತ್ತೇವೆಂದು ಘೋಷಿಸಿರುವುದು ತುಂಬಾ ಅಭಿನಂದನಾರ್ಹ. ನಂತರ ಇವರು ಎಲ್ಲರಿಗೂ ಶುಭಹಾರೈಸಿ, ಬೀಳ್ಕೊಂಡರು. ಧ್ವಜ ಅವರೋಹಣ ಕಾರ್ಯಕ್ರಮದೊಂದಿಗೆ ಕಲ್ಯಾಣ ಕರ್ನಾಟಕದ ಪ್ರಥಮ ಜಾಂಬೋರೇಟ್ ಮುಕ್ತಾಯಗೊಂಡಿತು.

ಶಿಬಿರಾರ್ಥಿಗಳಿಗೆ ಐದು ದಿನಗಳ ಕಾಲ ಉತ್ತಮವಾದ, ಶುಚಿ–ರುಚಿಕರವಾದ ತಿಂಡಿ, ಊಟೋಪಚಾರ, ವಸತಿ ವ್ಯವಸ್ಥೆಯನ್ನು ಶಾಹೀನ್ ಸಮೂಹ ಶಿಕ್ಷಣ ಸಂಸ್ಥೆಯವರು ವ್ಯವಸ್ಥಿತವಾಗಿ ನಿರ್ವಹಿಸಿದ್ದರು. ಪ್ರತಿ ದಿನ ಬೆಳಿಗ್ಗೆ–ಸಂಜೆ ಕ್ರೀಮ್ ಬಿಸ್ಕಿಟ್ ಮತ್ತು ಹಣ್ಣಿನ ಜ್ಯೂಸ್ ಪ್ಯಾಕ್‌ಗಳನ್ನು ಬೆಂಗಳೂರಿನ ಐ.ಟಿಸಿ. ಕಂಪನಿಯವರು ನೀಡಿದ್ದಾರೆ, ಕಲಬುರ್ಗಿಯ ಶ್ರೀ ಎಸ್.ಪಿ. ಸುಳ್ಳದ್, ಶ್ರೀ ಚನ್ನವೀರಯ್ಯ ಮತ್ತು ಶ್ರೀ ರಾಜು ಟೈಲರ್ ರವರು ಲಡ್ಡುಗಳನ್ನು ಮತ್ತು ಕಲಬುರ್ಗಿಯ ಕೆ.ಎಮ್.ಎಫ್. ರವರು ಬಾದಾಮಿ ಹಾಲು ಮತ್ತು ಸಿಹಿ ಲಸ್ಸಿಯ ಪ್ಯಾಕ್‌ಗಳನ್ನು ಉದಾರ ಕೊಡುಗೆಯಾಗಿ ನೀಡಿ ಎಲ್ಲಾ ವಿದ್ಯಾರ್ಥಿಗಳಿಗೆ ವಿತರಿಸಿರುವುದು ಅಭಿನಂದನಾರ್ಹ. ಅವರುಗಳಿಗೆ ಅನಂತಾನಂತ ಕೃತಜ್ಞತೆಗಳು.

ಜಾಂಬೋರೇಟ್ ಶಿಬಿರಾರ್ಥಿಗಳಿಗೆ ಟೆಂಟ್ ವ್ಯವಸ್ಥೆಯನ್ನು ದೊಡ್ಡಬಳ್ಳಾಪುರದ ರಾಜ್ಯ ತರಬೇತಿ ಕೇಂದ್ರದ ಸಿಬ್ಬಂದಿಗಳು ಹಾಗೂ ಕೊಂಡಜ್ಜಿ ರಾಜ್ಯ ತರಬೇತಿ ಕೇಂದ್ರದ ಸಿಬ್ಬಂದಿಗಳು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ರಾಷ್ಟ್ರ ಸಂಸ್ಥೆ ದೆಹಲಿ, ರಾಜ್ಯ ಸಂಸ್ಥೆ ಬೆಂಗಳೂರು, ಹೆಚ್.ಎ.ಎಲ್. ಬೆಂಗಳೂರು, ಬಳ್ಳಾರಿ, ವಿಜಯನಗರ, ಯಾದಗಿರಿ, ರಾಯಚೂರು, ಕೊಪ್ಪಳ, ಕೊಡಗು, ಧಾರವಾಡ, ದಾವಣಗೆರೆ, ಬೀದರ್, ವಿಜಯಪುರ, ಬೆಳಗಾವಿ ಮುಂತಾದ ಜಿಲ್ಲೆಗಳಿಂದ ವಿವಿಧ ಅಧಿಕಾರಿಗಳು, ಪದಾಧಿಕಾರಿಗಳು ಆಗಮಿಸಿ, ಜಾಂಬೋರೇಟ್ ಕಾರ್ಯಕ್ರಮದ ಯಶಸ್ವಿಗೆ ಪೂರಕರಾಗಿ ಶ್ರಮಿಸಿ ಸಂತಸ ವ್ಯಕ್ತಪಡಿಸಿರುತ್ತಾರೆ.



## ಜಾಂಬೋರೇಟ್‌ನಲ್ಲಿ ಭಾಗವಹಿಸಿದವರ ಜಿಲ್ಲಾವಾರು ಅಂಕಿಸಂಖ್ಯಾ ಪಟ್ಟಿ

| ಕ್ರಮ. ಸಂ | ಜಿಲ್ಲೆಯ ಹೆಸರು | ಸ್ಕೌಟ್ಸ್ | ಗೈಡ್ಸ್ | ರೋವರ್ಸ್ | ರೇಂಜರ್ಸ್ | ಸ್ಕೌ. ಮಾ | ಗೈ. ಕ್ಯಾ | ರೋ. ಸ್ಕೌ ಲೀ. | ರೇಂ. ಲೀ. | ಒಟ್ಟು |
|---|---|---|---|---|---|---|---|---|---|---|
| 1 | ಬೀದರ | 211 | 201 | 15 | 30 | 23 | 19 | 3 | 2 | 504 |
| 2 | ಬಳ್ಳಾರಿ | 154 | 98 | 37 | 46 | 4 | 4 | 1 | – | 344 |
| 3 | ವಿಜಯನಗರ | 229 | 149 | 16 | 12 | 14 | 7 | 1 | 1 | 429 |
| 4 | ಕೊಪ್ಪಳ | 116 | 156 | 32 | 35 | 12 | 11 | 1 | 2 | 365 |
| 5 | ರಾಯಚೂರು | 150 | 141 | 37 | 27 | 14 | 12 | 2 | 1 | 384 |
| 6 | ಯಾದಗಿರಿ | 168 | 113 | 29 | 49 | 12 | 7 | – | 2 | 380 |
| 7 | ಕಲಬುರಗಿ | 99 | 130 | 50 | 89 | 11 | 14 | 5 | 8 | 406 |
| | ಒಟ್ಟು | 1127 | 988 | 216 | 288 | 90 | 74 | 13 | 16 | 2812 |

# Glimpses of Kalyana Karnataka's First Jamborate

## held at Saheen Educational Compus, Bidar From 8th to 12th February 2024













# ರಾಜ್ಯ ಮಟ್ಟದ ಅಗ್ರಗಾಮಿತ್ವ ಮತ್ತು ಸಾಹಸಮಯ ತರಬೇತಿ ಶಿಬಿರ



ರಾಜ್ಯ ಮಟ್ಟದ ಅಗ್ರಗಾಮಿತ್ವ ಮತ್ತು ಸಾಹಸಮಯ ತರಬೇತಿ ಶಿಬಿರವನ್ನು ಫೆಬ್ರವರಿ 04 ರಿಂದ 07ರ ವರೆಗೆ ಶಾಹಿನ್ ಗ್ರೂಪ್ ಸಂಸ್ಥೆ, ಅಲ್ಲಮ್ ಇಕ್ಬಾಲ್ ಎಜುಕೇಷನ್ ಸೊಸೈಟಿ, ಶಾಹಿನ್ ನಗರ, ಶಹಾಪುರ ಗೇಟ್, ಬೀದರ್ ಇಲ್ಲಿ ಆಯೋಜಿಸಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 75 ರೋವರ್ಸ್ ಮತ್ತು 85 ರೇಂಜರ್ಸ್‌ಗಳು ಭಾಗವಹಿಸಿದ್ದರು.

ಫೆಬ್ರವರಿ 04 ರಂದು ಮಧ್ಯಾಹ್ನ 2 ಗಂಟೆಗೆ ಧ್ವಜಾರೋಹಣದ ಮೂಲಕ ಶಿಬಿರವು ಪ್ರಾರಂಭವಾಯಿತು. ನಂತರ ಶ್ರೀಮತಿ ಗುರಮ್ಮ ಸಿದ್ದಾರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಬೀದರ್ ಇವರ ಅಧ್ಯಕ್ಷತೆಯಲ್ಲಿ ಶಿಬಿರದ ಉದ್ಘಾಟನಾ ಸಮಾರಂಭವು ನಡೆಯಿತು. ಶಾಹಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಬ್ದುಲ್ ಖದೀರ್‌ರವರು ಶಿಬಿರವನ್ನು ಉದ್ಘಾಟಿಸಿದರು. ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್)ರವರು ಕಾರ್ಯಕ್ರಮದ ಸ್ವಾಗತ ಹಾಗೂ ನಿರೂಪಣೆಯನ್ನು ಮಾಡಿದರು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್)ರವರು ಪ್ರಾಸ್ತಾವಿಕ ನುಡಿಯನ್ನು ನುಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಲೀಲಾವತಿ ಚಕೋತೆ, ಜಿಲ್ಲಾ ಆಯುಕ್ತರು (ಗೈಡ್), ಬೀದರ್, ಶ್ರೀ ತೌಸೀಫ್ ಮಡಿಕೇರಿ ಸಿ.ಇ.ಓ., ಶಾಹಿನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಹಾಗೂ ಇತರ ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶ್ರೀ ಪ್ರತೀಮ್ ಕುಮಾರ್ ಎ.ಎಲ್.ಟಿ.(ಆರ್) ಮತ್ತು ಶ್ರೀ ವಿಷ್ಣುಪ್ರಸಾದ್‌ರವರು ವಿವಿಧ ವಿಷಯಗಳ ಬಗ್ಗೆ ಮಾಹಿತಿ ನೀಡಿ ವಿವಿಧ ಅಗ್ರಗಾಮಿ ಯೋಜನೆಗಳನ್ನು ರೋವರ್ಸ್–ರೇಂಜರ್ಸ್‌ಗಳಿಂದ ಮಾಡಿಸಿದರು.

ಫೆಬ್ರವರಿ 07 ರಂದು ಸರ್ವಧರ್ಮ ಪ್ರಾರ್ಥನೆಯನ್ನು ಆಯೋಜಿಸಲಾಗಿತ್ತು. ಶ್ರೀಮತಿ ಗುರಮ್ಮ ಸಿದ್ಧಾರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು, ಬೀದರ್ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಶಿಬಿರದ ಸಮಾರೋಪ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದ ನಿರೂಪಣೆ ಹಾಗೂ ಸ್ವಾಗತವನ್ನು ಶ್ರೀಮತಿ ಮಲ್ಲೇಶ್ವರಿ ಜುಜಾರೆ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರು (ಗೈ) ಇವರು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಡಾ॥ ಅಬ್ದುಲ್ ಖದೀರ್, ಎಲ್ಲಾ ನಾಯಕರು, ನಾಯಕಿಯರು, ಸಹ ನಾಯಕರುಗಳು, ರೋವರ್ಸ್ – ರೇಂಜರ್ಸ್‌ಗಳು ಉಪಸ್ಥಿತರಿದ್ದರು.

ಶಿಬಿರದ ನಾಯಕರುಗಳಾಗಿ ಶ್ರೀ ಪ್ರತೀಮ್ ಕುಮಾರ್, ಎ.ಎಲ್.ಟಿ. ರೋವರ್ ವಿಭಾಗ ಹಾಗೂ ಶ್ರೀಮತಿ ಉಷಾರಾಣಿ ರೇಂಜರ್ ವಿಭಾಗದಿಂದ ಕಾರ್ಯನಿರ್ವಹಿಸಿದರು. ಶ್ರೀ ಬಾಬುರಾವ್ ನಿಂಬೂರೆ, ಶ್ರೀ ಶಿವಣ್ಣ, ಶ್ರೀ ರಮೇಶ್ ತಿಬಶೆಟ್ಟಿ, ಶ್ರೀ ಅನಿಲ್ ಶಾಸ್ತ್ರಿ, ಶ್ರೀ ದಾದಾಸಾಬ್ ಅತ್ತಾರ್, ಶ್ರೀ ಕುಮಾರಸ್ವಾಮಿ, ಶ್ರೀ ವಿಷ್ಣುಪ್ರಸಾದ್‌ರವರುಗಳು ಶಿಬಿರದ ಸಹನಾಯಕರುಗಳಾಗಿದ್ದರು.





# ರಾಜ್ಯ ಮಟ್ಟದ ಅಗ್ರಗಾಮಿತ್ವ ತರಬೇತಿ ಶಿಬಿರ




ರಾಜ್ಯ ಸಂಸ್ಥೆ ಮತ್ತು ಜಿಲ್ಲಾ ಸಂಸ್ಥೆ ಧಾರವಾಡ ಇದರ ಸಹಯೋಗದಲ್ಲಿ ಫೆಬ್ರವರಿ 14 ರಿಂದ 17ರ ವರೆಗೆ ನಡೆದ ರಾಜ್ಯ ಮಟ್ಟದ ಪಯೋನಿಯರಿಂಗ್ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಇದರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶ್ರೀಶೈಲ ಸಿ. ಕರಿಕಟ್ಟಿ ಇವರು ವಹಿಸಿಕೊಂಡಿದ್ದರು. ಉದ್ಘಾಟಕರಾಗಿ ಶ್ರೀಮತಿ ನಳಿನಿ ಬೆಂಗೇರಿ, ಪ್ರಾಚಾರ್ಯರು ಸ.ಪ್ರ.ದ.ಕಾ. ಧಾರವಾಡ, ಇವರು ವಹಿಸಿಕೊಂಡಿದ್ದರು. ಅವರು ಮಾತನಾಡಿ "ಮಕ್ಕಳು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳಬೇಕು, ಸ್ಕೌಟ್–ಗೈಡ್ ಮಕ್ಕಳಲ್ಲಿ ಉತ್ತಮವಾದ ಶಿಸ್ತು, ಹಿರಿಯರಿಗೆ ಗೌರವಿಸುವುದು, ಒಳ್ಳೆಯ ವರ್ತನೆಯನ್ನು ಕಲಿಸುತ್ತದೆ" ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಎಸ್.ಎಂ. ಹುಡೇದಮನಿ ಇವರು ಮಾತನಾಡಿ "ಉತ್ತಮವಾದ ಸಮಾಜದ ನಿರ್ಮಾಣ ಮಾಡುವ ಕಾರ್ಯವನ್ನು ಈ ಸಂಸ್ಥೆಯು ಮಾಡುತ್ತಿದೆ. ತಾವು ಕಲಿಯುವಾಗ ಈ ತರಹ ವ್ಯವಸ್ಥೆ ನಮಗೆ ಇರಲಿಲ್ಲಾ ಇಂತಹ ಸಮವಸ್ತ್ರವನ್ನು ಹೊಂದಿರುವ ಸಂಸ್ಥೆಯಲ್ಲಿ ಭಾಗವಹಿಸಿರುವ ತಾವು ಅದೃಷ್ಠವಂತರು" ಎಂದರು. ಇನ್ನೂರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಆರ್.ಆರ್. ಸದಳಗಿ ಮಾತನಾಡಿ "ಸ್ಕೌಟ್–ಗೈಡ್ ಸಮಾಜಮುಖಿ ಕೆಲಸ ಮಾಡುತ್ತಿದೆ" ಎಂದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಜಿ.ಎನ್. ಮಠಪತಿ ಮಾತನಾಡಿದರು. ಶ್ರೀಮತಿ ಶಿವಲೀಲಾ ಕಳಸಣ್ಣವರ ಮಾತನಾಡಿ ಸ್ಕೌಟ್–ಗೈಡ್ ಬೆಳವಣಿಗೆಗೆ ಬೇಕಾಗುವ ಎಲ್ಲ ಸಹಾಯ ಸಹಕಾರ ಇಲಾಖೆಯಿಂದ ಮಾಡಲಾಗುವುದು" ಎಂದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಶಿವಾನಂದ ನರಹಟ್ಟಿ, ಸ್ವಾಗತವನ್ನು ಶ್ರೀ ಸಿ.ಎಂ. ಕೆಂಗಾರ, ವಂದನಾರ್ಪಣೆಯನ್ನು ಶ್ರೀಮತಿ ಎಸ್.ಎ. ಮನಿಯಾರ ಮಾಡಿದರು.






# ರಾಜ್ಯ ಮಟ್ಟದ ಕಡಲ ತೀರ ಚಾರಣ ಶಿಬಿರ ಮತ್ತು ಪ್ರಕೃತಿ ಅಧ್ಯಯನ ಶಿಬಿರ

ರಾಜ್ಯ ಸಂಸ್ಥೆ ಮತ್ತು ಉಡುಪಿ ಜಿಲ್ಲಾ ಸಂಸ್ಥೆಯ ಆಶ್ರಯದಲ್ಲಿ ರಾಜ್ಯ ಮಟ್ಟದ ಕಡಲ ತೀರ ಚಾರಣ ಶಿಬಿರ ಮತ್ತು ಪ್ರಕೃತಿ ಅಧ್ಯಯನ ಶಿಬಿರವನ್ನು ಫೆಬ್ರವರಿ 20 ರಿಂದ 23ರ ವರೆಗೆ ಉಡುಪಿಯಲ್ಲಿ ಸಂಘಟಿಸಲಾಯಿತು.

ಶಿಬಿರದ ಉದ್ಘಾಟನೆಯನ್ನು ಡಾ॥ ಎಂ. ಮೋಹನ್ ಆಳ್ವ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಇವರು ನೆರವೇರಿಸಿದರು. ಶ್ರೀಮತಿ ಮಮತಾ ದೇವಿ, ಅಪರ ಜಿಲ್ಲಾಧಿಕಾರಿಗಳು, ಉಡುಪಿ ಇವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮಾಜಿ ಶಾಸಕರು ಶ್ರೀ ಲಾಲಾಜಿ ಆರ್. ಮೆಂಡನ್, ಕಾಪು ತಹಶಿಲ್ದಾರ್ ಡಾ॥ ಪ್ರತಿಭಾ. ಆರ್, ರಾಜ್ಯ ಆಯುಕ್ತರು (ಗೈ) ಶ್ರೀಮತಿ ಗೀತಾ ನಟರಾಜ್, ಸಹಾಯಕ ರಾಜ್ಯ ಆಯುಕ್ತರು (ಗೈ) ಶ್ರೀಮತಿ ರಾಧಾ ವೆಂಕಟೇಶ್, ದಕ್ಷಿಣ ಕನ್ನಡ ಮೊಗವೀರ ಮಹಾಜನ ಸಂಘದ ಪ್ರಧಾನ ಕಾರ್ಯದರ್ಶಿ ಸುಧಾಕರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಶ್ರೀ ಎಂ. ಪ್ರಭಾಕರ್ ಭಟ್, ರಾಜ್ಯ ಸಂಘಟನಾ ಆಯುಕ್ತರು ಸ್ವಾಗತಿಸಿದರು, ಶ್ರೀ ಪ್ರತೀಮ್ ಕುಮಾರ್ ಶಿಬಿರದ ಮುನ್ನೋಟ ನುಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ್ ಅಡಿಗ, ಜಿಲ್ಲಾ ಆಯುಕ್ತರು (ಗೈ) ಶ್ರೀಮತಿ ಜ್ಯೋತಿ ಜೆ.ಪೈ, ಉಪಾಧ್ಯಕ್ಷರಾದ ಶ್ರೀಮತಿ ಗುಣರತ್ನ, ಸಹಾಯಕ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಸುಮನ್ ಶೇಖರ್, ಶಿಬಿರದ ನಾಯಕರಾದ ಡಾ॥ ರಾಮಚಂದ್ರ ಪಾಟ್ಕರ್, ರೇಂಜರ್ ಲೀಡರ್ ಶ್ರೀಮತಿ ಸವಿತಾ, ರೋವರ್ ಲೀಡರ್‌ಗಳಾದ ಶ್ರೀ ಹರೀಶ್, ಶ್ರೀ ವಿತೇಶ್ ಎಲ್ಲಾ ಸ್ಥಳೀಯ ಸಂಸ್ಥೆಯ ಅಧ್ಯಕ್ಷರುಗಳು ಉಪಸ್ಥಿತರಿದ್ದರು.

ಫೆಬ್ರವರಿ 21 ರಂದು ಶಿಬಿರದ ಎರಡನೇ ದಿನ ಡಾ॥ ಪ್ರತಿಭಾ .ಆರ್ ಪಡುಬಿದ್ರಿ ಬ್ಲೂ ಬೀಚ್‌ನಲ್ಲಿ ಚಾರಣಕ್ಕೆ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. ನಂತರ ಕಾಪು ಬೀಚ್ ತಲುಪಿ ಅಲ್ಲಿ ತಂಗಲಾಯಿತು. ಮರುದಿನ ಫೆಬ್ರವರಿ 22 ರಂದು ಕಾಪು ಬೀಚ್‌ನಿಂದ ಚಾರಣವನ್ನು ಪ್ರಾರಂಭಿಸಿ 20 ಕಿ.ಮೀ ಚಾರಣ ಮಾಡಿ ಸಂಜೆ ಮಲ್ಪೆ ಬೀಚ್‌ಗೆ ತಲುಪಲಾಯಿತು. ಅದೇ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಮಲ್ಪೆಯ ಗಾಂಧಿ ಜನ್ಮ ಶತಾಬ್ದಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಕೌಟ್, ಗೈಡ್, ಕಬ್, ಬುಲ್‌ಬುಲ್ ದಳಗಳನ್ನು ಉದ್ಘಾಟಿಸಿದರು ಹಾಗೂ ಚಿಂತನಾ ದಿನಾಚರಣೆ, ಸ್ಥಾಪಕರ ದಿನಾಚರಣೆಯ ರ್‍ಯಾಲಿಯನ್ನು ಭಾಗವಹಿಸದರು. ಉಪನಿರ್ದೇಶಕರು ಶ್ರೀ ಗಣಪತಿ, ಶ್ರೀ ಪ್ರಸಾದ್ ರಾಜ್, ಕ್ಷೇತ್ರ ಶಿಕ್ಷಣಾಧಿಕಾರಿ ಡಾ॥ ಯಲ್ಲಮ್ಮ.

ಫೆಬ್ರವರಿ 23 ರಂದು ಬೆಳಗ್ಗೆ ಮಲ್ಪೆ ಬೀಚ್‌ನಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ಸಂಘಟಿಸಲಾಯಿತು. ಅಪರಾಹ್ನ ಉಡುಪಿಯ ಶ್ರೀ ಕೃಷ್ಣ ಮಠದ ರಾಜಾಂಗಣದಲ್ಲಿ ಶಿಬಿರದ ಸಮಾರೋಪ ಸಮಾರಂಭವು ಶ್ರೀಮತಿ ಗುಣರತ್ನ, ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಪರ್ಯಾಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಯವರು ಆಶೀರ್ವಚನ ನೀಡಿದರು. ಶ್ರೀ ಪಿ.ಜಿ.ಆರ್. ಸಿಂಧ್ಯರವರು ಸಮಾರೋಪ ಭಾಷಣ ಮಾಡಿದರು. ಶ್ರೀ ಜ್ಯೋತಿ ಜೆ. ಪೈ, ಜಿಲ್ಲ ಆಯುಕ್ತರು(ಗೈ) ಉಪಸ್ಥಿತರಿದ್ದರು. ಶಿಬಿರದಲ್ಲಿ 140 ರೋವರ್ಸ್–ರೇಂಜರ್ಸ್ ಭಾಗವಹಿಸಿದ್ದರು.



# ALT TRAINING COURSE

**Below Mentioned Unit Leaders of Scout wing From Karnataka Participated in 94th ALT (S.W.) Training Course held at Bharat Scouts & Guides National Training Centre, Pachamari (M.P.) from January 09 to 15, 2024.**

**C. Abdul Khadar, M. Kumarswamy, M.D. Sayed Hussain, Chandrashekhar, P. Era Naik N. Krishanmurhty, S.G. Madhusuma, B.R. Rathikumari D. Holappa, Krishana Shetty, T.K. Vamana, M.K. Nalinakshi & B.K. Ajay Kumar Jain.**



# ಶ್ರದ್ಧಾಂಜಲಿ ಸಭೆ

ಶ್ರೀಮತಿ ಕಮಲಾಕ್ಷಿ ಹೆಗಡೆ, ಸಹಾಯಕ ಗೈಡ್ ರಾಜ್ಯ ಆಯುಕ್ತರು, ನಿವೃತ್ತ ಶಿಕ್ಷಕಿ, ಕ್ಲೂನಿ ಕಾನ್ವೆಂಟ್, ಮಲ್ಲೇಶ್ವರ, ಬೆಂಗಳೂರು ಉತ್ತರ ಜಿಲ್ಲೆ ಇವರು ಫೆಬ್ರವರಿ 05 ರಂದು ದೈವಾದೀನರಾದ ಪ್ರಯುಕ್ತ ಫೆಬ್ರವರಿ 06 ರಂದು ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿತ್ತು. ಪುಷ್ಪನಮನ ಮತ್ತು ಮೌನ ಪ್ರಾರ್ಥನೆಯೊಂದಿಗೆ ಶ್ರೀಮತಿ ಕಮಲಾಕ್ಷಿ ಹೆಗಡೆರವರಿಗೆ ಭಗವಂತ ಸದ್ಗತಿಯನ್ನು ನೀಡಲಿ ಎಂದು ಕೋರಲಾಯಿತು.

ಈ ಸಂದರ್ಭದಲ್ಲಿ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಉಪಾಧ್ಯಕ್ಷರು, ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌ), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ವ.ಸಂ.), ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿ, ಶ್ರೀ ಎಲ್.ಟಿ. ಲೋಕೇಶ್, ಶ್ರೀ ಬಿ.ಕೆ. ಶೇಷಾದ್ರಿ, ಶ್ರೀ ಎಂ.ಎ. ಚೆಲ್ಲಯ್ಯ, ಡಾ. ಬಿ.ಎಲ್. ಭಾಗ್ಯಲಕ್ಷ್ಮಿ, ಶ್ರೀಮತಿ ಅರ್ಪಿತಾ ಕೊಂಡಜ್ಜಿ, ಶ್ರೀಮತಿ ಮೇರಿ ಫಿಲೋಮಿನಾ, ಶ್ರೀಮತಿ ರೂಪಾ, ಶ್ರೀಮತಿ ಜ್ಯೋತಿ ಹೆಚ್.ಕೆ., ಶ್ರೀ ಶಂಕರ್ ಎ.ಎಂ., ಶ್ರೀಮತಿ ಪುಷ್ಪ ವಿಜಯನ್, ಶ್ರೀ ನಿತಿನ್ ಅಮಿನ್, ಶ್ರೀ ಚಂದ್ರು ಹಾಗೂ ರಾಜ್ಯ ಕೇಂದ್ರ ಕಛೇರಿಯ ಸಿಬ್ಬಂದಿ ವರ್ಗದವರು, ಇನ್ನೂ ಅನೇಕರು ಭಾಗವಹಿಸಿ ಶ್ರೀಮತಿ ಕಮಲಾಕ್ಷಿ ಹೆಗಡೆರವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿದರು. ಅವರೊಂದಿಗಿನ ಒಡನಾಟದ ಅನುಭವಗಳನ್ನು ಹಂಚಿಕೊಂಡರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ 'ಅವರ ಅಗಲಿಕೆಯು ಸಂಸ್ಥೆಗೆ ಅಪಾರ ನಷ್ಟವನ್ನು ತಂದಿದೆ. ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗಿ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸೋಣ ಅವರ ಹೆಸರಿನಲ್ಲಿ ಶಾಶ್ವತವಾಗಿ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ' ಎಂದು ತಿಳಿಸಿದರು.



## ಮಾರ್ಚ್ 2024ರ ಕಾರ್ಯಕ್ರಮಗಳು

| Sl.No | Programme Name | Date | Venue |
|---|---|---|---|
| 1. | National Level Advocacy Workshop on SDG's for Rovers-Ranges and Young Leaders | 28.2.2024 to 3.3.2024 | Dr. Annie Besant State Training and Camping Center, Doddaballapur Bengaluru Rural District |
| 2. | International Women's day | 8.3.2024 | Davanagere |
| 3. | Beautician Course for Rangers | 4 to 7 March | Kolar |
| 4. | Sirsi Marikamba Jattra Service | 19.3.2024 to 27.3.2024 | Sirsi Uttara Kannada District |

– ರಾಜ್ಯ ಕಾರ್ಯದರ್ಶಿ


pielabz™
Practicality In Education
Kid-tested | expert- designed
Equip your School with Pielabz
Transforming classrooms with curriculum-aligned, grade-specific STEM activity kits
Delivering Raw materials
Assembly in Class
Take Home kits
Delivering STEM Programs in Schools since 2016
Welcome to the world of
STEM
90%
Teach Others
75%
Hands on Learning
pielabz
50%
Discussion
30%
Demonstration
20%
Audio Visual
10%
Reading
5%
Lecture
Why Pielabz STEM kits?
Hands on Learning enhances retention and understanding, making PIELABZ STEM kits effective tools for promoting experiential and inquiry-based learning.
"The only source of knowledge is EXPERIENCE"
-A.E
Check out the full list of activities
www.pielabz.com
connect@pielabz.com
+91 76192 07779

ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪಂರಾ 275 ಜಿಪಸ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23-01-2024.

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ:**

**ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
ಎಲ್ಲಾ ಜಿಲ್ಲಾ ಪಂಚಾಯತಿಗಳು.

**ಮಾನ್ಯರೆ,**

**ವಿಷಯ:** ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ವಾರ್ಷಿಕ ವಂತಿಕೆ ನೀಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಆದೇಶ ಸಂಖ್ಯೆ:ಗ್ರಾಅಪ 354 ಜಿಪಸ 2018, ದಿನಾಂಕ:04-12-2018.
2. ಸರ್ಕಾರದ ಸಮ ಸಂಖ್ಯೆ ಪತ್ರ ದಿನಾಂಕ:02-08-2021.
3. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:BGS/SHQ/2029/2023-24, ದಿನಾಂಕ:08-12-2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಪತ್ರದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗಾಗಿ ಉಲ್ಲೇಖ(1)ರ ಸುತ್ತೋಲೆಯನ್ವಯ 2020-21 ಹಾಗೂ 2021-22ನೇ ಸಾಲಿಗೆ ಜಿಲ್ಲಾ ಪಂಚಾಯತಿಗಳಿಂದ ತಲಾ ರೂ.50,000/-, ತಾಲ್ಲೂಕು ಪಂಚಾಯತಿಗಳಿಂದ ತಲಾ ರೂ.10,000/- ಹಾಗೂ ಗ್ರಾಮ ಪಂಚಾಯತಿಗಳಿಂದ ತಲಾ ರೂ.5,000/-ಗಳ ವಾರ್ಷಿಕ ವಂತಿಗೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೇರವಾಗಿ ನೀಡುವಂತೆ ತಿಳಿಸಲಾಗಿತ್ತು.

ಮುಂದುವರೆದು, ಉಲ್ಲೇಖ (3)ರ ಪತ್ರದಲ್ಲಿ ಕೋರಲಾದಂತೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳಿಗಾಗಿ 2022-23 ಹಾಗೂ 2023-24ನೇ ಸಾಲಿಗೆ ಜಿಲ್ಲಾ ಪಂಚಾಯತಿಗಳಿಂದ ತಲಾ ರೂ.50,000/-, ತಾಲ್ಲೂಕು ಪಂಚಾಯತಿಗಳಿಂದ ತಲಾ ರೂ.10,000/- ಹಾಗೂ ಗ್ರಾಮ ಪಂಚಾಯತಿಗಳಿಂದ ತಲಾ ರೂ.5,000/-ಗಳ ವಾರ್ಷಿಕ ವಂತಿಗೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ನೇರವಾಗಿ ನೀಡುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,
23/1/24
(ಎಂ.ಎಂ.ರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
23/01/24

**ಪ್ರತಿ:**



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

ಜಿಲ್ಲಾ ಸಂಸ್ಥೆ ಮತ್ತು ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಫೆಬ್ರವರಿ 05 ರಿಂದ 11ರ ವರೆಗೆ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್‌ರವರ ಮೂಲ ತರಬೇತಿ ಶಿಬಿರವನ್ನು ಸರ್ಕಾರಿ ಆದರ್ಶ ವಿದ್ಯಾಲಯ ಲೋಕಾಪುರ ಲಕ್ಷಾನಟ್ಟಿ ತಾಲ್ಲೂಕು ಮುಧೋಳ ಇಲ್ಲಿ ಏರ್ಪಡಿಸಲಾಗಿತ್ತು. ಫೆಬ್ರವರಿ 11ರಂದು ಇದರ ಸಮಾರೋಪ ಸಮಾರಂಭದಲ್ಲಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎಂ.ಎಂ. ವಿರಕ್ತಮಠ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಗಜಾನನ ಮನ್ನಿಕೇರಿ, ಉಪನಿರ್ದೇಶಕರಾದ ಶ್ರೀ ಬಿ.ಕೆ. ನಾದನೂರ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎಸ್.ಎಂ. ಮುಲ್ಲಾ, ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಸ್.ಎಂ. ಕುರಣಿ, ಬಿ.ಆರ್.ಸಿ. ಶ್ರೀ ಅಡಿವೆಪ್ಪ ಛಬ್ಬಿ, ಸ್ಕೌಟ್ ವಿಭಾಗದ ನಾಯಕರಾದ ಶ್ರೀ ಜಗದೀಶ ಬೋಳಸುರ, ಶ್ರೀ ಆರ್.ಡಿ. ಗಲಗಲಿ, ಗೈಡ್ ವಿಭಾಗದ ನಾಯಕರಾದ, ಶ್ರೀಮತಿ ಭಾರತಿ ಹೊಸಮನಿ ಆರ್.ಎಂ.ಎಸ್.ಎ. ಶಾಲೆಯ ಮುಖ್ಯ ಗುರುಗಳಾದ ಶ್ರೀ ಸಿದ್ದಣ್ಣ ಸತ್ತಿಗೇರಿ, 62 ಸ್ಕೌಟ್, 30 ಗೈಡ್ ಶಿಬಿರಾರ್ಥಿಗಳು ಭಾಗವಹಿಸಿದ್ದರು.



## ಬೆಳಗಾವಿ

* ಫೆಬ್ರವರಿ 10 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳಿಯ ಸಂಸ್ಥೆ ಬೈಲಹೊಂಗಲ ಇವರುಗಳ ಸಹಯೋಗದಲ್ಲಿ ಕೆ.ಆರ್.ಸಿ.ಎಸ್. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬೈಲಹೊಂಗಲ, ಸವದತ್ತಿ ಮತ್ತು ರಾಮದುರ್ಗ ಸ್ಥಳಿಯ ಸಂಸ್ಥೆಯ ತೃತೀಯ ಸೋಪಾನ ಪೂರ್ಣಗೊಳಿಸಿದ 250 ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ರಾಜ್ಯ ಪುರಸ್ಕಾರ ಅರ್ಜಿಸಲ್ಲಿಸುವ ಕುರಿತು ಪೂರ್ವಭಾವಿ ಶಿಬಿರವನ್ನು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಐ.ಎನ್. ಪ್ಯಾಟಿರವರು ಉದ್ಘಾಟನೆ ಮಾಡಿ ಮಕ್ಕಳಿಗೆ ಶುಭ ಹಾರೈಸಿದರು ಕೆ.ಆರ್.ಸಿ.ಎಸ್.



ಶಾಲೆಯ ಪ್ರಾಚಾರ್ಯರಾದ ಶ್ರೀ ಎಂ.ಸಿ. ಬಿರಾದಾರ ಸದರಿ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಿದರು. ಸದರಿ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರವೇಶದಿಂದ ತೃತೀಯ ಸೋಪಾನದವರೆಗೆ ಮಾಹಿತಿ ನೀಡಲಾಯಿತು. ನಂತರ ಆನ್‌ಲೈನ ಮೂಲಕ ಅರ್ಜಿಸಲ್ಲಿಸುವ ಕುರಿತು ಸಮಗ್ರವಾದ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಅಜ್ಜಪ್ಪ ಅಂಗಡಿ, ಶ್ರೀ ವಿಠ್ಠಲ ಎಸ್.ಬಿ., ಎ.ಎಸ್.ಓಸಿ ಬೆಳಗಾವಿ, ಶ್ರೀ ವೈ.ವಿ. ಗೋರವನಕೊಳ್ಳ ಹಾಗೂ ವಿವಿಧ ಶಾಳೆಯ ಸ್ಕೌಟ್ ಮತ್ತು ಗೈಡ್ಸ್ ಶಿಕ್ಷಕರುಗಳು ಉಪಸ್ಥಿತರಿದ್ದರು.

* ತಾಲ್ಲೂಕು ಸಂಸ್ಥೆ ಖಾನಾಪುರ ಸಹಯೋಗದಲ್ಲಿ ಜನವರಿ 19 ರಂದು ತಾಲ್ಲೂಕು ಮಟ್ಟದ ರ‍್ಯಾಲಿಯನ್ನು ಮಲಪ್ರಭಾ ಕ್ರೀಡಾಂಗಣದಲ್ಲಿ ನಡೆಸಲಾಯಿತು. ವಿವಿಧ ಶಾಲೆಗಳಿಂದ ಸುಮಾರು 500 ವಿದ್ಯಾರ್ಥಿಗಳು ಹಾಗೂ ನೂರು ಜನ ಶಿಕ್ಷಕರು ಭಾಗವಹಿಸಿದ್ದರು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ರಾಜೇಶ್ವರಿ ಕುಡಚಿರವರು ಜಾಥಾಗೆ ಚಾಲನೆ ನೀಡಿದರು. ಶಿವ ಸ್ಮಾರಕ ವೃತ್ತದಲ್ಲಿ ಮಾನವ ಸರಪಳಿಯನ್ನು ನಿರ್ಮಿಸಲಾಯಿತು. ಪರಿಸರ ಸಂರಕ್ಷಣೆ ಮತ್ತು ವಿಶ್ವ ಭ್ರಾತೃತ್ವಕುರಿತು ಅನೇಕ ಘೋಷಣೆಗಳನ್ನು ಹೇಳಲಾಯಿತು. ಖಾನಾಪುರ ಪೋಲೀಸ್ ಇಲಾಖೆಯವರು ಸಹಕಾರವನ್ನು ನೀಡಿದರು. ನಂತರ ಶಾಸಕರ ಮಾದರಿ ಶಾಲೆಯಲ್ಲಿ



ಸಮಾರೋಪ ಸಮಾರಂಭವನ್ನು ಮಾನ್ಯ ಶಾಸಕರಾದ ಶ್ರೀ ವಿಠ್ಠಲ ಸೋಮಣ್ಣ ಹಲಗೇಕರ್ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ರಾಜ್ಯ ಉಪಾಧ್ಯಕ್ಷರು ಹಾಗೂ ಬೆಳಗಾವಿ ಜಿಲ್ಲೆಯ ಮುಖ್ಯ ಆಯುಕ್ತರು ಆಗಿರುವ ಮಾನ್ಯ ಶ್ರೀ ಗಜಾನನ ಮನ್ನಿಕೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ರಾಜೇಶ್ವರಿ, ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀ ಎ.ಆರ್. ಅಂಬಿಗ ಹಾಗೂ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಗನ್ ಗೌಡ್ರು, ಪಟ್ಟಣ ಪಂಚಾಯಿತಿಯ ಶ್ರೀಮತಿ ಮೇಘ, ಶ್ರೀಮತಿ ಕುಂದರಗಿ ವಾಸಂತಿ ಬಡಿಗೇರ್ ಶಾಸಕರ ಮಾದರಿ ಶಾಲೆ ಗುರುಮಾತೆಯಾದ ಶ್ರೀಮತಿ ಕೊಜ್ಜಿ ಉಪಸ್ಥಿತರಿದ್ದರು.

* ಫೆಬ್ರವರಿ 13ರಂದು ಸ್ಥಳೀಯ ಸಂಸ್ಥೆ ಚನ್ನಮ್ಮನ ಕಿತ್ತೂರು ವತಿಯಿಂದ ಸ್ಕೌಟ್ಸ್–ಗೈಡ್ಸ್‌ಗಳ ತಾಲೂಕು ಹಂತದ ರ್‍ಯಾಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ತಾಲೂಕಿನ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಾದ ಡಾ. ಪ್ರಕಾಶ್ ಮೆಳವಂಕಿ ರವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಮೊದಲಿಗೆ ರಾಣಿಚನ್ನಮ್ಮ ಸರ್ಕಲ್‌ದಿಂದ ಕಿತ್ತೂರು ಕೋಟೆ ಆವರಣದವರೆಗೆ ವಿವಿಧ ಸಂದೇಶಗಳನ್ನು ನೀಡುವಂತಹ ಫಲಕಗಳೊಂದಿಗೆ ಜಾಗೃತಿ ಮೂಡಿಸುತ್ತ ರಾಣಿಚನ್ನಮ್ಮನ ಕೋಟೆ ಆವರಣವನ್ನು ಸೇರಲಾಯಿತು. ಅಲ್ಲಿ ಆವರಣದ ಸ್ವಚ್ಛತೆ ಕಾರ್ಯ ಮಾಡಿಸಲಾಯಿತು. ನಂತರ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಆರ್.ಪಿ. ಜುಟ್ಟನವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಶ್ರೀಮತಿ ಗಾಯತ್ರಿ ಅಜ್ಜನ್ನವರ, ಅಕ್ಷರ ದಾಸೋಹದ ಸಹಾಯಕ ನಿರ್ದೇಶಕರಾದ ಶ್ರೀ ಪ್ರಕಾಶ್ ಮೆಳವಂಕಿ, ಜಿಲ್ಲಾ ಸಂಸ್ಥೆಯ ಎ.ಎಸ್.ಓ.ಸಿ.ರವರಾದ ಶ್ರೀ ವಿಠ್ಠಲ, ಮಾರ್ಗದರ್ಶಕರಾದ ಶ್ರೀ ಬಸವರಾಜ್ ಬಿದರಿ, ಪ್ರಾಚ್ಯ ವಸ್ತು ಸಂಗ್ರಹಾಲಯದ ಮೇಲ್ವಿಚಾರಕರಾದ ಶ್ರೀ ರಾಘವೇಂದ್ರ ಮತ್ತು ಶಿಕ್ಷಣ ಸಂಯೋಜಕರಾದ ಶ್ರೀ ಎಸ್.ಎಸ್. ಶಾಪುರಮಠರವರು ಭಾಗವಹಿಸಿದ್ದರು.



* ಫೆಬ್ರವರಿ 13 ಸ್ಥಳೀಯ ಸಂಸ್ಥೆ ಹುಕ್ಕೇರಿ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ತಾಲೂಕು ಹಂತದ ಮೇಳ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಶ್ರೀ ಗಜಾನನ ಮನ್ನಿಕೇರಿ, ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಬೆಳಗಾವಿ ಇವರು ಚಾಲನೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಹಾಯಕ ರಾಜ್ಯ ಆಯುಕ್ತರಾದ (ಗೈಡ್ಸ್) ಶ್ರೀಮತಿ ಪ್ರಭಾವತಿ ಪಾಟೀಲ, ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ಪದ್ಮನ್ನವರ, ಸಿ.ಆರ್.ಪಿ.ಬಿ.ಆರ್.ಪಿ.ಗಳು, ಶ್ರೀ ಎನ್.ಬಿ. ಗುಡಸಿ, ಎನ್.ಜಿ. ಪಾಟೀಲ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕೆ.ಬಿ.ಎಸ್.



ಕೋಟೆ ಭಾಗ ಇಲ್ಲಿ ಸ್ಥಳೀಯ ಸಂಸ್ಥೆಯ ನೂತನ ಕಚೇರಿಯನ್ನು ಜಿಲ್ಲಾ ಮುಖ್ಯ ಆಯುಕ್ತರು ಉದ್ಘಾಟಿಸಿದರು. ಪಥಸಂಚಲನದ ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. 400ಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್ ಹಾಗೂ 50 ಸ್ಕೌಟರ್–ಗೈಡರ್ ಭಾಗವಹಿಸಿದ್ದರು.

* ಕರ್ನಾಟಕ ಸರ್ಕಾರ, ಸಮಾಜ ಕಲ್ಯಾಣ ಇಲಾಖೆ, ತಾಲೂಕಾ ಆಡಳಿತ, ಪುರಸಭೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬೈಲಹೊಂಗಲ ಮತ್ತು ಸ್ಕೌಟ್–ಗೈಡ ಸ್ಥಳೀಯ ಘಟಕ ಬೈಲಹೊಂಗಲ ಇವರ ಸಂಯುಕ್ತ ಆಶ್ರಯದಲ್ಲಿ 75ನೇ ಗಣರಾಜ್ಯೋತ್ಸವದ ನಿಮಿತ್ತವಾಗಿ "ಸಂವಿಧಾನ ಜಾಗೃತಿ ಜಾಥಾ" ಕಾರ್ಯಕ್ರಮವನ್ನು ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದರ ನಿಮಿತ್ತ ನಗರದ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ 500 ಸ್ಕೌಟ್–ಗೈಡ್ ಮಕ್ಕಳು ಜಾಗೃತಿ ಜಾಥಾದಲ್ಲಿ (ರ್‍ಯಾಲಿ) ಭಾಗವಹಿಸಿದ್ದರು. ಚನ್ನಮ್ಮ ಸಮಾಧಿ ಮುಂಭಾಗದ ಸಮಾರಂಭದಲ್ಲಿ ತಹಸಿಲ್ದಾರ್, ಪುರಸಭೆ ಮುಖ್ಯ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾತನಾಡಿದರು. ಸಾರ್ವಜನಿಕರಿಗೆ ಸಂವಿಧಾನದ ಆಶಯವನ್ನು ಕುರಿತು ಸ್ಥಳೀಯ ಸ್ಕೌಟ್–ಗೈಡ್‌ಗಳು ಫಲಕ ಪ್ರದರ್ಶನ ಮಾಡಿ ಅರಿವು ಮೂಡಿಸಿದರು. ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನದವರೆಗೆ ಜಾಥಾ ತೆರಳಿ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲೆಯನ್ನು ಹಾಕುವುದರ ಮೂಲಕ ಕಾರ್ಯಕ್ರಮ ಮುಕ್ತಾಯ ಮಾಡಲಾಯಿತು. ಉಪನಿರ್ದೇಶಕರಾದ ಶ್ರೀ ಬಿ.ಕೆ. ನಾದನೂರ, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಎಸ್.ಎಂ. ಮುಲ್ಲಾ, ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀ ಎಸ್.ಎಂ. ಕುರಣಿ, ಬಿ.ಆರ್.ಸಿ. ಶ್ರೀ ಅಡಿವೆಪ್ಪ ಛಬ್ಬಿ, ಸ್ಕೌಟ್ ವಿಭಾಗದ ನಾಯಕರಾದ ಶ್ರೀ ಜಗದೀಶ ಬೋಳಸುರ, ಶ್ರೀ ಆರ್.ಡಿ. ಗಲಗಲಿ, ಗೈಡ್ ವಿಭಾಗದ ನಾಯಕರಾದ, ಶ್ರೀಮತಿ ಭಾರತಿ ಹೊಸಮನಿ ಆರ್.ಎಂ.ಎಸ್.ಎ. ಶಾಲೆಯ ಮುಖ್ಯ ಗುರುಗಳಾದ ಶ್ರೀ ಸಿದ್ದಣಅಣ ಸತ್ತಿಗೇರಿ ಶಿಬಿರದಲ್ಲಿ 62 ಸ್ಕೌಟ್, 30 ಗೈಡ್ ಶಿಬಿರಾರ್ಥಿಗಳು ಭಾಗವಹಿಸಿದ್ದರು.

## ಬಳ್ಳಾರಿ

ಜನವರಿ 19 ರಿಂದ 25ರ ವರೆಗೆ ಶ್ರೀ ಮಹರ್ಷಿ ವಾಲ್ಮೀಕಿ ಭವನ ಬಳ್ಳಾರಿಯಲ್ಲಿ ಮೂಲ ತರಬೇತಿ ಜರುಗಿತು. ಈ ಮೂಲ ತರಬೇತಿಗೆ ಗೈಡ್ಸ್ ವಿಭಾಗದಲ್ಲಿ 125 ಹಾಗೂ ಸ್ಕೌಟ್ಸ್ ವಿಭಾಗದಲ್ಲಿ 90 ಒಟ್ಟು 215 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಶಶಿಕಲಾ, ಶ್ರೀಮತಿ ನಾಗರತ್ನಮ್ಮ, ಶ್ರೀಮತಿ ಜ್ಯೋತಿ ದರೋಜಿರವರು ನಾಯಕಿಯರಾಗಿದ್ದರು. ಸ್ಕೌಟ್ಸ್ ವಿಭಾಗಕ್ಕೆ ಶ್ರೀ ಎಂ. ನಾಗರಾಜ, ಡಿ.ಟಿ.ಸಿ., ಬಳ್ಳಾರಿ, ಶ್ರೀ ಶ್ರೀಕಾಂತ ಮಾಸ್ಗಟ್ಟಿ ಡಿ.ಟಿ.ಸಿ. ಕೊಪ್ಪಳ ಶ್ರೀ ನಟರಾಜ ಸ್ವಾಮಿ,



ಕಾರ್ಯದರ್ಶಿ, ಸಿರುಗುಪ್ಪ ಭಾಗವಹಿಸಿದ್ದರು. ಶ್ರೀ ಪ್ರಕಾಶ್ ಕುಮಾರ ಮಿಶ್ರಾ ಭಾ.ಆ.ಸೇ., ಬಳ್ಳಾರಿ, ಅಧ್ಯಕ್ಷರು ಭಾ.ಸ್ಕೌ.ಗೈ ಬಳ್ಳಾರಿ. ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಶ್ರೀಮತಿ ಉಮಾದೇವಿ, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರು (ಆಡಳಿತ) ಬಳ್ಳಾರಿ, ಶ್ರೀಮತಿ ಮಲ್ಲೇಶ್ವರಿ ಜೂಜಾರೆ ಎಂ.ಎಸ್.ಓ.ಸಿ. ಕಲ್ಯಾಣ ಕರ್ನಾಟಕ, ಶ್ರೀ ಸುಧಾಕರ, ಉಪನ್ಯಾಸಕರು, ಡಯಟ್, ಬಳ್ಳಾರಿ, ಶ್ರೀ ನಾಯಿರ್ ರಹಿಮ್ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಳ್ಳಾರಿ ಪೂರ್ವ, ಡಾ|| ಕೆ. ವೀರೇಶ್ ಕುಪ್ಪಗಲ್, ಜಿಲ್ಲಾ ಆಯುಕ್ತರು (ಸ್ಕೌಟ್) ಶ್ರೀ ವಿಜಯಸಿಂಹ, ಕಾರ್ಯದರ್ಶಿಗಳು, ಜಿಲ್ಲಾ ಸಂಸ್ಥೆ, ಬಳ್ಳಾರಿ, ಶ್ರೀ ಪ್ರಭಾಕರ್ ಖಜಾಂಚಿ, ಜಿಲ್ಲಾ ಸಂಸ್ಥೆ, ಬಳ್ಳಾರಿ, ಶ್ರೀ ಸೋಮಪ್ಪ, ಕಾರ್ಯದರ್ಶಿ, ಸಂಡೂರು, ಶ್ರೀ ದೊಡ್ಡಬಸಪ್ಪ, ಕಾರ್ಯದರ್ಶಿ, ಬಳ್ಳಾರಿ, ಶ್ರೀ ಅಯ್ಯನಗೌಡ ಸಿ.ಪಿ.ಐ. ಟ್ರಾಫಿಕ್ ಪೋಲಿಸ್ ಬಳ್ಳಾರಿ, ಶ್ರೀ ರಫಿಕ್ ಸೂಪರಿಡೆಂಟ್ ಬಳ್ಳಾರಿ ಇವರೆಲ್ಲರು ಶಿಬಿರಕ್ಕೆ ಭೇಟಿ ನೀಡಿ ಸಲಹೆ ಸೂಚನೆಗಳನ್ನು ನೀಡಿದರು.



* ಜನವರಿ 26 ರಂದು ತಾಲ್ಲೂಕು ಕ್ರೀಡಾಂಗಣ ಸಿರುಗುಪ್ಪ ಹಾಗೂ ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಧ್ವಜಾರೋಹಣ ಮಾಡಲಾಯಿತು. ತಾಲ್ಲೂಕು ಕ್ರೀಡಾಂಗಣದಲ್ಲಿ ಜನಪ್ರಿಯ ಶಾಸಕರಾದ ಶ್ರೀ ಬಿ.ಎಂ. ನಾಗರಾಜರವರು ಧ್ವಜಾರೋಹಣ ನೆರವೇರಿಸಿದರು. ನಗರದ ಎಲ್ಲಾ ಶಾಲೆಯ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ಪಥಸಂಚಲನದಲ್ಲಿ



ಪಾಲ್ಗೊಂಡಿದ್ದರು. ಸರ್ಕಾರಿ ಪ್ರೌಢಶಾಲೆ ಕೆ. ಬೆಳಗಲ್ ತಾಲ್ಲೂಕು ಸಿರುಗುಪ್ಪದಲ್ಲಿ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ವೀರಭದ್ರಗೌಡ್ರು ಹಾಗೂ ಮುಖ್ಯ ಗುರುಗಳು ಶ್ರೀ ರಸುಲ್ ಸಾಬ್ ಸಾಂಗ್ಲಿ, ಶ್ರೀ ನಟರಾಜ ಸ್ವಾಮಿ ಕಾರ್ಯದರ್ಶಿಗಳು ಸಿರುಗುಪ್ಪ, ಸದಸ್ಯರು, ಸಹ ಶಿಕ್ಷಕರು, ಅತಿಥಿ ಶಿಕ್ಷಕರು ಮಕ್ಕಳೊಂದಿಗೆ ಧ್ವಜಾರೋಹಣ ಮಾಡಲಾಯಿತು.

## ಬೆಂಗಳೂರು ಗ್ರಾಮಾಂತರ

ಇತ್ತೀಚೆಗೆ ನೆಲಮಂಗಲ ತಾಲ್ಲೂಕಿನ ತ್ಯಾಮಗೊಂಡ್ಲು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನ ರೋವರ್ ಘಟಕವನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ತಿಮ್ಮಹನುಮಯ್ಯ, ರೋವರ್ ಸ್ಕೌಟ್ ಲೀಡರ್ ಶ್ರೀದಿವಾಕರ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಪ್ರಕಾಶ್, ಕಾಲೇಜಿನ ಉಪನ್ಯಾಸಕರು ಹಾಗೂ ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು.



* ನೆಲಮಂಗಲ ತಾಲ್ಲೂಕಿನ ಬೈರಶೆಟ್ಟಿಹಳ್ಳಿಯ ಶ್ರೀ ಬೈಲಾಂಜನೇಯ ಪ್ರೌಢಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್‌ನ ಪ್ರಾದೇಶಿಕ ನಿರ್ದೇಶಕ ಶ್ರೀ ಎಂ. ಶೀನಪ್ಪ ಉದ್ಘಾಟಿಸಿದರು. ಸ್ಥಳೀಯ ಸಂಸ್ಥೆ ಅಧ್ಯಕ್ಷ ಶ್ರೀ ವಿ. ರಾಮಸ್ವಾಮಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಗ್ರಾಮಾಂತರ ಜಿಲ್ಲಾ ನಿರ್ದೇಶಕ ಶ್ರೀ ಉಮಾರಬ್ಬ, ತಾಲ್ಲೂಕು ಯೋಜನಾ ನಿರ್ದೇಶಕಿ ಶ್ರೀಮತಿ ಸುಜಾತಾ ಎಸ್. ಶೆಟ್ಟಿ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಬೆಂಗಳೂರು ದಕ್ಷಿಣ

ಫೆಬ್ರವರಿ 03 ರಂದು ನ್ಯೂಬಾಲ್ಡ್ ವಿನ್ ಶಾಲೆಯಲ್ಲಿ ಹಲಸೂರು ಸ್ಥಳೀಯ ಸಂಸ್ಥೆಯ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತು. ರ್‍ಯಾಲಿಯ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ರೇವ್ ಡೆವೀಡ್, ಶ್ರೀ ಟಿ.ಕೆ. ನಾರಾಯಣಸ್ವಾಮಿ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌ), ಶ್ರೀ ಜಿತೇಶ್ ಅರುಣ್ ಸೇಠ್, ರಾಜ್ಯ ಸ್ಥಾನೀಕ ಆಯುಕ್ತರು (ಸ್ಕೌ), ಶ್ರೀ ಎನ್. ಆನಂದ್, ಜಯನಗರ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಚೆರ್ಮನ್, ದಳನಾಯಕರುಗಳು, ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್ ಒಟ್ಟು 320 ಶಿಬಿರಾರ್ಥಿಗಳು ಭಾಗವಹಿಸಿದರು.



* ಫೆಬ್ರವರಿ 10 ರಂದು ಸೆಂಟ್ ಆಂಥೋಣಿ ಶಾಲೆಯ ಆವರಣದಲ್ಲಿ ಕೆ.ಆರ್.ಪುರಂ ಸ್ಥಳೀಯ ಸಂಸ್ಥೆಯ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತ್ತು. ರ್‍ಯಾಲಿಯನ್ನು ಶ್ರೀ ಬಿ.ಎಂ. ಬಸವರಾಜು ಎಂ.ಎಲ್.ಎ., ಕೆ.ಆರ್.ಪುರಂ ವಿಧಾನ ಸಭಾ ಕ್ಷೇತ್ರ ಇವರು ಉದ್ಘಾಟಿಸಿದರು. ಸಿಲಿಕಾನ್ ಸಿಟಿ ಕಾಲೇಜಿನ ಫೌಂಡರ್‌ರಾದ ಶ್ರೀ ಚಂದ್ರಶೇಖರ್, ಶ್ರೀ ಎಸ್.ಎಲ್.ವಿ. ಶೇಖರ್ ಸಮಾಜ ಸೇವಕರು, ಶ್ರೀ ವೆಂಕಟೇಶ್, ಎ.ಡಿ.ಸಿ. (ಎಸ್), ಡಾ॥ ನಾಗೇಶ್, ಎ.ಡಿ.ಸಿ. (ಎಸ್), ಡಾ॥ ಮಾನಸ ಹೆಬ್ಬಾರ್, ಎ.ಡಿ.ಸಿ.(ಜಿ) ಆಗಮಿಸಿ ಚಟುವಟಿಕೆಗಳನ್ನು ವೀಕ್ಷಿಸಿ ಮಕ್ಕಳೊಂದಿಗೆ ಸಂವಾದ ನಡೆಸಿದರು. ರ್‍ಯಾಲಿಯಲ್ಲಿ ಒಟ್ಟು 28 ಶಾಲೆಗಳಿಂದ 1050 ಸ್ಕೌಟ್ಸ್-ಗೈಡ್ಸ್, ಕಬ್-ಬುಲ್‌ಬುಲ್, ದಳನಾಯಕರುಗಳು ಭಾಗವಹಿಸಿದ್ದರು.



* ಫೆಬ್ರವರಿ 10 ರಂದು ಹೆಚ್.ಎ.ಎಲ್. ನ್ಯೂ ಪಬ್ಲಿಕ್ ಶಾಲೆಯಲ್ಲಿ ವೈಟ್ ಫೀಲ್ಡ್ ಸ್ಥಳೀಯ ಸಂಸ್ಥೆಯ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತು. ರ್‍ಯಾಲಿಯ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಹೆಚ್.ಎ.ಎಲ್. ನ್ಯೂ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಡಾ॥ ಓಂಸಿಂಗ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರ್‍ಯಾಲಿಯಲ್ಲಿ ಒಟ್ಟು 680 ಸ್ಕೌಟ್ಸ್-ಗೈಡ್ಸ್, ದಳನಾಯಕರುಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

* ಫೆಬ್ರವರಿ 17 ರಂದು ಚಿನ್ಮಯ ವಿದ್ಯಾಲಯ ಶಾಲೆಯಲ್ಲಿ ವಿಲ್ಸನ್ ಗಾರ್ಡನ್ ವಾರ್ಷಿಕ ರ್‍ಯಾಲಿಯನ್ನು ಆಯೋಜನೆ ಮಾಡಲಾಯಿತು. ರ್‍ಯಾಲಿಯ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಶ್ರೀಮತಿ ಗೀತಿಕಾ ಕರೋಲಾ ಸ್ಥಳೀಯ ಸಂಸ್ಥೆಯ ಕಾರ್ಯಕಾರಿ ಸಮಿತಿ ಛೇರ್ಮನ್ ರ್‍ಯಾಲಿಯಲ್ಲಿ ಒಟ್ಟು 300 ಸ್ಕೌಟ್ಸ್-ಗೈಡ್ಸ್, ದಳನಾಯಕರುಗಳು ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

* ಫೆಬ್ರವರಿ 17 ರಂದು ಜ್ಞಾನಬೋಧಿನಿ ಪ್ರಾಥಮಿಕ ಶಾಲೆಯಲ್ಲಿ ಮತ್ತು ಚಿನ್ನಯಿ ಶಾಲೆಯಲ್ಲಿ ವಾರ್ಷಿಕ ಶಿಬಿರವನ್ನು ಆಯೋಜನೆ ಮಾಡಲಾಯಿತು. ಕುಂಕಿಗ್ ವಿಥ್ ಔಟ್ ಫೈಯರ್, ಚಿತ್ರಕಲಾ ಸ್ಪರ್ಧೆ, ದಿಯಾ ಪೈಟಿಂಗ್, ಸ್ಪರ್ಧೆ, ಶಿಬಿರಾಗ್ನಿ ಕಾರ್ಯಕ್ರಮ, ಹೊರ ಸಂಚಾರವನ್ನು ಆಯೋಜನೆ ಮಾಡಲಾಯಿತು.

## ಬೆಂಗಳೂರು ಉತ್ತರ

ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ ಶ್ರೀ ಅಯ್ಯಪ್ಪ ಎಜುಕೇಶನ್ ಸೆಂಟರ್ ಅಬ್ಬಿಕೆರೆ ಇಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್-ಗೈಡ್ಸ್ ರ್‍ಯಾಲಿಯನ್ನು ಫೆಬ್ರವರಿ 17 ಮತ್ತು 18 ರಂದು ನಡೆಸಲಾಯಿತು. ಫೆಬ್ರವರಿ 17 ರಂದು ಪೂರ್ವಾಹ್ನ ದಾಖಲಾತಿಯೊಂದಿಗೆ ಆರಂಭವಾಯಿತು. ತದನಂತರ ಧ್ವಜವಂದನೆ ಮಾಡಲಾಯಿತು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ. ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಶಿಬಿರದ ಉದ್ಘಾಟನಾ ಕಾರ್ಯದಲ್ಲಿ ರಾಜ್ಯ ಮುಖ್ಯ ಆಯುಕ್ತರು ಆಗಮಿಸಿ ಶಿಬಿರಾರ್ಥಿಗಳಿಗೆ ಶುಭಾಶಯ ಕೋರಿದರು. ಶಾಲಾ ಛೇರ್‌ಮನ್ ಶ್ರೀ ಎ.ವಿ. ನಾರಾಯಣ್ ಉಪಸ್ಥಿತರಿದ್ದರು. ಫೆಬ್ರವರಿ 18 ರಂದು ಸರ್ವಧರ್ಮ ಪ್ರಾರ್ಥನೆ ಮಾಡಲಾಯಿತು. ಸಮಾರೋಪ ಕಾರ್ಯಕ್ರಮದಲ್ಲಿ ಹಿರಿಯ ಸ್ಕೌಟರ್ ಶ್ರೀ ಚಂದ್ರಶೇಖರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ತಮ್ಮ ಸ್ಕೌಟಿಂಗ್ ಅನುಭವ ಹಂಚಿಕೊಂಡರು. ಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಅಮಿತರವರು ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ಉಪಮುಖ್ಯ ಶಿಕ್ಷಕರಾದ ಶ್ರೀಮತಿ ಜಯಲಕ್ಷ್ಮಿ ಇವರು ಕಾರ್ಯಕ್ರಮವನ್ನು






ನಿರೂಪಿಸಿದರು. ಜಾಲಹಳ್ಳಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕಾಂತಾಕುಮಾರ್ ಯಲಹಂಕ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಮೋಹನ್ ಕುಮಾರ್ ಉಪಸ್ಥಿತರಿದ್ದರು.

* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮದಡಿಯಲ್ಲಿ ಫೆಬ್ರವರಿ 21 ರಂದು ಗಂಟಿಗಾನಹಳ್ಳಿಯ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿ ನದಿಯ ದಂಡೆಯ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಛಗೊಳಿಸಲಾಯಿತು. ಗಂಟಿಗಾನಹಳ್ಳಿ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಸುಮಾರು 2000 ಗಿಡಗಳಿಗೆ ನೀರನ್ನು ಹಾಕಲಾಯಿತು. ಪಿ.ಡಿ.ಒ.ರವರು ತಮ್ಮ ಸಹಕಾರ ನೀಡಿದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ಕಾಲೇಜುಗಳಿಂದ ರೋವರ್ಸ್ – ರೇಂಜರ್ಸ್ ಭಾಗವಹಿಸಿದ್ದರು.



* The SHIVAJI NAGAR LOCAL ASSOCIATION organised ANNUAL RALLY on 20th January 2024, at GOOD WILL GIRLS HIGH School. The Program was inaugurated by Mrs. Gayna Mani, Principal of the School.

Dance & Action was Presented. The Program was co-ordinated by Smt. REVATHY BALAKRISHNAN L.T., (B) & SLA CO-ORDINATOR BSG BND. The Program was organised by SECRETARY Dr. KRUPA VIJAI LT (G)

## ಚಿಕ್ಕಮಗಳೂರು

ಫೆಬ್ರವರಿ 21 ರಂದು ನಡೆದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಎಸ್.ಟಿ.ಜೆ. ಕಾಲೇಜಿನಲ್ಲಿ ಆಚರಿಸಲಾಯಿತು. ಇದರ ಉದ್ಘಾಟನೆಯನ್ನು ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್‌ರವರು ನೆರವೇರಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಇವರು ಉಪಸ್ಥಿತರಿದ್ದರು. ಎಸ್.ಟಿ.ಜೆ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಭಾರತಿ, ರೇಂಜರ್ ಲೀಡರ್ ಸುಹಾನ ಸುಲ್ತಾನ್ ಆರ್.ಎಸ್.ಎಲ್. ಶ್ರೀ ಚಂದ್ರಶೇಖರ್, ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಬಿ.ಎಂ. ಕಿರಣ್, ಎಸ್.ಜೆ.ವಿ. ನಿಹಾಲ್ ಉಪಸ್ಥಿತರಿದ್ದರು ಹಾಗೂ ವಿವಿಧ ಕಾಲೇಜುಗಳಿಂದ ಉಪಸ್ಥಿತರಿದ್ದ ಸುಮಾರು 60 ಮಕ್ಕಳು ಭಾಗವಹಿಸಿದ್ದರು.



* ಜನವರಿ 26 ರಂದು ಜಿಲ್ಲಾ ಆಟದ ಮೈದಾನದಲ್ಲಿ ಹಾಗೂ ಜಿಲ್ಲಾ ಆಡಳಿತದ ಸಹಾಯದಿಂದ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಪಥಸಂಚನದಲ್ಲಿ ಆರು ತುಕಡಿಗಳು ಭಾಗವಹಿದ್ದವು. ಅದರಲ್ಲಿ ಇನ್‌ಫೆಂಟ್ ಜೀಸಸ್ ಶಾಲೆಯ ಸ್ಕೌಟ್ ತುಕಡಿ ಪ್ರಥಮ ಬಹುಮಾನ ಪಡೆಯಿತು.

* ಜನವರಿ 27 ರಂದು ಜಿಲ್ಲಾ ಸಂಸ್ಥೆ ಚಿಕ್ಕಮಗಳೂರು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ ಅವರ ಅಧ್ಯಕ್ಷತೆಯಲ್ಲಿ ತಾಲ್ಲೂಕುವಾರು ಸಭೆಗಳು ಹಾಗೂ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವು ಜಿಲ್ಲಾ ಸಂಸ್ಥೆಯಲ್ಲಿ ನಡೆಯಿತು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಆಗಮಿಸಿ ಪ್ರಶಸ್ತಿ ಪ್ರಧಾನ ಮಾಡಿದರು. ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಆಯುಕ್ತರು ಸ್ಕೌಟ್ಸ್, ಜಿಲ್ಲಾ ಕಾರ್ಯದರ್ಶಿ ಶ್ರೀ ಟಿ.ಕೆ. ಪಣಿರಾಜ್, ಜಿಲ್ಲಾ ತರಬೇತಿದಾರರಾದ ಶ್ರೀಮತಿ ಸಂಧ್ಯಾರಾಣಿ, ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಾಚಾರ್ ಉಪಸ್ಥಿತರಿದ್ದರು.



* ಜನವರಿ 28 ರಂದು ಚಿಕ್ಕಮಗಳೂರು ಜಿಲ್ಲೆಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಭೇಟಿ ನೀಡಿ ಜಿಲ್ಲೆಯ ತೇಗೂರು ಕ್ಯಾಂಪ್ ಸೈಟ್‌ನ ತಡೆಗೋಡೆಗಳ ಕಾಮಗಾರಿಯನ್ನು ವೀಕ್ಷಿಸಿ ಮುಂದಿನ ಹಂತದ ಕಾರ್ಯದ ಬಗ್ಗೆ ಸೂಚಿಸಿದರು, ಅದೇ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿ, ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ.ಎನ್. ಮಹೇಶ್, ಜಿಲ್ಲಾ ಸಂಸ್ಥೆಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಾಚಾರ್ಯ ಉಪಸ್ಥಿತರಿದ್ದರು.



* ಫೆಬ್ರವರಿ 03 ರಂದು ಮಾಡೆಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬೆಂಕಿ ರಹಿತ ಅಡುಗೆ ಸ್ಪರ್ಧೆ ಆಯೋಜಿಸಲಾಗಿತ್ತು.

* ಫೆಬ್ರವರಿ 07 ರಂದು ಕರ್ನಾಟಕ ಪಬ್ಲಿಕ್ ಶಾಲೆ ಕಳಸಾಪುರ ಇಲ್ಲಿ ನೂತನ ವಿವೇಕಾನಂದ ಸ್ಕೌಟ್ ಘಟಕವನ್ನು ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಬಿ.ಎಂ. ಕಿರಣ್ ಕುಮಾರ್ ಉದ್ಘಾಟಿಸಿದರು. ಎಸ್.ಜಿ.ವಿ. ನಿಹಾಲ್ ಎನ್.ಎಸ್. ಸ್ಕೌಟ್ ಮಾಸ್ಟರ್ ಶ್ರೀ ಗಂಗೇಗೌಡ ಹಾಗೂ ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

* ಫೆಬ್ರವರಿ 16 ರಂದು ಚಿಕ್ಕಮಗಳೂರು ತಾಲ್ಲೂಕಿನ ಅಂಬಳೆ ಜಿ.ಹೆಚ್.ಪಿ.ಎಸ್. ಶಾಲೆಯಲ್ಲಿ ಮಾತೆ ಸಾವಿತ್ರಿಬಾಯಿ ಫುಲೆರವರ ಹೆಸರಿನಲ್ಲಿ ಗೈಡ್ಸ್ ತಂಡವನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಎಂ.ಎನ್. ಷಡಕ್ಷರಿರವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಕುಮಾರ್, ಶಾಲೆಯ ಮುಖ್ಯೋಪಾಧ್ಯಾಯನಿಯರಾದ ಶ್ರೀಮತಿ ಸುಮಿತ್ರ ಹಾಗೂ ಶಾಲೆಯ ಸಹ ಶಿಕ್ಷಕರುಗಳು ಹಾಗೂ ಜಿಲ್ಲಾ ಸಂಘಟನಾ ಆಯುಕ್ತರಾದ ಶ್ರೀ ಬಿ.ಎನ್. ಕಿರಣ್‌ಕುಮಾರ್ ಉಪಸ್ಥಿತರಿದ್ದರು.




## ಚಿತ್ರದುರ್ಗ

"ಇಂದಿನ ದಿನಮಾನಗಳಲ್ಲಿ ನಾವು ತೊಡುವ ಬಟ್ಟೆಗಿಂತ ಬದುಕನ್ನು ಕಟ್ಟಿಕೊಳ್ಳುವ ಪ್ರವೃತ್ತಿ ಬಹು ಮುಖ್ಯವಾದದ್ದು. ಇಂತಹ ಪ್ರವೃತ್ತಿಯನ್ನು ಪ್ರತಿಯೊಬ್ಬರು ಅರಿಯಬೇಕು" ಎಂದು ಮುರುಘಾ ಮಠದ ಶ್ರೀ ಶ್ರೀ ಬಸವ ಪ್ರಭು ಸ್ವಾಮೀಜಿಗಳು ಹೇಳಿದರು. ಚಿತ್ರದುರ್ಗ ಜಿಲ್ಲೆಯ ಮುರುಘಾ ಮಠದಲ್ಲಿ ಜನವರಿ 29 ರಿಂದ 31ರ ವರೆಗೆ ಆಯೋಜಿಸಿದ್ದ ಕಬ್ಸ್ – ಬುಲ್‌ಬುಲ್ಸ್‌ಗಳಿಗೆ ತೃತೀಯ ಚರಣ್, ಹಿರಕ್ ಪಂಕ್, ಸ್ಕೌಟ್–ಗೈಡ್ಸ್‌ಗಳಿಗೆ ತೃತೀಯ ಸೋಪಾನ ಪರೀಕ್ಷ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶಿರ್ವಚನ ನೀಡಿದರು. ಉಪಾಧ್ಯಕ್ಷರಾದ ಶ್ರೀ ಪರಮೇಶ್ವರಪ್ಪ ಮಾತನಾಡಿ, "ಮಕ್ಕಳಲ್ಲಿರುವ ಸಮಾಜ ಸೇವೆಯ ವಿಶೇಷ ಆಸಕ್ತಿಯನ್ನು ಪ್ರೇರೆಪಿಸಬೇಕು. ಮಕ್ಕಳು ಇಂತಾಹ ಪರೀಕ್ಷೆಗಳಲ್ಲಿ ಉತೀರ್ಣರಾಗಿ ತಮ್ಮ ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಿಕೊಳ್ಳಬೇಕು" ಎಂದು ತಿಳಿಸಿದರು. ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಸವಿತಾ ಶಿವಕುಮಾರ್ ಮಾತನಾಡಿ, "ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಪರೀಕ್ಷಾ ಶಿಬಿರಗಳಲ್ಲಿ ಭಾಗವಹಿಸುವುದು ಕೇವಲ ತಮ್ಮ ಜ್ಞಾನ ತೋರ್ಪಡಿಕೆಗಷ್ಟೆ ಸೀಮಿತವಾಗಬಾರದು ಇಲ್ಲಿ ಕಲಿತದ್ದನ್ನು ಮುಂದೆಯೂ ಸಹ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು" ಎಂದು ಕಿವಿಮಾತು ಹೇಳಿದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಮತ್ತಿತರರಿದ್ದರು.



## ದಾವಣಗೆರೆ

ಜನವರಿ 12 ರಂದು ಹರಿಹರ ಸ್ಥಳೀಯ ಸಂಸ್ಥೆಯ ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆಯಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹರಿಹರ ನಗರ ಪೊಲೀಸ್ ಠಾಣೆ ಪೊಲೀಸ್ ಅಧಿಕಾರಿಗಳಿಂದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಿಕ್ಷಕರು ಮತ್ತು ಪೋಷಕರಿಗೂ ರಸ್ತೆ ಸುರಕ್ಷತೆ ಬಗ್ಗೆ ಮಾಹಿತಿ ನೀಡಲಾಯಿತು.

* ಜನವರಿ 14 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ವಸತಿಯುತ ಶಾಲೆಯಲ್ಲಿ ಮತ್ತು ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ರಸ್ತೆ ಸುರಕ್ಷತಾ ಕ್ರಮಗಳು ಮತ್ತು ಟ್ರಾಫಿಕ್ ಸಿಗ್ನಲ್‌ಗಳ ಪಾಲನೆ ಬಗ್ಗೆ ಅರಿವು ಮೂಡಿಸಿದರು. ಈ ಸಂದರ್ಭದಲ್ಲಿ ಟ್ರಾಫಿಕ್ ಹೆಡ್ ಕಾನ್ಸೆಟೆಬಲ್ ಶ್ರೀ ಬಸವರಾಜ್ ಟಿ.ಎಸ್, ಶ್ರೀ ಸಿದ್ದಾರ್ಥ್ ಹೆಚ್.ಹೆಸ್. ಪ್ರಾಂಶುಪಾಲರುಗಳಾದ ಶ್ರೀ ಸೋಮಶೇಖರ್, ಶ್ರೀ ಕೊಟ್ರೇಶ್, ಸ್ಕೌಟ್

ಮಾಸ್ಟರ್‌ಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ. ಮತ್ತು ಶ್ರೀ ವಿಜಯ್ ಉಪಸ್ಥಿತರಿದ್ದರು.

* ಜನವರಿ 16 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್‌ಮೋಲ್ ಪಬ್ಲಿಕ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸಂಚಾರ ಪೋಲೀಸ್ ಠಾಣೆ ಅಧಿಕಾರಿಗಳ ಸಹಯೋಗದೊಂದಿಗೆ ಹೆಲ್ಮೆಟ್, ಟ್ರಿಪಲ್ ರೈಡಿಂಗ್ ಮತ್ತು ಸಂಚಾರಿ ನಿಯಮಗಳ ಪಾಲನೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.




* ಜನವರಿ 16 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಮತ್ತು ಬಾಲಕರ ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆ, ಚಿರಡೋಣಿ ಇವರ ಸಂಯುಕ್ತಾಶ್ರಯದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



* ಜನವರಿ 17 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತಿಮ್ಲಾಪುರದಲ್ಲಿ ಕಬ್ ಮತ್ತು ಬುಲ್‌ಬುಲ್ ಮಕ್ಕಳು ರಸ್ತೆ ಸುರಕ್ಷತಾ ಸಪ್ತಾಹದಲ್ಲಿ ಭಾಗಿಯಾಗಿ ಹಳ್ಳಿ ಜನರಿಗೆ ಸುರಕ್ಷತೆಯ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀ ಜಯಪ್ಪನವರು ಸ್ಥಳಕ್ಕೆ ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿದರು.

* ಜನವರಿ 18 ರಂದು ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ಚಿರಡೋಣಿಯಲ್ಲಿ ಶ್ರೀ ರಾಮಲಿಂಗೇಶ್ವರ ಮಠ ಮತ್ತು ವಿದ್ಯಾಸಂಸ್ಥೆ ವತಿಯಿಂದ ಗೈಡ್ಸ್‌ಗಳಿಗೆ ಸಮವಸ್ತ್ರ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

* ಜನವರಿ 19 ರಂದು ದಾವಣಗೆರೆ ನಗರದ ರೇಣುಕಾ ಮಂದಿರದಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವನ್ನು ಮೂಡಿಸಿ ಶಾಲಾ ಮಕ್ಕಳಿಗೆ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ



ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಶ್ರೀಮತಿ ಉಮಾ ಪ್ರಶಾಂತ್‌ರವರು ವಹಿಸಿದ್ದರು. ಪೋಲಿಸ್ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು, ಶಾಲಾ ಮುಖ್ಯೋಪಾಧ್ಯಯರುಗಳು, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಜಿಲ್ಲಾ ಸಹಾಯಕ ಆಯುಕ್ತರುಗಳು ಭಾಗವಹಿಸಿದ್ದರು.

* ಜನವರಿ 21 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅನ್‌ಮೋಲ್ ಪಬ್ಲಿಕ್ ಶಾಲೆಯಲ್ಲಿ ಕುಕ್ಕಿಂಗ್ ವಿಥೌಟ್ ಫೈಯರ್ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಶ್ರೀ ಕೊಟ್ರೇಶ್ ಶಾಲಾ ಮುಖ್ಯೋಪಾಧ್ಯಾಯರು, ಶ್ರೀ ರವೀಂದ್ರಸ್ವಾಮಿ ಟಿ.ಎಂ., ಕಾರ್ಯದರ್ಶಿಗಳು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ, ಶ್ರೀ ವಿಜಯ್ ಸ್ಕೌಟ್ ಮಾಸ್ಟರ್ ರವರು ಉಪಸ್ಥಿತರಿದ್ದರು.

* ಜನವರಿ 24 ರಂದು ದಾವಣಗೆರೆ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ರಾಷ್ಟ್ರೋತ್ಥಾನ ಶಾಲೆ ಮತ್ತು ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಸಿದ್ದಗಂಗಾ ಶಾಲೆಯಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

* ಜನವರಿ 24 ರಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ನೆಲಹೊನ್ನೆ ತಾಂಡ, ಹೊನ್ನಾಳಿ ತಾಲ್ಲೂಕು ಇಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಬೇಟಿ ಬಚಾವ್, ಬೇಟಿ ಪಡಾವ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮಕ್ಕಳಿಗೆ ಆಶಾ ಕಾರ್ಯಕರ್ತೆಯರು ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಿ ಬಹುಮಾನ ವಿತರಿಸಲಾಯಿತು.

* ಜನವರಿ 24 ರಂದು ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೊರಟೂರು ಶಾಲೆಯ ಗೈಡ್ಸ್‌ಗಳು ಅಂಚೆ ಕಛೇರಿಯ ಸುಕನ್ಯ ಸಮೃದ್ದಿ ಯೋಜನೆ ಮತ್ತು ಉಳಿತಾಯ ಖಾತೆ ನಿರ್ವಹಣೆ ಬಗ್ಗೆ ಮಾಹಿತಿಯನ್ನು ಪಡೆದುಕೊಂಡರು.

* ಜನವರಿ 24 ರಂದು ಹೊನ್ನಾಳಿ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚನ್ನೇನಹಳ್ಳಿ ಇಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಜಾಥಾ ಹೋಗುವುದರ ಮೂಲಕ ಹೆಣ್ಣು ಮಕ್ಕಳ ಹಕ್ಕುಗಳು, ಶೋಷಣೆ ಬಗ್ಗೆ ಮಕ್ಕಳಿ ಜಾಗೃತಿ ಮೂಡಿಸಿದರು.

* ಜನವರಿ 25 ರಂದು ಜಿಲ್ಲಾಧಿಕಾರಿಗಳ ಕಛೇರಿಯ ತುಂಗಭದ್ರಾ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಮತದಾನ ದಿನಾಚರಣೆ ಕಾರ್ಯಕ್ರಮದಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ಡಿ.ಹಾಲಪ್ಪ ಜಿಲ್ಲಾ ತರಬೇತಿ ಆಯುಕ್ತರು ಸ್ಕೌಟ್ ಇವರಿಗೆ ಉತ್ತಮ ಬಿ.ಎಲ್.ಓ ಪ್ರಶಸ್ತಿ ನೀಡಿ ಜಿಲ್ಲಾಧಿಕಾರಿಗಳು ಅಭಿನಂದಿಸಿದರು.

* ಜನವರಿ 26 ರಂದು ಜಿಲ್ಲಾ ಸಂಸ್ಥೆಯಲ್ಲಿ 75ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಗಳ ವಿಶ್ವನಾಥ್, ಉಪಾಧ್ಯಕ್ಷರು, ಶ್ರೀಮತಿ ಶಾರದಾ ಮಗಾನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀಮತಿ ರತ್ನ.ಎಂ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬೂಸ್ನೂರು ವಿಶ್ವನಾಥ್ ಜಿಲ್ಲಾ ಖಜಾಂಚಿಗಳು ಹಾಗೂ ಜಿಲ್ಲಾ ಸಂಸ್ಥೆ ಎಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಜನವರಿ 26 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನಡೆದ ಪಥಸಂಚಲನದಲ್ಲಿ ಜಿಲ್ಲೆಯ ಶ್ರೀ ಸಿದ್ದೇಶ್ವರ ಪ್ರೌಢಶಾಲೆ ಆನಗೋಡಿನ ಸ್ಕೌಟ್ ವಿದ್ಯಾರ್ಥಿಗಳು ದ್ವಿತೀಯ ಬಹುಮಾನ ಪಡೆದರು.

* ಜನವರಿ 26 ರಂದು ಗಣರಾಜ್ಯೋತ್ಸವದ ಅಂಗವಾಗಿ ಚನ್ನಗಿರಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಬಾಲಕಿಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಬ್ಸ್ ಮತ್ತು ಬುಲ್‌ಬುಲ್ಸ್ ವಿದ್ಯಾರ್ಥಿಗಳು ಅತ್ಯುತ್ತಮ ಪಥಸಂಚಲನ ನಡೆಸಿದರು.

* ಜನವರಿ 26 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಪಿ.ಎಸ್.ಎಸ್.ಇ.ಎಂ ಆರ್ ಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಸ್ಕೌಟ್ ಗೈಡ್ ತಂಡವು ಬ್ಯಾಂಡ್ ಡಿಸ್ಪ್ಲೇ ವಿಭಾಗದಲ್ಲಿ ಪ್ರಥಮ ಬಹುಮಾನ ಪಡೆಯಿತು.



* ಜನವರಿ 29 ರಂದು ಸೆಂಟ್ ಪಾಲ್ಸ್ ಪದವಿ ಪೂರ್ವ ಕಾಲೇಜಿನಲ್ಲಿ ಎಸ್.ಎಸ್.ಕೆ ಟ್ರಸ್ಟ್, ಜೆ.ಜೆ.ಎಂ. ಮೆಡಿಕಲ್ ಕಾಲೇಜ್ ಮತ್ತು ಸೆಂಟ್ ಪಾಲ್ಸ್ ಇವರ ಸಂಯುಕ್ತಾಶ್ರಯದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ರೇಂಜರ್ಸ್‌ಗಳು ಸೇವೆ ಸಲ್ಲಿಸಿದರು.

* ಜನವರಿ 30 ರಂದು ಜಿಲ್ಲಾ ಸಂಸ್ಥೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪುಣ್ಯತಿಥಿಯಂದು ಗೌರವ ಸಮರ್ಪಣೆಯನ್ನು ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು ನೆರವೇರಿಸಿದರು.

* ಫೆಬ್ರವರಿ 04 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ತರಳಬಾಳು ಶಾಲೆಯಲ್ಲಿ ಕುಕ್ಕಿಂಗ್ ವಿಥೌಟ್ ಫೈಯರ್ ಚಟುವಟಿಕೆಯನ್ನು ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ಮುಖ್ಯಸ್ಥರಾದ ಶ್ರೀ ಸೋಮಶೇಖರ್, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ, ಶ್ರೀಮತಿ ಅನಿತಾ ಗೈಡ್ ಕ್ಯಾಪ್ಟನ್ ಶ್ರೀ ಶಶಿಕುಮಾರ್, ಸ್ಕೌಟ್ ಮಾಸ್ಟರ್ ಉಪಸ್ಥಿತರಿದ್ದರು.

* ಫೆಬ್ರವರಿ 06 ರಂದು ಚನ್ನಗಿರಿ ತಾಲ್ಲೂಕಿನ ಚಿರಡೋಣಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಪೋಕ್ಸೊ ಕಾಯ್ದೆ 2012 ತೆರೆದ ಮನೆ ಕಾರ್ಯಕ್ರಮದಲ್ಲಿ ಗೈಡ್ಸ್ ಮಕ್ಕಳಿಗೆ ನಾಟಕದ ಮೂಲಕ ಜಾಗೃತಿ ಮೂಡಿಸಲಾಯಿತು.

* ಫೆಬ್ರವರಿ 08 ರಂದು ದಾವಣಗೆರೆ ದಕ್ಷಿಣ ಮತ್ತು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಶಾಲೆಗಳಿಗೆ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ ರಕ್ಷಣಾ ಸಿಬ್ಬಂದಿಗಳು ಭೇಟಿ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ ಅಣುಕು ಪ್ರದರ್ಶನವನ್ನು ನೀಡಿದರು.

* ಫೆಬ್ರವರಿ 10 ಮತ್ತು 12 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶಾಲೆಗಳಿಗೆ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ ರಕ್ಷಣಾ ಸಿಬ್ಬಂದಿಗಳು ಭೇಟಿ ನೀಡಿ ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್. ವತಿಯಿಂದ ತುರ್ತು ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳು ಸಮುದಾಯ ಜಾಗೃತಿ ಅಣುಕು ಪ್ರದರ್ಶನವನ್ನು ನೀಡಿದರು. ಈ ಸಂದರ್ಭದಲ್ಲಿ ಎನ್.ಡಿ.ಆರ್.ಎಫ್. ಮತ್ತು ಎಸ್.ಡಿ.ಆರ್.ಎಫ್. ಕಮಾಂಡರ್‌ಗಳು, ಡಾ. ಪುಷ್ಪಲತಾ, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶ್ರೀ ಸೋಮಶೇಖರ್ ಸಿ.ಬಿ.ಎಸ್.ಸಿ. ಮುಖ್ಯೋಪಾಧ್ಯಾಯರು, ಸ್ಥಳೀಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ರವಿಕುಮಾರ್, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಶ್ರೀಮತಿ ಅಶ್ವಿನಿ ಜೆ., ಎಸ್.ಜೆ.ವಿ. ಶಾಲೆಯ ಸ್ಕೌಟರ್ಸ್–ಗೈಡರ್ಸ್‌ಗಳು, ಶಿಕ್ಷಕರು ಉಪಸ್ಥಿತರಿದ್ದರು.

## ಧಾರವಾಡ

ಜನವರಿ 29 ರಿಂದ ಫೆಬ್ರವರಿ 04ರ ವರೆಗೆ ಜಿಲ್ಲಾ ಸಂಸ್ಥೆ ಆವರಣ ಧಾರವಾಡ ಇಲ್ಲಿ ಜಿಲ್ಲಾ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ ಲೀಡರ್ಸ್, ಸ್ಕೌಟ ಮಾಸ್ಟರ್ಸ್ ಮತ್ತು ಗೈಡ ಕ್ಯಾಪ್ಟನ್‌ರ ಮೂಲ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದ್ದು. ಕಬ್ ಮಾಸ್ಟರ್ಸ್ ತರಬೇತಿಗೆ ನಾಯಕರಾಗಿ ಶ್ರೀ ಎಸ್. ಎಸ್. ಹುಸೇನಿ, ಫ್ಲಾಕ್ ಲೀಡರ್ಸ್ ತರಬೇತಿಗೆ ನಾಯಕಿಯಾಗಿ ಶ್ರೀಮತಿ ಜೆ.ಎಸ್. ಯಾವಗಲ ಸ್ಕೌಟ ಮಾಸ್ಟರ್ಸ್ ತರಬೇತಿಗೆ ನಾಯಕರಾಗಿ ಶ್ರೀ ಮನ್ಸೂರ ಯೂಸೆಫ್ ಮುಲ್ಲಾ, ಗೈಡ್ ಕ್ಯಾಪ್ಟನ್ ತರಬೇತಿಗೆ ನಾಯಕಿಯಾಗಿ ಶ್ರೀಮತಿ ಕಾತ್ಯಯನಿ, ಸೇವೆ ಸಲ್ಲಿಸಿದರು. 103 ಶಿಕ್ಷಕ / ಶಿಕ್ಷಕಿಯರು ಭಾಗಹಿಸಿದರು. ಸದರಿ ತರಬೇತಿಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಶ್ರೀ ಎಸ್.ಎಂ. ಹುಡೇದಮನಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಶ್ರೀಮತಿ ಶಶಿಕಲಾ ಕಳಸಣ್ಣವರ ಎ.ಐ.ಪಿ.ಓ. ಉಪನಿರ್ದೇಶಕರ ಕಾರ್ಯಾಲಯ ಧಾರವಾಡ ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು ಭೇಟಿ ನೀಡಿದರು



* ಫೆಬ್ರವರಿ 07 ರಂದು ಧಾರವಾಡ ಜಿಲ್ಲಾ ಮುಖ್ಯ ಆಯುಕ್ತರಾಗಿ ವಿಶ್ರಾಂತ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಶ್ರೀಶೈಲ ಸಿ. ಕರಿಕಟ್ಟಿಯವರು ಅಧಿಕಾರ ವಹಿಸಿಕೊಂಡರು. ಸದರಿ ಕಾರ್ಯಕ್ರಮದಲ್ಲಿ ಹಿರಿಯರಾದ ಶ್ರೀ ವಿ.ವಿ. ಕಟ್ಟಿ, ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ಎಸ್.ಐ. ನೇಕಾರ, ಜಿಲ್ಲಾ ಕೋಶಾಧಿಕಾರಿಗಳು, ಶ್ರೀ ಎಸ್.ವಿ. ಮೊರಬ, ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಎಸ್.ಎನ್. ಸಾವಳಗಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಬಸವರಾಜ ಕಡಕೋಳ, ಸಹಾಯಕ ಜಿಲ್ಲಾ ಆಯುಕ್ತರು, ಶ್ರೀ ಎಸ್.ಎನ್. ಪೂಜಾರ ಎ.ಎಸ್.ಓ.ಸಿ. ಉಪಸ್ಥಿತರಿದ್ದರು.




* ಧಾರವಾಡ ಜಿಲ್ಲೆಯ ನೂತನವಾಗಿ ಜಿಲ್ಲಾಧಿಕಾರಿಯಾಗಿ ಅಧಿಕಾರಿ ವಹಿಸಿಕೊಂಡ ಶ್ರೀಮತಿ ದಿವ್ಯ ಪ್ರಭು ಇವರನ್ನು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶ್ರೀಶೈಲ ಸಿ. ಕರಿಕಟ್ಟಿ ಇವರ ನೇತೃತ್ವದಲ್ಲಿ ಜಿಲ್ಲಾ ಸಂಸ್ಥೆಯ ಸರ್ವ ಸದಸ್ಯರು ಹೂಗುಚ್ಛ ನೀಡುವುದರ ಮೂಲಕ ಸ್ವಾಗತವನ್ನು ಮಾಡಿಕೊಂಡಿರು.



* ಫೆಬ್ರವರಿ 14 ರಂದು ಜಿಲ್ಲಾ ಸಂಸ್ಥೆ ಧಾರವಾಡ ವತಿಯಿಂದ ಪಲ್ವಮಾ ದಾಳಿಯಲ್ಲಿ ದೇಶಕ್ಕೆ ಪ್ರಾಣ ಸಮರ್ಪನೆ ಮಾಡಿದಂತಹ ವೀರಯೋಧರಿಗೆ ರೋವರ್ಸ್ ಮತ್ತು ರೇಂಜರ್ಸ್‌ಗಳಿಂದ ಮತ್ತು ಜಿಲ್ಲಾ ಸಂಸ್ಥೆಯ ಸರ್ವ ಪದಾಧಿಕಾರಿಗಳಿಂದ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

## ಗದಗ

ತಾಲೂಕ ಸಂಸ್ಥೆ ನರಗುಂದ ಹಾಗೂ ಪೊಲೀಸ್ ಇಲಾಖೆ ನರಗುಂದ ಇವುಗಳ ಸಹಯೋಗದೊಂದಿಗೆ ರಾಷ್ಟ್ರೀಯ ರಸ್ತೆ ಸುರಕ್ಷತೆಯ ಸಪ್ತಾಹ ಅಂಗವಾಗಿ ನರಗುಂದದ ಪುರಸಭೆ ಆವರಣದಿಂದ ಜಾಥಾ ಕಾರ್ಯಕ್ರಮಕ್ಕೆ ನರಗುಂದದ ಸಿಪಿಐ ಶ್ರೀ ನಡುವಿನಮನಿ ಅವರು ಚಾಲನೆಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಆರ್. ಕಾಳೆ, ನಿಕಟಪೂರ್ವ ಕಾರ್ಯಾಧ್ಯಕ್ಷರು ಹಾಗೂ ಶ್ರೀ ಎಂ.ಎಸ್. ಮುಲ್ಲಾ, ಪ್ರಧಾನ ಕಾರ್ಯದರ್ಶಿಗಳು ರೋವರ್ಸ್ ಲೀಡರ್ ಮತ್ತು ಸ್ಕೌಟ್ಸ್-ಗೈಡ್ಸ್‌ಗಳು, ರೋವರ್ಸ್ ಮತ್ತು ರೇಂಜರ್ಸ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಕ್ಕಳಿಗೆ ಪೊಲೀಸ್ ಇಲಾಖೆಯ ಮಾಹಿತಿಯನ್ನು ತಿಳಿಸಲಾಯಿತು.

* ರಸ್ತೆ ಬಳಕೆದಾರರ ಸುಗಮ ಸಂಚಾರ ಹಾಗೂ ಸುರಕ್ಷತೆಗಾಗಿ ನಗರದಲ್ಲಿ ಶಾಲಾ ಮಕ್ಕಳಿಗೆ ಸಂಚಾರ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ 2024ರ ಪ್ರಯುಕ್ತ



ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಗರದ ಗಾಂಧಿ ಸರ್ಕಲ್‌ನಿಂದ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಭೂಮರೆಡ್ಡಿ ವೃತ್ತದ ವರೆಗೆ ಶಾಲಾ ಮಕ್ಕಳು ಬಿತ್ತಿ ಚಿತ್ರಗಳ ಮೂಲಕ ರಸ್ತೆಯ ಸುರಕ್ಷತೆ ಸಂಚಾರದ ಕುರಿತಂತೆ ಘೋಷಣೆಗಳನ್ನು ಕೂಗುತ್ತಾ ಸಾಗಿದರು. ಭೂಮರೆಡ್ಡಿ ವೃತ್ತದಲ್ಲಿ ಸಂಚಾರಿ ಪೊಲೀಸ್ ಠಾಣೆಯ ಪೊಲೀಸರಿಂದ ಶಾಲಾ ಮಕ್ಕಳಿಗೆ ಸಂಚಾರದ ನಿಯಮಗಳ ಕುರಿತಂತೆ ಅಣುಕು ಪ್ರದರ್ಶನವನ್ನು ಮಾಡಿ ರಸ್ತೆ ಸಂಚಾರದ ನಿಯಮಗಳನ್ನು ತಿಳಿಸಿದರು. ಈ ಸಂದರ್ಭದಲ್ಲಿ ಸಂಚಾರಿ ಪೊಲೀಸ್ ಠಾಣೆಯ ಪಿ.ಎಸ್.ಐ. ಶ್ರೀಮತಿ ಶಕುಂತಲಾ ನಾಯಕ್, ಶ್ರೀ ಪಿ.ಎಚ್. ಪವಾರ್ ಎ.ಎಸ್.ಐ., ಶ್ರೀ ಎಚ್.ಡಿ. ಗಡಾದ ಎ.ಎಸ್.ಐ., ಶ್ರೀ ಎಸ್.ಎಂ. ತಗ್ಗಿ, ಎ.ಎಸ್.ಐ. ಹಾಗೂ ಟ್ರಾಫಿಕ್ ಪೊಲೀಸ್ ಪೇದೆಗಳು ಸ್ಥಳೀಯ ಶಿಕ್ಷಣಾಧಿಕಾರಿಗಳು ಶಾಲೆಯ ಶಿಕ್ಷಕರು ಸೇರಿದಂತೆ ಹಲವಾರು ಉಪಸ್ಥಿತರಿದ್ದರು.

* ಗದುಗಿನ ಆದರ್ಶ ಶಿಕ್ಷಣ ಸಮಿತಿಯ ಶ್ರೀ ದೇವತ್ತ ಶಂಕರರಾವ್ ಕುರ್ತಕೋಟಿ ಮೆಮೋರಿಯಲ್ ಪದವಿಪೂರ್ವ ವಾಣಿಜ್ಯ ಮಹಾವಿದ್ಯಾಲಯದ ವಿಶ್ವಪ್ರಭ ರೋವರ್ಸ್ ಘಟಕ ವಿದ್ಯಾರ್ಥಿಗಳು 75ನೇ ಗಣರಾಜೋತ್ಸವ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು.



## ಹಾಸನ

"ಭಾರತದ ಹೆಣ್ಣು ಮಕ್ಕಳಿಗೆ ಬೆಂಬಲ ಮತ್ತು ಅವಕಾಶಗಳನ್ನು ಒದಗಿಸುವುದು, ಭಾರತದಲ್ಲಿನ ಲಿಂಗ ಅಸಮಾನತೆಯನ್ನು ಹೋಗಲಾಡಿಸುವುದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಮಹತ್ವದ ಉದ್ದೇಶವಾಗಿದೆ" ಎಂದು ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಶ್ರೀಮತಿ ಎಚ್.ಎಂ. ಪ್ರಿಯಾಂಕ ಅಭಿಪ್ರಾಯಪಟ್ಟರು. ಅವರು ಸ್ಥಳೀಯ ಸಂಸ್ಥೆ ಆಲೂರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಾಳೂರು ಸಹಯೋಗದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಖಜಾಂಚಿ ಶ್ರೀಮತಿ ಬಿ.ಎಸ್. ಹಿಮ ಮಾತನಾಡಿ ಭಾರತದಲ್ಲಿ ಹೆಣ್ಣು ಮಗು ಎದುರಿಸುತ್ತಿರುವ ಶಿಕ್ಷಣ, ಶೋಷಣೆ, ಬಾಲ್ಯವಿವಾಹ, ಕಾನೂನು ಹಕ್ಕುಗಳು, ವೈದ್ಯಕೀಯ ಆರೈಕೆ, ರಕ್ಷಣೆ, ಗೌರವದಂತಹ ಸಮಸ್ಯೆಗಳ ಜಾಗೃತಿ ಉತ್ತೇಜಿಸಲು ಸಮತೆಯನ್ನು ಒದಗಿಸಲು ಭಾರತ ಸರಕಾರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ದೇಶಾದ್ಯಂತ ಜಾಗೃತಿಗೊಳಿಸುತ್ತಿದೆ. ಇಂದಿನ ಮಕ್ಕಳು ಸರಕಾರದ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಜೀವನವನ್ನು ಔನತ್ಯಗೊಳಿಸಿಕೊಳ್ಳಬೇಕು ಎಂದು ಕರೆ ನೀಡಿದರು. ತಾಲ್ಲೂಕು ಸಹ ಕಾರ್ಯದರ್ಶಿ ಶ್ರೀ ಎಚ್.ಡಿ. ಕುಮಾರ್




ಮಾತನಾಡಿ "ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ, ಎಲ್ಲಿ ಹೆಣ್ಣು ಗೌರವಿಸಲ್ಪಡುತ್ತಾಳೋ, ಅಲ್ಲಿ ದೇವಾನುದೇವತೆಗಳು ನೆಲೆಸಿರುತ್ತಾರೆ" ಎಂದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯ ಶಿಕ್ಷಕ ಕೊಟ್ರೇಶ್ ಎಸ್.ಉಪ್ಪಾರ್, ಸಹ ಶಿಕ್ಷಕರಾದ ವಿ.ರವಿತ, ಅತಿಥಿ ಶಿಕ್ಷಕಿ ಬಿ.ಎಂ. ಚಂದ್ರಕಲಾ ಸೇರಿದಂತೆ ತಾಳೂರು ಶಾಲೆಯ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ ಮತ್ತು ಗೈಡ್ಸ್ ಮಕ್ಕಳು ಉಪಸ್ಥಿತರಿದ್ದರು.

## ಕಾರವಾರ (ಉ.ಕ.)

* ಜನವರಿ 16 ರಂದು ಭಟ್ಕಳ ಸ್ಥಳೀಯ ಸಂಸ್ಥೆ ವತಿಯಿಂದ ಮುರುಡೇಶ್ವರ ಆರ್.ಎನ್.ಎಸ್. ಶಾಲೆಯ ಸ್ಕೌಟ್-ಗೈಡ್ ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಜಾಥಾ ಮತ್ತು ಜಾಗೃತಿ ಕಾರ್ಯಕ್ರಮವನ್ನು ನಡೆಸಿದರು.



* ಜನವರಿ 23 ರಂದು ಕುಮಟಾ ಸ್ಥಳೀಯ ಸಂಸ್ಥೆ ವತಿಯಿಂದ ಕಬ್-ಬುಲ್‌ಬುಲ್ ಸ್ಕೌಟ್-ಗೈಡ್‌ಗಳಿಗೆ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಕುಮಟಾ ಡಯಟ್‌ನಲ್ಲಿ ಆಯೋಜಿಸಲಾಗಿತ್ತು. ಈ ಪರೀಕ್ಷೆಯ ಸ್ಕೌಟ್ ನಾಯಕರಾಗಿ ಶ್ರೀ ಜಿ.ಆರ್. ಮಡಿವಾಳ್, ಗೈಡ್ ವಿಭಾಗಕ್ಕೆ ಶ್ರೀಮತಿ ಬೇಬಿ ಪಡಿಯಾರ್ ನಾಯಕಿಯಾಗಿ ಕರ್ತವ್ಯ ನಿರ್ವಹಿಸಿದರು. ಶಿಬಿರದಲ್ಲಿ 17-ಗೈಡ್, 61-ಸ್ಕೌಟ್, 12 ಸ್ಕೌಟ-ಗೈಡ್ ಶಿಕ್ಷಕರು ಹಾಗೂ ಸ್ಥಳೀಯ ಸಂಸ್ಥೆ ಅಧ್ಯಕ್ಷರು ಉಪಾಧ್ಯಕ್ಷರು ಕಾರ್ಯದರ್ಶಿ ಕೋಶಾಧಿಕಾರಿ ಎ.ಎಸ್.ಒ.ಸಿ., ಡಿ.ಟಿ.ಸಿ. ಭಾಗವಹಿಸಿದ್ದರು,

* ಜನವರಿ 23 ರಂದು ಹೊನ್ನಾವರ ನ್ಯೂ ಇಂಗ್ಲಿಷ್ ಪ್ರೌಢ ಶಾಲೆಯಲ್ಲಿ ಸುಭಾಷ್‌ಚಂದ್ರ ಬೋಸ್ ಅವರ ಭಾವಚಿತ್ರ ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಿ ಅವರಿಗೆ ಗೌರವ ನಮನ ಸಲ್ಲಿಸುವ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ

ಶಾಲಾ ಮುಖ್ಯೋಪಾಧ್ಯಾಯರು, ಸ್ಕೌಟ್–ಗೈಡ್ ಶಿಕ್ಷಕರು ಹಾಗೂ ಅರವತ್ತು ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 24 ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಅಂಗವಾಗಿ ಜಿಲ್ಲೆಯ ಕುಮಟಾದ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಬುಲ್‌ಬುಲ್ ದಳವನ್ನು ಉದ್ಘಾಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ನೋಡಲ್ ಅಧಿಕಾರಿ ಶ್ರೀ ಪರಮೇಶ್ವರ್ ಭಂಡಾರಿ ಹಾಗೂ ಸಿ.ಆರ್.ಪಿ. ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಶ್ರೀ ಕೆ.ಪಿ. ಭಂಡಾರಿ ಶ್ರೀಮತಿ ಬೇಬಿ ಪಡಿಹಾರ್ ಡಿ.ಟಿ.ಸಿ. (ಗೈಡ್) ಕರಿಸಿದ್ದಪ್ಪ ಎ.ಎಸ್.ಓ.ಸಿ. ಶಾಲಾ ಮುಖ್ಯೋಪಾಧ್ಯಾಯರು ಫ್ಲಾಕ್ ಲೀಡರ್ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಪೋಷಕ ವರ್ಗದವರು ಭಾಗವಹಿಸಿದ್ದರು.

* ಗಿಬ್ ಬಾಲಕಿಯರ ಪ್ರೌಢಶಾಲೆ ವತಿಯಿಂದ ವಿಶೇಷ ಚೇತನ ಮಕ್ಕಳಿಗೆ ಹಣ್ಣು ಮತ್ತು ಸಿಹಿ ಹಂಚುವ ಮುಖಾಂತರ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಆಚರಿಸಿದರು. ಭಟ್ಕಳ ಪುರವರ್ಗ ಶಾಲೆ, ಕುಮುಟಾ ಮಿರ್ಜಾನ್ ಶಾಲೆ, ಹೊನ್ನಾವರ ಕೋಟೆ ಶಾಲೆ ಇಲ್ಲಿ ಮಕ್ಕಳಿಗೆ ರಂಗೋಲಿ ಸ್ಪರ್ಧೆ, ಭಾಷಣ ಸ್ಪರ್ಧೆ ಹಾಗೂ ಹೆಣ್ಣು ಮಕ್ಕಳಿಗೆ ಆರೋಗ್ಯ ಬಗ್ಗೆ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಿದರು. ಹಾಗೂ ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಕಾರ್ಯಕ್ರಮವನ್ನು ನಡೆಸಿದರು.

* ಜನವರಿ 26 ರಂದು 75ನೇ ಗಣರಾಜ್ಯೋತ್ಸವದ ಅಂಗವಾಗಿ ತಾಲ್ಲೂಕು ಆಡಳಿತ ಹಾಗೂ ಜಿಲ್ಲಾ ಆಡಳಿತ ನಡೆಸಿದ ಪೆರೇಡ್‌ನಲ್ಲಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿ ಪತ್ರಗಳನ್ನು ಶ್ರೀ ಮಂಕಾಳ ಎಸ್. ವೈದ್ಯ, ಮಾನ್ಯ ಜಿಲ್ಲಾ ಉಸ್ತಾವಾರಿ ಹಾಗೂ ಬಂದರು ಜಲ ಸಾರಿಗೆ ಮೀನುಗಾರಿಕೆ ಸಚಿವರಿಂದ ಪಡೆದರು.



* ಜನವರಿ 26 ರಂದು ಹೊನ್ನಾವರ ತಾಲ್ಲೂಕು ಆಡಳಿತ ನಡೆಸಿದ ಗಣರಾಜೋತ್ಸವದ ಪೇರೆಡ್‌ನಲ್ಲಿ ಸ್ಕೌಟ್ಸ್–ಗೈಡ್ಸ್‌ಗಳು ಭಾಗವಹಿಸಿ ಪ್ರಶಸ್ತಿ ಪಡೆದರು. ನಂತರ ಈ ಸಮಾರಂಭದಲ್ಲಿ ರಾಜ್ಯ ಪುರಸ್ಕಾರ ಪ್ರಶಸ್ತಿಯನ್ನು ಪಡೆದ ಸ್ಕೌಟ್–ಗೈಡ್ಸ್‌ಗಳಿಗೆ ಪ್ರಶಸ್ತಿ ಪತ್ರವನ್ನು ತಾಲ್ಲೂಕು ಆಡಳಿತದಿಂದ ಶ್ರೀ ವಿನೋದ್ ಅಣ್ವಕರ್ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಕಾರವಾರ, ಶ್ರೀ ರವಿರಾಜ್ ದೀಕ್ಷಿತ್ ತಹಶೀಲ್ದಾರ್ ಹೊನ್ನಾವರ, ಶ್ರೀ ಜಿ.ಎಸ್. ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊನ್ನಾವರ ಇವರು ನೀಡಿ ಗೌರವಿಸಿದರು. ಜಿಲ್ಲೆಯ ಶಾಲಾ ಕಾಲೇಜುಗಳಲ್ಲಿ ಕಬ್–ಬಲ್‌ಬುಲ್ ಸ್ಕೌಟ್–ಗೈಡ್‌ಗಳು ಶಿಕ್ಷಕರು 75ನೇ ಗಣರಾಜ್ಯೋತ್ಸವವನ್ನು ಆಚರಿಸಿದರು.

* ಜನವರಿ 29 ರಂದು ಹೊನ್ನಾವರ ಸ್ಥಳೀಯ ಸಂಸ್ಥೆ ವತಿಯಿಂದ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರ ಹಾಗೂ ದಳ ನೋಂದಣಿ ಕಾರ್ಯಕ್ರಮವನ್ನು ನಗರದ ಸೇಂಟ್ ಥಾಮಸ್ ಶಾಲೆಯ ಆವರಣದಲ್ಲಿ ನಡೆಸಲಾಯಿತು. ಸ್ಕೌಟ್ ವಿಭಾಗಕ್ಕೆ ನಾಯಕರಾಗಿ ಶ್ರೀ ಜಿ.ಆರ್. ಮಡಿವಾಳ, ಗೈಡ್ ವಿಭಾಗಕ್ಕೆ ಶ್ರೀಮತಿ ಬೇಬಿ ಪಡಿಯರ್ ಕಬ್ ವಿಭಾಗಕ್ಕೆ ಶ್ರೀ ಎಂ.ಎನ್. ಗೌಡ, ಬುಲ್‌ಬುಲ್ ವಿಭಾಗಕ್ಕೆ ಶ್ರೀಮತಿ ಸುರೇಖಾ ನಾಯ್ಕ್ ಕಾರ್ಯನಿರ್ವಹಿಸಿದರು. ಶ್ರೀಮತಿ ಶಾರದ ಹೆಗಡೆ ಎ.ಎಲ್.ಟಿ., ಫ್ಲಾಕ್ ಲೀಡರ್ ಶ್ರೀಮತಿ ತೆರೆಸ ಫರ್ನಾಂಡಿಸ್ ಎ.ಡಿ.ಸಿ.(ಗೈ) ಶ್ರೀ ಕರಿಸಿದ್ದಪ್ಪ ಟಿ., ಸಹಾಯಕ ರಾಜ್ಯ ಸಂಘಟನಾ ಆಯುಕ್ತರು 12 ಸ್ಕೌಟ್, 69 ಗೈಡ್ಸ್ 74 ಕಬ್, 34 ಬುಲ್‌ಬುಲ್, 31 ಶಿಕ್ಷಕರು 208 ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 4 ರಂದು ಮಾರ್ತೋಮ ಸೆಂಟ್ರಲ್ ಶಾಲೆ ಹೊನ್ನಾವರ ಇಲ್ಲಿ ಸಾವಿತ್ರಿಬಾಯಿ ಫುಲೆ ಇವರ ಜನ್ಮ ದಿನಾಚರಣೆಯನ್ನು ಶಾಲೆಯ ಸ್ಕೌಟ್–ಗೈಡ್ ವಿದ್ಯಾರ್ಥಿಗಳೊಂದಿಗೆ ಶಾಲಾ ಆಡಳಿತ ಮಂಡಳಿ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ 160 ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಜನವರಿ 8 ರಂದು ಸ್ಮಿತ್ ಲಾರ್ಡ್ ಬೆಡನ್ ಪೋವೆಲ್ ಅವರ ಪುಣ್ಯ ಸ್ಮರಣ ಕಾರ್ಯಕ್ರಮವನ್ನು ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು.

* ಜನವರಿ 12 ರಂದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ಯುವ ದಿನಾಚರಣೆಯನ್ನು ಜಿ.ಎಂ.ಎಸ್., ಪಿ.ಎಸ್. ಪುರವರ್ಗ ಭಟ್ಕಳ ಆಚರಿಸಲಾಯಿತು. 30 ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

* ಜನವರಿ 12 ರಂದು ಕಾರವಾರದ ಶ್ರೀ ಸರಸ್ವತಿ ವಿದ್ಯಾ ಮಂದಿರ ಇಲ್ಲಿ ವಿವೇಕಾನಂದ ಜಯಂತಿ ಆಚರಣೆ ಮಾಡಲಾಯಿತು.

* ಜನವರಿ 12 ರಂದು ನ್ಯೂ ಇಂಗ್ಲಿಷ್ ಶಾಲೆ ಹೊನ್ನಾವರ ಇಲ್ಲಿ ಯುವ ದಿನಾಚರಣೆ ಪ್ರಯುಕ್ತ ವಿವೇಕಾನಂದರ ಜೀವನ ಚರಿತ್ರೆ ಬಗ್ಗೆ ಪ್ರಬಂಧ ಬರೆಯುವುದು, ಅವರ ಭಾವಚಿತ್ರಗಳನ್ನು ಬಿಡಿಸುವುದು. ವಿವೇಕಾನಂದರವರ ಬಗ್ಗೆ ಭಾಷಣ ಮಾಡುವುದು, ವಿವೇಕಾನಂದ ಅವರ ಕುರಿತು ಕಾರ್ಯಕ್ರಮಗಳನ್ನು ಶಾಲೆಯಲ್ಲಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಂದ ಮಾಡಿಸಲಾಯಿತು.

* ಜನವರಿ 12 ರಂದು ಅಲಿ ಪಬ್ಲಿಕ್ ಶಾಲೆಯಲ್ಲಿ ಸ್ವಾಮಿ ವಿವೇಕಾನಂದ ದಿನಾಚರಣೆ ಅಂಗವಾಗಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

* ಜನವರಿ 12 ರಂದು ಹೊನ್ನಾವರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮೂರುಕಟ್ಟೆ ಈ ಶಾಲೆಯ 25ನೇ ವಾರ್ಷಿಕ ಕಾರ್ಯಕ್ರಮದಲ್ಲಿ ಕಬ್–ಬುಲ್‌ಬುಲ್ ವಿದ್ಯಾರ್ಥಿಗಳಿಗೆ ಡಾ. ಜಿ.ಜಿ. ಸಭಾಹಿತ್, ಜಿಲ್ಲಾ ಮುಖ್ಯ ಆಯುಕ್ತರು ಸ್ವಾಮಿ ವಿವೇಕಾನಂದರವರ ಜನ್ಮದಿನಾಚರಣೆ ಅಂಗವಾಗಿ ಡೆಸ್ಕ್ ಚೇರ್‌ಗಳನ್ನು ನೀಡಿ, ವಿವೇಕಾನಂದರವರು ಕೊಟ್ಟಂತ ಮಾರ್ಗದರ್ಶನದಲ್ಲಿ ಮಕ್ಕಳು ನಡೆಯಬೇಕೆಂದು ಮಕ್ಕಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಶಾಲಾ ಮುಖ್ಯೋಪಾಧ್ಯಾಯಾರು ಹಾಗೂ ಶ್ರೀಮತಿ ಶಾರದಾ ಹೆಗಡೆ ಎಸ್., ಡಿ.ಎಂ.ಸಿ. ಅಧ್ಯಕ್ಷರು,



ಉಪಾಧ್ಯಕ್ಷರು ಶಾಲಾ ಸಿಬ್ಬಂದಿ ಹಾಗೂ ಎ.ಎಸ್.ಓ.ಸಿ. ಶ್ರೀ ಕರಿಸಿದ್ದಪ್ಪ ಟಿ., ಉಪಸ್ಥಿತರಿದ್ದರು.

* ಜನವರಿ 12 ರಂದು ಶ್ರೀ ಸ್ವಾಮಿ ವಿವೇಕಾನಂದರವರ ಜನ್ಮ ದಿನಾಚರಣೆ ಅಂಗವಾಗಿ ಶ್ರೀ ಕಾತ್ಯಾಯಿನಿ ಪ್ರೌಢಶಾಲೆ ಅವರ್ಸಾ ಅಂಕೋಲ ಈ ಶಾಲೆಯ ಆವರಣದಲ್ಲಿರುವ ವಿವೇಕಾನಂದರ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿ ವಿದ್ಯಾರ್ಥಿಗಳಿಗೆ ವಿವೇಕಾನಂದರವರ ಜೀವನ ಚರಿತ್ರೆಯ ಬಗ್ಗೆ ವಿಷಯವನ್ನು ತಿಳಿಸಿ ಅವರು ಕೆಲವು ಹೇಳಿದಂತಹ ನುಡಿಗಳನ್ನು ಪ್ರಚಾರ ಪಡಿಸುತ್ತಾ ಸೈಕಲ್ ಜಾಥಾವನ್ನು ನಡೆಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ನಾಗರಾಜ್ ನಾಯಕ್ ಹಾಗೂ ಲಯನ್ಸ್ ಕ್ಲಬ್‌ನ ಸದಸ್ಯರು ಶಾಲಾ ಮುಖ್ಯೋಪಾಧ್ಯಾಯರು ಶಿಕ್ಷಕರು 34 ಸ್ಕೌಟ್-ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

* ಜನವರಿ 11 ರಂದು ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ಕುಮಟಾ ತಾಲ್ಲೂಕಿನ ಮಿರ್ಜಾನ್ ಜನತಾ ವಿದ್ಯಾಲಯ ಪ್ರೌಢ ಶಾಲೆಯಲ್ಲಿ ಶ್ರೀ ರಾಜನಾಯಕ್ ಸ್ಕೌಟ್ ಮಾಸ್ಟರ್ ನೇತೃತ್ವದಲ್ಲಿ ಜಾಗೃತಿ ಜಾಥಾವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು ಪತ್ರಕರ್ತರು ಮಾಧ್ಯಮ ಮಿತ್ರರು ಮತ್ತು ಹಿರಿಯ ನಾಗರಿಕರು ಪಾಲ್ಗೊಂಡಿದ್ದರು.

* ಜನವರಿ 11 ರಂದು ನ್ಯೂ ಇಂಗ್ಲೀಷ್ ಶಾಲೆ ಹೊನ್ನಾವರ ಇಲ್ಲಿ ಸ್ಕೌಟ್-ಗೈಡ್ಸ್‌ಗಳಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾವನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಲಾಯಿತು.

* ಜನವರಿ 12 ರಂದು ಮಾರ್ಥೋಮ ಶಾಲಾ ವತಿಯಿಂದ ಹಾಗೂ ಆಂಗ್ಲ ಮಾಧ್ಯಮ ಸಿ.ಬಿ.ಎಸ್.ಸಿ. ಶಾಲೆ ಮತ್ತು ಸೇಂಟ್ ಥಾಮಸ್ ಶಾಲೆ ವತಿಯಿಂದ ಪೊಲೀಸ್ ಇಲಾಖೆಯ ಶ್ರೀ ಸತೀಶ್ ನಾಯಕ್ ಪಿ.ಎಸ್.ಐ. ಇವರ ಮಾರ್ಗದರ್ಶನದಲ್ಲಿ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ನಡೆಸಲಾಯಿತು.

* ಜನವರಿ 13 ರಂದು ಮಾರ್ಥೋಮ ಶಾಲೆಯ ವತಿಯಿಂದ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮವನ್ನು ನಗರದ ಪೊಲೀಸ್ ಇಲಾಖೆ ಆವರಣದಲ್ಲಿ ಪೊಲೀಸ್ ಇಲಾಖಾಧಿಕಾರಿಗಳು ಹಾಗೂ ಶಾಲಾ ಆಡಳಿತ ಮಂಡಳಿ ಸ್ಕೌಟ್-ಗೈಡ್ ಶಿಕ್ಷಕರು ಮತ್ತು ನೂರಇಪ್ಪತ್ತು ವಿದ್ಯಾರ್ಥಿಗಳಿಂದ ಜಾಗೃತಿ ಜಾಥಾ ಕಾರ್ಯಕ್ರಮವನ್ನು ನಡೆಸಲಾಯಿತು.

* ಜನವರಿ 12 ರಂದು ಸ್ವಾಮಿ ವಿವೇಕಾನಂದ ದಿನಾಚರಣೆಯನ್ನು ಎಸ್.ಡಿ.ಎಂ., ಸಿ.ಬಿ.ಎಸ್.ಸಿ. ಶಾಲೆಯ ಸ್ಕೌಟ್-ಗೈಡ್ 64 ವಿದ್ಯಾರ್ಥಿಗಳು ಶಾಲಾ ಮುಖ್ಯ ಶಿಕ್ಷಕರು-ಶಿಕ್ಷಕಿಯರ ಉಪಸ್ಥಿತಿಯಲ್ಲಿ ಆಚರಣೆ ಮಾಡಲಾಯಿತು.

* ಜನವರಿ 12 ರಂದು ಶ್ರೀ ದುರ್ಗಾಪರಮೇಶ್ವರಿ ಪ್ರೌಢ ಶಾಲೆ ಆಳ್ವೆ ಕೋಡಿ ಇಲ್ಲಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಶಾಲಾ ಮುಖ್ಯ ಶಿಕ್ಷಕರು ಶಾಲಾ ಸಿಬ್ಬಂದಿ ವರ್ಗ ಹಾಗೂ 34 ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಆಚರಣೆ ಮಾಡಲಾಯಿತು.

* ಜನವರಿ 14 ರಂದು ನ್ಯೂ ಇಂಗ್ಲೀಷ್ ಶಾಲಾ ವತಿಯಿಂದ ನಾಲ್ಕನೇ ದಿನದ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ದ್ವಿಚಕ್ರ ವಾಹನದವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ವಾಹನ ಚಲಾಯಿಸುವ ಬಗ್ಗೆ, ಕಾರು ಚಲಾಯಿಸುವವರು ಸೀಟ್ ಬೆಲ್ಟ್ ಕಡ್ಡಾಯವಾಗಿ ಹಾಕುವ ಬಗ್ಗೆ ಮತ್ತು ಮೊಬೈಲ್ ಬಳಸಿಕೊಂಡು ವಾಹನವನ್ನು ಚಲಾಯಿಸದೆ ಇರುವ ಬಗ್ಗೆ ಮದ್ಯಪಾನ ಮಾಡಿ ವಾಹನವನ್ನು ಚಲಾಯಿಸದೆ ಇರುವ ಬಗ್ಗೆ, ಹೀಗೆ ಕೆಲವು ಅಣುಕು ಕಾರ್ಯಕ್ರಮಗಳನ್ನು ಸ್ಕೌಟ್-ಗೈಡ್‌ಗಳು ಮಾಡಿದರು.

* ಜನವರಿ 16 ರಂದು ಕಾರವಾದ ಬಾಲ ಮಂದಿರ ಪ್ರೌಢಶಾಲೆಯಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಶ್ರೀ ಬಿ.ಡಿ. ಫರ್ನಾಂಡಿಸ್, ಎಲ್.ಟಿ. (ಸ್ಕೌ) ಇವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು. ಈ ಶಿಬಿರದ ನಾಯಕರಾಗಿ ಮನ್ಸೂರ್ ವಾಯ್ ಮುಲ್ಲಾ ಸ್ಕೌಟ್ ವಿಭಾಗಕ್ಕೆ ಶ್ರೀಮತಿ ಶೋಭಾವರ್ಣೇಕರ್ ಗೈಡ್ ವಿಭಾಗಕ್ಕೆ ನಾಯಕರಾಗಿದ್ದರು. ಸುಮಾರು 80 ಸ್ಕೌಟ್-ಗೈಡ್‌ಗಳು ಭಾಗವಹಿಸಿದ್ದರು.

* ಜನವರಿ 16 ರಂದು ಭಟ್ಕಳ ಸ್ಥಳೀಯ ಸಂಸ್ಥೆ ವತಿಯಿಂದ ಮುರುಡೇಶ್ವರ ಆಸ್.ಎನ್.ಎಸ್. ಶಾಲೆಯ ಸ್ಕೌಟ್-ಗೈಡ್ ವಿದ್ಯಾರ್ಥಿಗಳಿಂದ ರಸ್ತೆ ಸುರಕ್ಷತಾ ಸಪ್ತಾಹ ಜಾಥಾ ಮತ್ತು ಜಾಗೃತಿ ಕಾರ್ಯಕ್ರಮವನ್ನು ನಡೆಸಿದರು.

## ಕೊಡಗು

ಫೆಬ್ರವರಿ 02 ರಿಂದ 04ರ ವರೆಗೆ ವಿರಾಜಪೇಟೆಯ ಪ್ರಗತಿ ಶಾಲೆಯಲ್ಲಿ ನಡೆದ ಪದಕ ಕಾರ್ಯಾಗಾರವನ್ನು ಫೆಬ್ರವರಿ 02 ರಂದು ಉದ್ಘಾಟಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಪ್ರಕಾಶರವರು ವೇದಿಕೆಯಲ್ಲಿದ್ದ ಎಲ್ಲ ಗಣ್ಯರ ಒಡಗೂಡಿ ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಿಸಿದರು. ರಾಷ್ಟ್ರ ಸಂಸ್ಥೆಯ ಶ್ರೀಮತಿ ಮಾಚಮ್ಮ ಅವರು ಮಾತನಾಡುತ್ತಾ ಸ್ಕೌಟ್-ಗೈಡ್ ಬೆಳೆದು ಬಂದ ದಾರಿ ಸ್ಕೌಟ್-ಗೈಡ್ ಇಂದ ಮಕ್ಕಳಿಗೆ ಏನು ಉಪಯೋಗ ಎಂಬುದರ ಬಗ್ಗೆ ತಿಳಿಸಿಕೊಟ್ಟರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯು ಮಾತನಾಡುತ್ತಾ "ಮಕ್ಕಳು ಈಗಿನಿಂದಲೇ ಗುರು ಹಿರಿಯರಿಗೆ ಗೌರವ ಕೊಡುವುದನ್ನು



ಕಲಿತುಕೊಳ್ಳಬೇಕು ಮತ್ತು ಸ್ಕೌಟ್–ಗೈಡ್‌ನಲ್ಲಿ ಸೇರಿದಂತಹ ವಿದ್ಯಾರ್ಥಿಗಳು ಮುಂದೆ ಅವರ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಉನ್ನತ ಮಟ್ಟಕ್ಕೆ ಹೋಗುತ್ತಾರೆ ಎಂಬ ಭರವಸೆ ನನಗಿದೆ” ಎಂದು ತಿಳಿಸಿದರು. ಗೈಡ್ ತರಬೇತಿ ಆಯುಕ್ತರಾಗಿರುವ ಶ್ರೀಮತಿ ಮೈಥಲಿ ರಾವ್ ಅವರು ಮಾತನಾಡಿದರು. ವೇದಿಕೆಯಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರು ಜಿಲ್ಲಾ ಗೈಡ್ ಆಯುಕ್ತರು ಆಗಿರುವ ಶ್ರೀಮತಿ ರಾಣಿ ಮಾಚಯ್ಯ, ಕ್ಷೇತ್ರ ಸಂಪನ್ಮೂಲ ಅಧಿಕಾರಿ, ಪ್ರಗತಿ ಶಾಲೆಯ ಮಾಲೀಕರು ಹಾಗೂ ಮಾಜಿ ಉಪಾಧ್ಯಕ್ಷರು ಆಗಿರುವ ಶ್ರೀ ಪೂವಯ್ಯನವರು, ಚೆನ್ನನ ಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿರಾಜಪೇಟೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸಚಿನ್ ಕುಟ್ಟಯ್ಯನವರು ವಹಿಸಿದ್ದರು ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರ ಪ್ರಾಸ್ತಾವಿಕ ನುಡಿಯನ್ನು ನುಡಿದರು ಕಾರ್ಯಕ್ರಮದ ನಿರೂಪಣೆಯನ್ನು ವಿರಾಜಪೇಟೆ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ವಕೀಲರು ಆಗಿರುವ ಶ್ರೀಮತಿ ತಸ್ಲಿಮ ಅತ್ತರ್ ನೆರವೇರಿಸಿದರು. 123 ಸ್ಕೌಟ್–ಗೈಡ್‌ಗಳು ಮತ್ತು ಗೈಡ್ ಕ್ಯಾಪ್ಟನ್, ಸ್ಕೌಟ್ ಮಾಸ್ಟರ್ಸ್‌ಗಳು ಉಪಸ್ಥಿತರಿದ್ದರು.

* ಫೆಬ್ರವರಿ 14 ರಂದು ಜಿಲ್ಲಾ ಸಂಸ್ಥೆಯ ವತಿಯಿಂದ ಜಿಲ್ಲಾ ಪುರಸ್ಕಾರ (ತೃತೀಯ ಸೋಪಾನ) ಪರೀಕ್ಷೆಯನ್ನು ನಡೆಸಲಾಯಿತು ಸ್ಕೌಟ್ಸ್, ಗೈಡ್ಸ್, ಕಬ್, ಬುಲ್ ಬುಲ್ ಸೇರಿದಂತೆ 236 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಮೈಥಿಲಿ ರಾವ್, ಸ್ಕೌಟ್ ವಿಭಾಗದ ನಾಯಕರಾಗಿ ರಂಜಿತ್ ಕೆ.ಯು, ಬುಲ್‌ಬುಲ್ ವಿಭಾಗದ ನಾಯಕಿಯಾಗಿ ಶ್ರೀಮತಿ ಡೈಸಿ, ಕಬ್ ವಿಭಾಗದ ನಾಯಕಿಯಾಗಿ ಶ್ರೀಮತಿ ರತಿಕುಮಾರಿ ಕಾರ್ಯ ನಿರ್ವಹಿಸಿದರು. ಪ್ರಧಾನ ಆಯುಕ್ತರು, ಜಿಲ್ಲಾ ಸಂಸ್ಥೆಯ ಎಲ್ಲಾ ಪಧಾದಿಕಾರಿಗಲು ಉಪಸ್ಥಿತರಿದ್ದರು.



* ಸ್ಥಳೀಯ ಸಂಸ್ಥೆ ಸಂಪಾಜೆ ಸರ್ಕಾರಿ ಪ್ರೌಢಶಾಲೆ, ಚೆಂಬುವಿನ ಭಗತ್ ಸಿಂಗ್ ಸ್ಕೌಟ್ ದಳ ವತಿಯಿಂದ ಸ್ಕೌಟ್‌ಗಳ ನಡೆ ಕೃಷಿಯ ಕಡೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.




## ಕೋಲಾರ

ಜನವರಿ 15 ರಂದು ಬಂಗಾರಪೇಟೆ ಸ್ಥಳೀಯ ಸಂಸ್ಥೆ ವತಿಯಿಂದ, ಆಶ್ಲೇ ಇಂಟರ್ ನ್ಯಾಷನಲ್ ಶಾಲಾ ಆವರಣದಲ್ಲಿ, ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಈ ಶಿಬಿರವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಸುಕನ್ಯಾರವರು ಉದ್ಘಾಟಿಸಿ, “ಶಾಲಾ ಜೀವನದಿಂದ ಕೌಶಲಗಳನ್ನು ವೃದ್ಧಿಸಿಕೊಂಡರೆ ಭವಿಷ್ಯದಲ್ಲಿ ಉತ್ತಮ ನಾಗರೀಕರಾಗಲು ಸ್ಕೌಟ್ಸ್–ಗೈಡ್ಸ್ ಶಿಕ್ಷಣ ಸಹಕಾರಿಯಾಗಿದೆ” ಎಂದು ತಿಳಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಶಂಕರಪ್ಪ, ಪ್ರಾಂಶುಪಾಲರಾದ ಶ್ರೀಮತಿ ಶಶಿಕಲಾ, ಶಿಬಿರದ ನಾಯಕರಾಗಿ ಶ್ರೀ ವೇಣುಗೋಪಾಲ್, ಶ್ರೀಮತಿ ಲಕ್ಷಮ್ಮ, ಶ್ರೀಮತಿ ವನಜಾ, ಶ್ರೀ ನಾರಾಯಣಸ್ವಾಮಿ, ಶಿಬಿರದ ನಿರ್ದೇಶಕ ಶ್ರೀ ನಂಜುಂಡಪ್ಪ ಮುಂತಾದವರು ಉಪಸ್ಥಿತರಿದ್ದರು.



* ಜನವರಿ 19 ರಂದು ಶ್ರೀನಿವಾಸಪುರ ತಾಲ್ಲೂಕಿನ ಸೋಮಯಾಜಲಹಳ್ಳಿಯ ಕೆ.ಪಿ.ಎಸ್. ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳಿಂದ ರಸ್ತೆ ಸುರಕ್ಷತಾ ಕ್ರಮಗಳ ಬಗ್ಗೆ ಜಾಗೃತಿ ಜಾಥಾ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಈ ಜಾಥಾ ಕಾರ್ಯಕ್ಕೆ ಶಾಲೆಯ ಉಪ ಪ್ರಾಂಶುಪಾಲರಾದ ಶ್ರೀ ಮಹಮ್ಮದ್ ಸಲೀಂರವರು ಚಾಲನೆ ನೀಡಿದರು.



* ಜನವರಿ 20 ರಂದು ಡಾ॥ ರಾಧಾಕೃಷ್ಣ ಶಾಲೆಯಲ್ಲಿ ಸಂಕ್ರಾತಿ ಸಂಭ್ರಮ ಕಾರ್ಯಕ್ರಮಕ್ಕೆ, ಜಿಲ್ಲಾ ಸಮಿತಿ ಅಧ್ಯಕ್ಷರಾದ ಶ್ರೀ ಬಸಪ್ಪಗೌಡ ಅವರು ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮತ್ತು ರೋಟರಿ ಕೋಲಾರ ನಂದಿನಿ ವತಿಯಿಂದ, ಶಾಲೆಗೆ 2 ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

* ಜನವರಿ 26 ರಂದು ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಕಛೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಧ್ವಜಾರೋಹಣವನ್ನು

ಜಿಲ್ಲಾ ನೋಡಲ್ ಅಧಿಕಾರಿಗಳಾದ ಶ್ರೀಯುತ ಸಿ.ಆರ್. ಅಶೋಕ್‌ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಅಧ್ಯಕ್ಷರಾದ ಶ್ರೀ ಬಸಪ್ಪಗೌಡ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಜನವರಿ 27 ರಂದು ಶ್ರೀನಿವಾಸಪುರ ತಾಲ್ಲೂಕಿನ ವೇಣು ವಿದ್ಯಾಸಂಸ್ಥೆಯಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ನಡೆಸಲಾಯಿತು. ಸ್ಕೌಟ್ ವಿಭಾಗಕ್ಕೆ ಶಿಬಿರದ ನಾಯಕರಾಗಿ ಶ್ರೀ ವಿನಯ್, ಗೈಡ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಉಮಾದೇವಿ, ಕಬ್ ವಿಭಾಗಕ್ಕೆ ನಾಯಕರಾಗಿ ಶ್ರೀ ಬಾಬು ವಿ., ಬುಲ್‌ಬುಲ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಗೌರಾಬಾಯಿರವರು ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರು, ಕಾರ್ಯದರ್ಶಿ ಶ್ರೀ ರಾಮಕೃಷ್ಣೇಗೌಡ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.




* ಫೆಬ್ರವರಿ 3 ರಂದು, ಶ್ರೀನಿವಾಸಪುರ ತಾಲ್ಲೂಕಿನ ಯಲ್ದೂರು ಗ್ರಾಮದಲ್ಲಿ ದ್ವಿತೀಯ ಸೋಪಾನ್ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಸ್ಕೌಟ್ ವಿಭಾಗಕ್ಕೆ ಶಿಬಿರದ ನಾಯಕರಾಗಿ ಶ್ರೀ ವಿನಯ್, ಗೈಡ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಉಮಾದೇವಿ, ಕಬ್ ವಿಭಾಗಕ್ಕೆ ನಾಯಕರಾಗಿ ಶ್ರೀ ರವೀಂದ್ರ, ಬುಲ್‌ಬುಲ್ ವಿಭಾಗಕ್ಕೆ ನಾಯಕಿಯಾಗಿ ಶ್ರೀಮತಿ ಗೌರಾಬಾಯಿರವರು ಸೇವೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರು, ಕಾರ್ಯದರ್ಶಿ ಶ್ರೀ ರಾಮಕೃಷ್ಣೇಗೌಡ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

* ಫೆಬ್ರವರಿ 11 ರಂದು ಬಂಗಾರಪೇಟೆ ಸ್ಥಳೀಯ ಸಂಸ್ಥೆಯ ಕಛೇರಿಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಮತ್ತು ಜಿಲ್ಲಾ ಉಪಾಧ್ಯಕ್ಷರಾದ ಡಾ॥ ಚಂದ್ರಶೇಖರ್‌ರವರು ಉದ್ಘಾಟಿಸಿದರು. ಮತ್ತು ಅದೇ ದಿನ ಸ್ಥಳೀಯ ಸಂಸ್ಥೆಯ ರ‍್ಯಾಲಿಯನ್ನು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರಿಯಪ್ಪ ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ ಮತ್ತು ಜಿಲ್ಲಾ ಉಪಾಧ್ಯಕ್ಷರಾದ ಡಾ॥ ಚಂದ್ರಶೇಖರ್‌ರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಫೆಬ್ರವರಿ 12 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ 2023ರ ರಾಜ್ಯ ಪುರಸ್ಕಾರ ಪ್ರಮಾಣ ಪತ್ರವನ್ನು ಕೋಲಾರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಯುತ ಅಕ್ರಂ ಪಾಷರವರು ವಿತರಿಸಿ “ಎಲ್ಲಾ ವಿದ್ಯಾರ್ಥಿಗಳು ಸಂವಿಧಾನದ ಆಡಿಯಲ್ಲಿ ಬದುಕಬೇಕು, ತಾವು ಸಂವಿಧಾನವನ್ನು ಓದುವ ಮೂಲಕ ಅರಿವು ಪಡೆದು ತಮ್ಮ ಸುತ್ತಲಿನ



ಜನರಿಗೆ ಸಂವಿಧಾನದ ಬಗ್ಗೆ ತಿಳಿಸಬೇಕು” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಕೆ.ವಿ. ಶಂಕರಪ್ಪ, ಜಿಲ್ಲಾ ಉಪಾಧ್ಯಕ್ಷರಾದ ಡಾ॥ ಚಂದ್ರಶೇಖರ್ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮೈಸೂರು

ಜನವರಿ 24 ರಂದು ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು, ಡಾ. ರಚನಾ ನಾಗೇಶ್, ಅಧ್ಯಕ್ಷರು, ರೋಟರಿ ಪಂಚಶೀಲ, ಮೈಸೂರು ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಯೋಗೇಶ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶ್ರೀಮತಿ ಪುಷ್ಪಲತಾ ಜಗನ್ನಾಥ್, ಮಾಜಿ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಉಪಾಧ್ಯಕ್ಷರು, ಜಿಲ್ಲಾ ಸಂಸ್ಥೆ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಮತಿ ಅನಿತಾ, ಜಿಲ್ಲಾ ಸಂಸ್ಥೆ ಉಪಾಧ್ಯಕ್ಷರು ಶ್ರೀಮತಿ ಪುಷ್ಪವಲ್ಲಿ, ಉಪಾಧ್ಯಕ್ಷರು, ರಾಜ್ಯ ಸಂಸ್ಥೆ, ಹಾಗೂ ಜಿಲ್ಲಾ ಆಯುಕ್ತರು (ಗೈಡ್ಸ್), ಜಿಲ್ಲಾ ಸಂಸ್ಥೆ, ಮೈಸೂರು, ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಮೃತಮ್ಮ, ಜಿಲ್ಲಾ ಆಯುಕ್ತರು (ಕಬ್), ಶ್ರೀ ಎಂ. ಎನ್. ಸುರೇಶ್ ಕುಮಾರ್, ಜಿಲ್ಲಾ ಆಯುಕ್ತರು (ರೋವರ್) ಜಿಲ್ಲಾ ಸಂಘಟಕರುಗಳು ಉಪಸ್ಥಿತರಿದ್ದರು ಮೈಸೂರು ಜಿಲ್ಲೆಯ ವಿವಿಧ ಸ್ಥಳೀಯ ಸಂಸ್ಥೆಗಳ ಶಾಲಾ ಕಾಲೇಜುಗಳಿಂದ 150 ಗೈಡ್ಸ್, ರೇಂಜರ್ಸ್ ಮತ್ತು ಗೈಡ್ರ್ಸ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಹಾರಾಣಿ ವಿಜ್ಞಾನ ಕಾಲೇಜಿನ ರೇಂಜರ್ ಆದ ಕು॥ ಬಿ.ಬಿ. ಕುಲ್ಸುಮ್‌ರವರು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಬಗ್ಗೆ ಮಾತನಾಡಿದರು.



ಕಾರ್ಯಕ್ರಮದಲ್ಲಿ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಹೆಣ್ಣು ಮಕ್ಕಳ ಹಕ್ಕುಗಳು ಮತ್ತು ಕಾನೂನಿನ ಬಗ್ಗೆ ಅರಿವು, ಹೆಣ್ಣು ಮಕ್ಕಳ ಶಿಕ್ಷಣ ಆರೋಗ್ಯ ಮತ್ತು ಪೌಷ್ಟಿಕಾಂಶದ ಬಗ್ಗೆ ಮಾಹಿತಿ, ಸಣ್ಣ ಉಳಿತಾಯದ ಬಗ್ಗೆ ಮಾಹಿತಿ ನೀಡಿ ಅಂಚೆ ಕಚೇರಿ ಮತ್ತು ಬ್ಯಾಂಕುಗಳನ್ನು ಖಾತೆ ತೆರೆಯುವ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಡಾ. ರಚನಾ ನಾಗೇಶ್ ಮತ್ತು ಶ್ರೀ ಯೋಗೇಶ್‌ರವರು ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಶ್ರೀಮತಿ ಪುಷ್ಪವಲ್ಲಿ, ಜಿಲ್ಲಾ ಆಯುಕ್ತರು (ಗೈಡ್ಸ್) ಸ್ವಾಗತ ಕೋರಿದರು. ಶ್ರೀಮತಿ ಅಮೃತಮ್ಮ, ಜಿಲ್ಲಾ ಆಯುಕ್ತರು (ಕಬ್) ವಂದನಾರ್ಪಣೆ ಮಾಡಿದರು ಪ್ರೀಮಿಯರ್ ಮುಕ್ತದಳದ ರೇಂಜರ್ ಕುಮಾರಿ ಸಿಂಚನರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

* ಮೈಸೂರಿನ ಬನ್ನಿ ಮಂಟಪದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮದ ಪ್ರಯುಕ್ತ ನಡೆದ ಕವಾಯತಿನಲ್ಲಿ ಕ್ಯಾಪಿಟಲ್ ಶಾಲೆ, ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.

* ಸುತ್ತೂರಿನಲ್ಲಿ ನಡೆದ 75 ಗಣರಾಜ್ಯೋತ್ಸವದ ಅಂಗವಾಗಿ ನೇತಾಜಿ ಸ್ಕೌಟ್ಸ್ ದಳ ಭಾಗವಹಿಸಿದ ಜೆ.ಎಸ್.ಎಸ್. ಪ್ರೌಢ ಶಾಲೆಯ ಸ್ಕೌಟ್ಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.



* ಫೆಬ್ರವರಿ 01 ರಂದು ಗುರುವಾರ ಮೈಸೂರು ಜಿಲ್ಲಾ ಸಂಸ್ಥೆಯಲ್ಲಿ ಸ್ಕೌಟರ್ಸ್ ಮತ್ತು ಗೈಡರ್ಸ್ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ವಹಿಸಿದ್ದರು. ಜಿಲ್ಲಾ ಪದಾಧಿಕಾರಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಮೈಸೂರು ಉತ್ತರ-ದಕ್ಷಿಣ, ಶ್ರೀರಾಮಪುರ, ಹಾಗೂ ಮೈಸೂರು ತಾಲೂಕು ಸ್ಥಳೀಯ ಸಂಸ್ಥೆಗಳ ಸುಮಾರು 48 ಮಂದಿ ಶಿಕ್ಷಕರು ಭಾಗವಹಿಸಿದ್ದರು.



* ಫೆಬ್ರವರಿ 06 ರಂದು ಕೇಂದ್ರ ಕಚೇರಿ ಮೈಸೂರು ಇಲ್ಲಿ ಮೈಸೂರು ಜಿಲ್ಲೆ, ದಕ್ಷಿಣ ವಲಯ ಸಂಸ್ಥೆಯ ರ್‍ಯಾಲಿಯನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಜಿಲ್ಲೆಯ ಹಿರಿಯ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೈಸೂರು ಆದ ಶ್ರೀ ದಿನೇಶ್ ಬಿ.ಜಿ.ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಗಳು ಉಪಸ್ಥಿತರಿದ್ದರು. ಶ್ರೀ ಅಜಯ್ ಕುಮಾರ್ ಸ್ಥಳೀಯ ಸಂಸ್ಥೆಯ ಸಭಾಧ್ಯಕ್ಷರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ದಕ್ಷಿಣ ವಲಯ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 800 ಮಂದಿ ಕಬ್, ಬುಲ್‌ಬುಲ್, ಸ್ಕೌಟ್, ಗೈಡ್ಸ್, ರೋಂವರ್, ರೇಂಜರ್, ಸ್ಕೌಟರ್ ಮತ್ತು ಗೈಡರ್‌ಗಳು ಭಾಗವಹಿಸಿದ್ದರು.



## ರಾಯಚೂರು

ಜನವರಿ 17 ರಂದು ಜಿಲ್ಲಾ ಸಂಸ್ಥೆ ರಾಯಚೂರು, ಸ್ಥಳೀಯ ಸಂಸ್ಥೆ ಲಿಂಗಸುಗೂರು, ಶ್ರೀ ಅಮರೇಶ್ವರ ಬಾಲಕಿಯರ ಪ್ರೌಢ ಶಾಲೆ, ಲಿಂಗಸುಗೂರು ಮತ್ತು ಪೋಲಿಸ್ ಇಲಾಖೆ ವತಿಯಿಂದ ನಡೆದ ರಸ್ತೆ ಸುರಕ್ಷತಾ ಸಪ್ತಾಹ ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ರಸ್ತೆ ಸುರಕ್ಷತೆ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ಅಮರೇಶ್ವರ ವಿದ್ಯಾವರ್ಧಕ ಸಂಘದ ಆಡಳಿತ ಅಧಿಕಾರಿಗಳಾದ ಶ್ರೀ ಬಸವಂತರಾಯ ಕುರಿ ಇವರು ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಟಿ.ಶರಣಪ್ಪ ಕಾರ್ಯದರ್ಶಿಗಳು, ಪ್ರಭಾರಿ ಮುಖ್ಯೋಪಾಧ್ಯಾಯನಿ ಶ್ರೀಮತಿ ಅನುಸೂಯ ಹಾಗೂ ದೈಹಿಕ ಶಿಕ್ಷಕಿಯರಾದ ಶ್ರೀಮತಿ ಗಂಗಮ್ಮ ಕಟ್ಟಿಮನಿ ಗೈಡ್ ಕ್ಯಾಪ್ಟನ್ ಹಾಗೂ ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.



* ಜನವರಿ 20 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ಶಾಂತಿ ನಿಕೇತನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಸಿರವಾರ ಇವರುಗಳ ಸಂಯುಕ್ತಾಶ್ರಯದಲ್ಲಿ ಶಾಲೆಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಆಹಾರ ಮೇಳವನ್ನು ಏರ್ಪಡಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಅನುರಾಧ ಯು., ಗೈಡ್ ಕ್ಯಾಪ್ಟನ್/ ಪ್ರಾಂಶುಪಾಲರು, ಶ್ರೀ ಅಂಬಣ್ಣ ನಾಯಕ ಮ್ಯಾಕಲ್ ಎಸ್.ಜಿ.ವಿ/ ಎಸ್.ಎಮ್.ಸಿ., ಕು. ಕುಸುಮ, ಲೇಡಿ ಕಬ್ ಮಾಸ್ಟರ್ ಹಾಗೂ ಸ್ಕೌಟ್ಸ್, ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

* ಜನವರಿ 28 ರಿಂದ ಫೆಬ್ರವರಿ 03ರ ವರೆಗೆ ಶ್ರೀ ಕೃಷ್ಣ ದೇವರಾಯ ಶಾಲೆ ಹೊಸಹಳ್ಳಿ ಕ್ಯಾಂಪ್, ಸಿಂಧನೂರು ಇಲ್ಲಿ ನಡೆದ ಜಿಲ್ಲಾ ಮಟ್ಟದ ಕಬ್ ಮಾಸ್ಟರ್, ಫ್ಲಾಕ್ ಲೀಡರ್ ಹಾಗೂ ಸ್ಕೌಟ್ ಮಾಸ್ಟರ್, ಗೈಡ್ ಕ್ಯಾಪ್ಟನ್‌ರವರ ಮೂಲ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಶ್ರೀ ಎಸ್. ಶರಣೇಗೌಡ, ಅಧ್ಯಕ್ಷರು ಸ್ಥಳೀಯ ಸಂಸ್ಥೆ ಸಿಂಧನೂರುರವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಜಗದೀಶ್ ಸ್ಕೌಟ್ ಮಾಸ್ಟರ್ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಬೀರಪ್ಪ ಶಂಭೋಜಿ, ಕಾರ್ಯದರ್ಶಿಗಳು / ಸಹಾಯಕ ಜಿಲ್ಲಾ ಆಯುಕ್ತರು ಮುಕ್ತದಳ ರಾಯಚೂರುರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ, ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕರವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಚಂದ್ರಕಲಾ, ಪ್ರಾಂಶುಪಾಲರು, ಶ್ರೀ ಕೃಷ್ಣ ದೇವರಾಯ ಶಾಲೆ, ಶ್ರೀ ಬಸವರಾಜ ಬೋರೆಡ್ಡಿ, ಜಿಲ್ಲಾ ಮುಖ್ಯ ಆಯುಕ್ತರು ರಾಯಚೂರು, ಶ್ರೀ ಬಸವರಾಜ, ಗದಗಿನ ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಭಾಸ್ಕರ್, ಶ್ರೀಮತಿ ಪದ್ಮಾರೆಡ್ಡಿ, ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷರು ಸಿಂಧನೂರುರವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀಮತಿ ರಮಾದೇವಿ ಶಂಭೋಜಿ, ಉಪಾಧ್ಯಕ್ಷರು, ಶ್ರೀ ವೆಂಕಣ್ಣ ವಟಗಲ್ ಉಪಾಧ್ಯಕ್ಷರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಬ್ ವಿಭಾಗದ ಶಿಬಿರದ ನಾಯಕರಾಗಿ ಶ್ರೀ ಕೃಷ್ಣಮೂರ್ತಿ, ಎ.ಎಲ್.ಟಿ., ಮಂಡ್ಯ ಹಾಗೂ ಫ್ಲಾಕ್ ವಿಭಾಗದ ಶಿಬಿರದ ನಾಯಕಿಯಾಗಿ ಶ್ರೀಮತಿ ಉಷಾಬಾಯಿ ಎ.ಎಲ್.ಟಿ.(ಕಬ್) ಮತ್ತು ಸ್ಕೌಟ್ ವಿಭಾಗದ ಶಿಬಿರದ ನಾಯಕರಾಗಿ ಶ್ರೀ ಮೋಹಿದ್ದಿನ್ ಶರೀಫ್ ಸಾಬ್, ಎ.ಎಲ್.ಟಿ. (ಸ್ಕೌ), ಶ್ರೀ ಶಶಿಕಾಂತ್ ದೇಸಾಯಿ ಎ.ಎಲ್.ಟಿ.(ಸ್ಕೌ), ಹಾಗೂ ಗೈಡ್ ವಿಭಾಗದ ನಾಯಕಿಯಾಗಿ ಶ್ರೀಮತಿ ಸೀಮಾ ಜಸ್ಟಿನ್ ರೆಡ್ಡಿ ಎ.ಎಲ್.ಟಿ.(ಗೈ)ರವರು ಶಿಬಿರವನ್ನು ನಿರ್ವಹಿಸಿದರು.



ಶ್ರೀ ಎನ್.ಬಿ. ಜೋಷಿ ಖಜಾಂಚಿಗಳು ಅವರು ಎಲ್ಲರಿಗೂ ವಂದಿಸಿದರು. ಶ್ರೀ ಶಂಕರ್ ದೇವರು ಹಿರೇಮಠ, ಕಬ್ ಮಾಸ್ಟರ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಶ್ರೀ ಅಂಬಣ್ಣ ನಾಯಕ ಮ್ಯಾಕಲ್, ಎಸ್.ಜಿ.ವಿ/ಎಸ್.ಎಮ್.ಸಿ.ರವರು ಶಿಬಿರವನ್ನು ಸಂಘಟಿಸಿದರು. ಶಿಬಿರದಲ್ಲಿ ಕಬ್ ಮಾಸ್ಟರ್ 15, ಫ್ಲಾಕ್ ಲೀಡರ್ 16, ಸ್ಕೌಟ್ ಮಾಸ್ಟರ್ 59, ಗೈಡ್ ಕ್ಯಾಪ್ಟನ್ 38 ಒಟ್ಟು 128 ಶಿಬಿರಾರ್ಥಿಗಳು ಭಾಗವಹಿಸಿದ್ದರು.

## ಶಿರಸಿ

ಡಿಸೆಂಬರ್ 26 ರಂದು ಸರಕಾರಿ ಪ್ರೌಢಶಾಲೆ ಹಿರ್ಗಾನ, ಕಾರ್ಕಳ ತಾಲೂಕು ಇಲ್ಲಿ ಗೈಡ್ ಘಟಕದ ಉದ್ಘಾಟನಾ ಸಮಾರಂಭ ನೆರವೇರಿಸಲಾಯಿತು. 9ನೇ ತರಗತಿಯ ವಿದ್ಯಾರ್ಥಿನಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀಮತಿ ಪವಿತ್ರ ಗೈಡ್ಸ್ ಶಿಕ್ಷಕಿ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ರಮೇಶ್ ಬಂಟಕಲ್ ಸ್ಕೌಟ್ಸ್ ಶಿಕ್ಷಕ ಅತಿಥಿಗಳನ್ನು ಸ್ವಾಗತಿಸಿದರು. ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಶಂಕರ್ ನಾಯಕರವರು ಗೈಡ್ಸ್ ದಳವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಮತ್ತು ಶಾಲಾ ಎಸ್.ಡಿ.ಎಂ.ಸಿ. ಸದಸ್ಯೆ ಶ್ರೀಮತಿ ರತ್ನಾವತಿ ನಾಯಕ್, ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಹೇಮಲತಾ ರವರು ಅಧ್ಯಕ್ಷೀಯ ಭಾಷಣ ಮಾಡಿದರು. ವಿದ್ಯಾರ್ಥಿನಿ ಸಾನ್ವಿಯವರ ಧನ್ಯವಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.



## ತುಮಕೂರು

ಜನವರಿ 10 ರಂದು ಸ್ಥಳೀಯ ಸಂಸ್ಥೆ ಕುಣಿಗಲ್ ವತಿಯಿಂದ ರಸ್ತೆ ಸುರಕ್ಷಾತಾ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಕುಣಿಗಲ್ ಪೊಲೀಸ್ ಠಾಣೆ. ಮಾರ್ಗದರ್ಶನದಂತೆ ಸ್ಕೌಟ್-ಗೈಡ್ ರೋವರ್ಸ್-ರೇಂಜರ್ಸ್ ವಿದ್ಯಾರ್ಥಿಗಳೊಂದಿಗೆ ಏರ್ಪಡಿಸಲಾಗಿತ್ತು.



* ಜನವರಿ 12 ರಂದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಸಂಸ್ಥೆ ತುಮಕೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇವರ ಸಹಯೋಗದೊಂದಿಗೆ ರಾಷ್ಟ್ರೀಯ ಯುವದಿನ ಆಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿಗಳಾದ, ಶ್ರೀ ಶಿವಾನಂದ ಬಿ. ಕರಾಳೆ, ಶ್ರೀ ರಾಮಕೃಷ್ಣ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿಗಳು, ಜಿಲ್ಲಾ ಸಿವಿಲ್ ನ್ಯಾಯಾಧೀಶೆ ಶ್ರೀಮತಿ ನೂರುನ್ನಿಸಾ, ಮಹಾನಗರ ಪಾಲಿಕೆಯ ಶ್ರೀಮತಿ ಗಿರಿಜಾ, ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಶ್ರೀ ಅಂಜನಪ್ಪ, ಜಿಲ್ಲಾ ಸಹಾಯಕ ಆಯುಕ್ತರಾದ ಶ್ರೀ ಕೆಂಪರಂಗಯ್ಯ, ಯುವ ಸಬಲೀಕರಣ ಕ್ರೀಡಾ ಇಲಾಖೆಯ ಶ್ರೀ ರೋಹಿತ್ ಗಂಗಾಧರ್ ಕಾಲೇಜಿನ ಪ್ರಾಂಶುಪಾಲರು, ಜಿಲ್ಲಾ ಸಂಘಟಕರು ವಿವಿಧ ಕಾಲೇಜಿನಿಂದ ಆಗಮಿಸಿದ್ದ ರೋವರ್ಸ್–ರೇಂಜರ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ವೀರಯೋಧ ಕ್ಯಾಪ್ಟನ್ ಪ್ರಾಂಜಲ್‌ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ರೋವರ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಕುರಿತು ಆಶುಭಾಷಣ, ಯೋಗಾಸನದ ಮಹತ್ವ, ರಸಪ್ರಶ್ನೆ ಸ್ಪರ್ಧೆಗಳನ್ನು ಜಿಲ್ಲಾ ಸಂಸ್ಥೆ ವತಿಯಿಂದ ನಡೆಸಲಾಯಿತು.




* ಜನವರಿ 16 ರಂದು ಸ್ಥಳೀಯ ಸಂಸ್ಥೆ ತಿಪಟೂರು ತಾಲೂಕು ವತಿಯಿಂದ ರಸ್ತೆ ಸುರಕ್ಷತಾ ಜಾಗೃತಿ ಜಾಥಾ ಕಾರ್ಯಕ್ರಮವನ್ನು ನಡೆಸಲಾಯಿತು.

* ಜನವರಿ 26 ರಂದು 75ನೇ ಗಣರಾಜ್ಯೋತ್ಸವ ದಿನಾಚರಣೆ ಪ್ರಯುಕ್ತ ಬೆಳಗ್ಗೆ 8 ಗಂಟೆಗೆ ಜಿಲ್ಲಾ ಸ್ಕೌಟ್ ಭವನದಲ್ಲಿ ಧ್ವಜಾರೋಹಣವನ್ನು ಶ್ರೀ ಹುಚ್ಚಯ್ಯ, ಜಿಲ್ಲಾ ಸಹಾಯಕ ಆಯುಕ್ತರು ನೆರವೇರಿಸಿದರು. ತದನಂತರ ಮಹಾತ್ಮ ಗಾಂಧಿ ಕ್ರೀಡಾಂಗಣದಲ್ಲಿ ನಡೆದ ಕವಾಯಿತು ಪ್ರದರ್ಶನದಲ್ಲಿ ಜಿಲ್ಲಾ ಸಂಸ್ಥೆ ವತಿಯಿಂದ ಒಟ್ಟು 9 ತಂಡಗಳು ಭಾಗಿಯಾಗಿದ್ದು, ಇದರಲ್ಲಿ ಉತ್ತಮ ಕವಾಯತು ಪ್ರದರ್ಶನ ನೀಡಿ ಪ್ರಥಮ ಬಹುಮಾನವನ್ನು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ರೇಂಜರ್ ತಂಡ ಪಡೆಯಿತು. ಎರಡನೇ ಬಹುಮಾನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತುಮಕೂರು ರೇಂಜರ್ಸ್ ತಂಡ ಪಡೆಯಿತು, ಮೂರನೇ ಬಹುಮಾನ ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜಿನ ರೋವರ್ ತಂಡಕ್ಕೆ ಲಭಿಸಿತು. ಬಹುಮಾನವನ್ನು ಮಾನ್ಯ ಗೃಹ ಸಚಿವರು ಆಗಿರುವಂತಹ ಡಾ. ಜಿ. ಪರಮೇಶ್‌ರವರು ವಿದ್ಯಾರ್ಥಿಗಳಿಗೆ ವಿತರಿಸಿದರು.

* ಜನವರಿ 17 ರಂದು ಸ್ಥಳೀಯ ಸಂಸ್ಥೆ ತುಮಕೂರು, ಜಿಲ್ಲಾ ನಗರ ಪೊಲೀಸ್ ಮತ್ತು ತಾಲೂಕು ಶಾಲಾ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ. "ರಸ್ತೆ ಸುರಕ್ಷತಾ ಸಪ್ತಾಹ" ಕಾರ್ಯಕ್ರಮ ಮತ್ತು ದ್ವಿತೀಯ ಸೋಪಾನ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಚಂದ್ರಸೂರ್ಯಕಲಾ, ಕರಕುಶಲ ಅಭಿವೃದ್ಧಿ ಮಾಜಿ ಅಧ್ಯಕ್ಷರಾದ ಶ್ರೀ ಮುರುಳೀಧರ ಹಾಲಪ್ಪ, ನಗರ ಪೊಲೀಸ್ ಸರ್ಕಲ್ ಇನ್‌ಪೆಕ್ಟರ್‌ರವರು ಹಸಿರು ನಿಶಾನೆ ತೋರಿಸುವುದರ ಮುಖೇನ ರಸ್ತೆ ಸುರಕ್ಷತಾ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಉಪ್ಪಾರಹಳ್ಳಿ ಕುಮಾರಣ್ಣ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಶೆಟ್ರು, ಶ್ರೀ ಚಂದ್ರಶೇಖರ್, ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಈಶ್ವರಯ್ಯ, ತಾಲ್ಲೂಕು ದೈಹಿಕ ಶಿಕ್ಷಣ ಅಧಿಕಾರಿಗಳಾದ ಶ್ರೀ ಪರಮೇಶ್ವರ್, ಪೊಲೀಸ್ ಇಲಾಖೆಯ ಅಧಿಕಾರಿಗಳು ತಾಲ್ಲೂಕು ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ವಿವಿಧ ಶಾಲೆಗಳಿಂದ ಬಂದಿದ್ದ 250 ಸ್ಕೌಟ್–ಗೈಡ್ ವಿದ್ಯಾರ್ಥಿಗಳು, ದಳ ನಾಯಕ ನಾಯಕಿಯರು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಸ್ತೆ ಸಂಚಾರ ನಿಯಮಕ್ಕೆ ಅನುಸಾರವಾಗಿ ತಿಳುವಳಿಕೆಯ 50ಕ್ಕೂ ಹೆಚ್ಚು ಫಲಕಗಳನ್ನು ಹಿಡಿದು ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರರಿಗೆ ತಿಳುವಳಿಕೆ ನೀಡಿದರು.






## ವಿಜಯನಗರ

ಫೆಬ್ರವರಿ 22 ರಂದು ಹೊಸಪೇಟೆ ತಾಲೂಕಿನ ವಿಜಯನಗರ ಮಹಾವಿದ್ಯಾಲಯದ ಸುವರ್ಣ ಭವನದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಯ ಸಹಕಾರದೊಂದಿಗೆ ಸಂಸ್ಥಾಪಕರ ದಿನಾಚರಣೆ, ಪ್ರಥಮ ಜಿಲ್ಲಾ ಮೇಳ, ರಾಜ್ಯ ಪುರಸ್ಕಾರ ಪ್ರಮಾಣ ಪತ್ರ ವಿತರಣೆ,ಸಮಾರಂಭ ನಡೆಯಿತು.ಇದರ ಅಂಗವಾಗಿ ನಗರದ ಪ್ರಮುಖ ಬೀದಿಗಳಲ್ಲಿ ಸ್ಕೌಟ್ಸ್–ಗೈಡ್ಸ್ ಧ್ಯೇಯಗಳ ಬಿತ್ತಿ ಪತ್ರ ಗಳನ್ನು ಹಿಡಿದು ಪಥ ಸಂಚಲನ ನಡೆಸಲಾಯಿತು. ಈ ಪಥ ಸಂಚಲನಕ್ಕೆ ವಿಜಯನಗರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊಫೆಸರ್ ಟಿ ಸುಭಾಷ್ ರವರು ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು. ಪಥ ಸಂಚಲನ ಮುಗಿದ ನಂತರ ಮಕ್ಕಳಿಗೆ ಶ್ರೀ ಪಿ ವೆಂಕಟೇಶ್ ಉಪಾಧ್ಯಕ್ಷರು ಜಿಲ್ಲಾ ಸಂಸ್ಥೆ ಇವರು ನೀಡಿದ ತಂಪು ಪಾನೀಯವನ್ನು ಮಕ್ಕಳಿಗೆ ನೀಡಲಾಯಿತು. ನಂತರ ಮೇಳದ ಉದ್ಘಾಟನಾ ಕಾರ್ಯಕ್ರಮ ಪ್ರಾರಂಭವಾಯಿತು. ಸ್ವಾಗತ ಕಾರ್ಯಕ್ರಮದ ನಂತರ ವೇದಿಕೆ ಮೇಲೆ ಆಸೀನರಾಗಿದ್ದ ಗಣ್ಯರು ಸಂಸ್ಥಾಪಕರಾದ



ಬೇಡನ್ ಪೊವೆಲ್ ಮತ್ತು ಲೇಡಿ ಬೇಡನ್ ಪೊವೆಲ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ ಶ್ರೀ ಸದಾಶಿವ ಪ್ರಭು ಬಿ., ಭಾ ಆ ಸೇ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ವಿಜಯನಗರ ಜಿಲ್ಲೆ. ಇವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.ನಂತರ ತಮ್ಮ ಉದ್ಘಾಟನಾ ನುಡಿಗಳಲ್ಲಿ "ಈ ಸಂಸ್ಥೆಯು ಮಕ್ಕಳಲ್ಲಿ ಶಿಸ್ತು, ಸೇವೆ, ದೇಶಾಭಿಮಾನ ಇತರೆ ಜೀವನ ಕೌಶಲಗಳನ್ನು, ಕಲಿಯುವುದರ ಜೊತೆಗೆ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ .ಹಾಗೂ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಮಕ್ಕಳು ಈ ಸಂಸ್ಥೆಯಲ್ಲಿ ಭಾಗವಹಿಸಬೇಕು" ಎಂದು ತಿಳಿಸಿದರು, ನಂತರ 2022/ 23ನೇ ಸಾಲಿನಲ್ಲಿ ನಡೆದ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರದಲ್ಲಿ ಉತ್ತೀರ್ಣರಾದ. ಮಕ್ಕಳಿಗೆ ಮಾನ್ಯ ರಾಜ್ಯ ಪಾಲರು ನೀಡಿದ ರಾಜ್ಯ ಪುರಸ್ಕಾರ ಪ್ರಮಾಣ ಪತ್ರಗಳನ್ನು ವಿತರಿಸಿದರು. ನಂತರ ಶ್ರೀಮತಿ ಯಶೋಧರ ದೇವಿ ಘೋರ್ಪಡೆ ಇವರು ಮಾತನಾಡಿ ಸಂಸ್ಥಾಪಕರಾದ ಬೇಡನ್ ಪೊವೆಲ್ ಅವರ ಬಗ್ಗೆ ಮಾಹಿತಿಯನ್ನು ನೀಡುವುದರ ಜೊತೆಗೆ ಶುಭಾಶಯ ತಿಳಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊಫೆಸರ್ ಟಿ ಶುಭಾಷ್ ಪ್ರಾಂಶುಪಾಲರು ವಿಜಯನಗರ ಮಹಾವಿದ್ಯಾಲಯ ಇವರು ಮಾತನಾಡಿ 'ಈ ಸಂಸ್ಥೆಯಿಂದ ಮಕ್ಕಳಲ್ಲಿ ನೆಲ, ಜಲ, ದೇಶ ಪ್ರೇಮ ಬೆಳೆಸುತ್ತದೆ' ಎಂದು ತಿಳಿಸಿದರು. ನಂತರ ಶ್ರೀ ಜಾಲಿ ಬಸವರಾಜ್ ಉಪಾಧ್ಯಕ್ಷರು ಸ್ಥಳೀಯ ಸಂಸ್ಥೆ ಹೊಸಪೇಟೆ ಇವರು ಮಾತನಾಡಿ 'ಈ ಸಂಸ್ಥೆಯಿಂದ ನಡೆಸುವ ಚಟುವಟಿಕೆಗಳು ಮಕ್ಕಳ ಬೌದ್ಧಿಕ ಮತ್ತು ದೈಹಿಕ ಚಟುವಟಿಕೆಗಳಿಗೆ ಪೂರಕವಾಗಿದೆ ಹಾಗೂ ಶಿಸ್ತು ,ಸಮಯ ಪಾಲನೆ ಜೀವನದಲ್ಲಿ ಅಳವಡಿಸಿ ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ'. ಎಂದು ತಿಳಿಸಿದರು .ನಂತರ ಶ್ರೀ ಚನ್ನಬಸಪ್ಪ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹೊಸಪೇಟೆ ಇವರು ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿ ಶುಭಾಶಯ ಕೋರಿದರು. ಕಾರ್ಯಕ್ರಮದಲ್ಲಿ 24 ಕಬ್, ಬುಲ್ ಬುಲ್ಸ್, 140 ಸ್ಕೌಟ್ಸ್, 152 ಗೈಡ್ಸ್ ಮತ್ತು 30 ರೋವರ್ಸ್ ಮತ್ತು ರೇಂಜರ್ಸ್ 30 ಸ್ಕೌಟರ್ಸ್ ಮತ್ತು



ಗೈಡರ್ಸ್ ಭಾಗವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಎಂ.ಎಂ. ವಿರೂಪಾಕ್ಷಯ್ಯ ಜಿಲ್ಲಾ ಖಜಾಂಚಿ ಸ್ವಾಗತವನ್ನು ಕೋರಿದರು. ಶ್ರೀ ಮಂಜುನಾಥಪ್ಪ ಜಿಲ್ಲಾ ಕಾರ್ಯದರ್ಶಿ, ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಡಾ. ಶಿವ ಮಲ್ಲಿಕಾರ್ಜುನ ರಾಜ್ಯ ಪರಿಷತ್ ಸದಸ್ಯರು ವಂದನಾರ್ಪಣೆ ಮಾಡಿದರು, ಶ್ರೀ ತಿಪ್ಪೇಸ್ವಾಮಿ ಕಾರ್ಯದರ್ಶಿ ಸ್ಥಳೀಯ ಸಂಸ್ಥೆ ಹೊಸಪೇಟೆ ಇವರು ಕಾರ್ಯಕ್ರಮದ ನಿರೂಪಣೆ ನಿರ್ವಹಿಸಿದರು.

## ಅಭಿನಂದನೆಗಳು



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ(ರಿ.) ಬೆಂಗಳೂರು, ಜಿಲ್ಲಾ ಘಟಕ, ರಾಯಚೂರು ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ **'ಜಿಲ್ಲಾ ಮಟ್ಟದ ಅಕ್ಕ ಪ್ರಶಸ್ತಿ'ಗೆ** ಭಾಜನರಾದ **ಶ್ರೀಮತಿ ಚಂದ್ರಕಲಾ ಪ್ರಕಾಶ್,** ಪ್ರಾಂಶುಪಾಲರು, ಗೈಡ್ ಕ್ಯಾಪ್ಟನ್ ಶ್ರೀ ಕೃಷ್ಣ ದೇವರಾಯ ವಿದ್ಯಾ ಸಂಸ್ಥೆ, ಹೊಸಹಳ್ಳಿ ಕ್ಯಾಂಪ್ ಸಿಂಧನೂರು ರವರಿಗೆ ರಾಜ್ಯ ಸಂಸ್ಥೆ ವತಿಯಿಂದ ತುಂಬು ಹೃದಯದ ಅಭಿನಂದನೆಗಳು

# ಸಾರ್ವಜನಿಕರೇ ಗಮನಿಸಿ

# ಡೆಂಗೀ ಹಾಗೂ ಚಿಕೂನ್‌ಗುನ್ಯ

## ನಿಯಂತ್ರಣಕ್ಕೆ ಸಹಕರಿಸಿ




**ಸೊಳ್ಳೆಗಳ ಜೀವನ ಚಕ್ರ**




**ಡೆಂಗೀ ಹಾಗೂ ಚಿಕೂನ್‌ಗುನ್ಯ** ಜ್ವರಗಳು ಸೋಂಕು ಹೊಂದಿದ ಸೊಳ್ಳೆಯ ಕಡಿತದಿಂದ ಬರುತ್ತವೆ. ನಿಂತ ಸ್ವಚ್ಛ ನೀರಿನಲ್ಲಿ ಹುಟ್ಟುವ ಈ ಸೊಳ್ಳೆ ಸಾಧಾರಣವಾಗಿ ಹಗಲಿನಲ್ಲಿ ಕಚ್ಚುತ್ತದೆ.

**ಲಕ್ಷಣಗಳು :** ಹಠಾತ್ತನೆ ಬರುವ ಅಧಿಕ ಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ತೀವ್ರತರ ನೋವು, ಮೈ ನೋವು, ಕೀಲುಗಳಲ್ಲಿ ನೋವು, ವಾಕರಿಕೆ ಮತ್ತು ವಾಂತಿ.

**ವೈದ್ಯಕೀಯ ಉಪಚಾರ :** ರೋಗದ ಲಕ್ಷಣ ಕಂಡೊಡನೆ ಉಚಿತ ಚಿಕಿತ್ಸೆಗಾಗಿ ಹತ್ತಿರದ ಬಿಬಿಎಂಪಿ ಆಸ್ಪತ್ರೆಯನ್ನು ಸಂಪರ್ಕಿಸಿ, ವೈದ್ಯರಿಂದ ಪರೀಕ್ಷೆ ಮಾಡಿಸಿ ಸೂಕ್ತ ಚಿಕಿತ್ಸೆ ಪಡೆಯಿರಿ.

**ಮುನ್ನೆಚ್ಚರಿಕೆ :** ಸಿಮೆಂಟ್ ತೊಟ್ಟಿಗಳು, ಪ್ಲಾಸ್ಟಿಕ್ ತೊಟ್ಟಿಗಳು, ಬಕೆಟ್‌ಗಳು, ಡ್ರಂಗಳು, ಬ್ಯಾರಲ್‌ಗಳು, ಖಾಲಿ ಡಬ್ಬಗಳು, ಏರ್‌ಕೂಲರ್‌ಗಳು, ಗಡಿಗೆ, ಗಡಿಗೆ ತುಂಡುಗಳು, ತೆಂಗಿನ ಚಿಪ್ಪುಗಳು, ಹಳೆಯ/ಒಡೆದ ಟೈರುಗಳು, ಹೀಗೆ ಎಲ್ಲೆಲ್ಲಿ ಸ್ವಚ್ಛ ನೀರು ನಿಲ್ಲಬಹುದೋ ಅಲ್ಲೆಲ್ಲಾ ಈ ಸೊಳ್ಳೆಗಳು ಹೇರಳವಾಗಿ ಉತ್ಪತ್ತಿಯಾಗುತ್ತವೆ.

ಎಲ್ಲಾ ನೀರಿನ ತೊಟ್ಟಿಗಳು, ಡ್ರಂ, ಬ್ಯಾರಲ್‌ಗಳು, ಏರ್ ಕೂಲರ್ ಇತ್ಯಾದಿಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಸ್ವಚ್ಛಪಡಿಸಿ ಮತ್ತೆ ಭರ್ತಿ ಮಾಡಿಕೊಳ್ಳುವುದು/ ಮುಚ್ಚಳದಿಂದ ಮುಚ್ಚುವುದು, ಬಯಲಿನಲ್ಲಿರುವ ತ್ಯಾಜ್ಯ ವಸ್ತುಗಳಾದ ಒಡೆದ ಬಾಟಲಿ ಮುಂತಾದುವುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಎಚ್ಚರವಹಿಸುವುದು ಅಥವಾ ಸೂಕ್ತ ವಿಲೇವಾರಿ ಮಾಡುವುದು ಅತ್ಯಗತ್ಯ.

ಆರೋಗ್ಯ ಇಲಾಖೆಯಲ್ಲಿ ಹಮ್ಮಿಕೊಂಡ ಸೊಳ್ಳೆ ನಿಯಂತ್ರಣ ಕ್ರಮಗಳಿಗೆ ಸಹಕಾರ ನೀಡುವುದು.

ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ನಿರೋಧಕಗಳನ್ನು ಹಾಗೂ ಸೊಳ್ಳೆ ಪರದೆಯನ್ನು ಬಳಸುವುದು ಹಾಗೂ ಹಗಲಿನಲ್ಲಿ ಸೊಳ್ಳೆಗಳ ಕಚ್ಚುವಿಕೆಯಿಂದ ದೂರವಿರುವುದು.

**ಸೊಳ್ಳೆ ಉತ್ಪತ್ತಿ ತಾಣಗಳು**

- ಒಡೆದ ಟೈರ್‌ಗಳು
- ತೆಂಗಿನ ಚಿಪ್ಪುಗಳು
- ಸಿಮೆಂಟ್ ತೊಟ್ಟಿಗಳು
- ತೆರೆದ ಪ್ಲಾಸ್ಟಿಕ್ ತೊಟ್ಟಿಗಳು
- ಬಕೆಟ್‌ಗಳು
- ನೀರಿನ ತೊಟ್ಟಿಗಳು
- ಏರ್‌ಕೂಲರ್‌ಗಳು
- ಹೂವಿನ ಕುಂಡಗಳ ತಟ್ಟೆಗಳು ಇತ್ಯಾದಿಗಳು






## ಬಿಬಿಎಂಪಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ದೊರೆಯುತ್ತದೆ.

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :**

| | |
|---|---|
| ಆರೋಗ್ಯಾಧಿಕಾರಿ (ಪೂರ್ವ) | 080 22975850 |
| ಆರೋಗ್ಯಾಧಿಕಾರಿ (ದಕ್ಷಿಣ) | 080 22975750 |
| ಆರೋಗ್ಯಾಧಿಕಾರಿ (ಪಶ್ಚಿಮ) | 080 22975650 |
| ಆರೋಗ್ಯಾಧಿಕಾರಿ (ಮಹದೇವಪುರ) | 080 28510864 |
| ಆರೋಗ್ಯಾಧಿಕಾರಿ (ಬೊಮ್ಮನಹಳ್ಳಿ) | 080 25736702 |
| ಆರೋಗ್ಯಾಧಿಕಾರಿ (ರಾಜರಾಜೇಶ್ವರಿನಗರ) | 080 28600208 |
| ಆರೋಗ್ಯಾಧಿಕಾರಿ (ಯಲಹಂಕ) | 080 23626443 |
| ಆರೋಗ್ಯಾಧಿಕಾರಿ (ದಾಸರಹಳ್ಳಿ) | 080 28394909 |

ನಿಯಂತ್ರಣ ಕೊಠಡಿ
**080–22660000**

24x7 ಉಚಿತ ಸಹಾಯವಾಣಿ
**1533**

**ರಾಕೇಶ್ ಸಿಂಗ್,** ಭಾ.ಆ.ಸೇ
ಆಡಳಿತಗಾರರು, ಬಿಬಿಎಂಪಿ

**ತುಷಾರ್ ಗಿರಿ ನಾಥ್,** ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

**ಡಾ|| ಕೆ.ವಿ ತ್ರಿಲೋಕ್‌ಚಂದ್ರ,** ಭಾ.ಆ.ಸೇ
ವಿಶೇಷ ಆಯುಕ್ತರು (ಆರೋಗ್ಯ) ಬಿಬಿಎಂಪಿ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಶ್ರದ್ಧಾಂಜಲಿ



**ಶ್ರೀಮತಿ ಕಮಲಾಕ್ಷಿ ಹೆಗಡೆ,** ಹೆಚ್.ಡಬ್ಲ್ಯೂ.ಬಿ. (ಗೈ), ಗೈಡ್ ಕ್ಯಾಪ್ಟನ್ ಹಾಗೂ ನಿವೃತ್ತ ಕನ್ನಡ ಶಿಕ್ಷಕಿ, ಕ್ಲೂನಿ ಕಾನ್ವೆಂಟ್, ಮಲ್ಲೇಶ್ವರ ಇವರು ಫೆಬ್ರವರಿ 5, 2024 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 70 ವರ್ಷ ವಯಸ್ಸಾಗಿತ್ತು.

ಸ್ಕೌಟ್ಸ್-ಗೈಡ್ಸ್ ಚಟುವಟಿಕೆ ಹಾಗೂ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಇವರು ಮಲ್ಲೇಶ್ವರ ಸ್ಥಳೀಯ ಸಂಸ್ಥೆ ಸಹಾಯಕ ಜಿಲ್ಲಾ ಗೈಡ್ ಆಯುಕ್ತರಾಗಿದ್ದರು. ಇತ್ತೀಚೆಗೆ ರಾಜ್ಯ ಸಂಸ್ಥೆಯಿಂದ ಸಹಾಯಕ ರಾಜ್ಯ ಗೈಡ್ ಆಯುಕ್ತರಾಗಿ ನೇಮಕಗೊಂಡಿದ್ದರು. ಆಯ್ಕೆಯಾಗಿದ್ದರು. ರಾಜ್ಯ ಪ್ರಕಟಣಾ ಸಮಿತಿಯಲ್ಲಿ ಸದಸ್ಯರಾಗಿದ್ದರಲ್ಲದೆ ಸಂಸ್ಥೆಯಿಂದ ಪ್ರಕಟಿಸುತ್ತಿದ್ದ ಸ್ಕೌಟ್-ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದರು ಹಾಗೂ ತಿದ್ದುಪಡಿಗಳನ್ನು ಬಹಳ ಶ್ರದ್ಧೆಯಿಂದ ಮಾಡುತ್ತಿದ್ದರು. ಇವರು ಸುಮಾರು ನಾಲ್ಕು ದಶಕಗಳು ಸ್ಕೌಟ್ಸ್-ಗೈಡ್ ಸಂಸ್ಥೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆ ಸುರತ್ಕಲ್ ಎನ್.ಐ.ಟಿ.ಕೆ. ಆಂಗ್ಲ ಮಾಧ್ಯಮ ಶಾಲೆಯ ಗೈಡ್ ವಿದ್ಯಾರ್ಥಿನಿ **ಕುಮಾರಿ ಮಾನ್ವಿ ಕರ್ಕೇರ** ಇವರು ಫೆಬ್ರವರಿ 07 ರಂದು ರಸ್ತೆ ಅಪಘಾತದಲ್ಲಿ ಮರಣ ಹೊಂದಿರುತ್ತಾಳೆ. ಶ್ರೀ ಯಶವಂತ ಕರ್ಕೇರ ಮತ್ತು ಶ್ರೀಮತಿ ಆಶಾ ಇವರ ಮಗಳಾಗಿದ್ದು ಇವರು 7ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು ಜಿಲ್ಲೆ ಹಾಗೂ ಸ್ಥಳೀಯ ಸಂಸ್ಥೆಗಳು ನಡೆಸುತ್ತಿದ್ದ ಸ್ಕೌಟ್ಸ್-ಗೈಡ್ಸ್ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.



ರಾಜ್ಯ ಸಂಸ್ಥೆಯಲ್ಲಿ ಸಹಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎಲ್.ಟಿ. ಲೋಕೇಶ್ ಇವರ ಮಾತೃಶ್ರೀಯವರಾದ **ಶ್ರೀಮತಿ ರತ್ನಮ್ಮ** ರವರು ಫೆಬ್ರವರಿ 22 ರಂದು ಬೆಂಗಳೂರಿನಲ್ಲಿ ನಿಧನಹೊಂದಿದರು. ಇವರಿಗೆ 75 ವರ್ಷ ವಯಸ್ಸಾಗಿತ್ತು. ಇವರು ತಮ್ಮ ಪತಿ ಶ್ರೀ ಎಲ್.ಟಿ. ತಿಮ್ಮಪ್ಪ ಮತ್ತು ನಾಲ್ಕು ಗಂಡು ಮಕ್ಕಳು ಒಬ್ಬ ಮಗಳು ಹಾಗೂ ಅಪಾರ ಬಂಧು- ಮಿತ್ರರನ್ನು ಅಗಲಿದ್ದಾರೆ.



Shri J. KAMALAKAR, S/o Late D.R.J. Naidu passed away on 24th February 2024 at Bengaluru. He was 81 years old. He leaves behind his Wife Smt. Shoba Kamalakar, Daughter Nandini and Son Jaiwant.

Shri J.Kamalakar is the Son-in-law of Late Sri V.P.Deenadayalu Naidu, Former State Chief Commissioner and Former National Commissioner of Bharat Scouts and Guides, Karnataka and India. We join the Family Members in Praying for the Departed Soul.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# Glimpses of Kalyana Karnataka's First Jamborate






























Regd. as News Paper (Magazine) RNI No: 13348/1959. Postal Regd. No. KA/BGGPO/2580/2021-23
Licensed to Post Without Prepayment License No. PMG/BG/WPP-340/2021-2023.
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 40)

SHAHEEN
GROUP OF INSTITUTIONS

35 Years Of Excellence

# ADMISSIONS OPEN

## COURSES OFFERED

- **PUC (Science)**
  Integrated with NEET/JEE
- **NEET Long Term**
  Repeaters Batch
- **PUC (Arts)**
  Integrated with UPSC/CLAT
- **PUC (Commerce)**
  Integrated with CA Foundation
- **B.A, B.Sc, B.Com BBA & BCA**
  Integrated with UPSC
- **Pre Cum Mains UPSC for Graduates**
  One Year Exclusive UPSC Course
- **MSc (Maths)**

www.shaheengroup.org | Toll Free: 1800 121 6235
Head Office: Shaheen Nagar, BIDAR - 585403.



If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
shanthigruha@scout.org.in
www.bsgkarnataka.org

Published by: The Bharat Scouts & Guides, Karnataka, State Headquarters
Shanthi Gruha #39, Palace Road, Bengaluru - 560 001. Publisher & Editor: K. Gangappa Gowda
Printed by: L. Lingappa, M.D. Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Rd, Bengaluru 26